ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ

ಸಂಪುಟ 6 ಸಂಚಿಕೆ 32

೮ ಜೂನ್ ೧೯೫೮

★

ಪುಟ ೧೦ ಬೆಲೆ: ೧೩ ನಯೇ ಪೈಸೆ

★

ಭೂಸುಧಾರಣಾ ಕಾಯಿದೆ ಮುಂದೂಡಲು ಯತ್ನ

ರಾಜ್ಯದಲ್ಲಿ ಭೂಸುಧಾರಣಾ ಶಾಸನ ಜಾರಿಗೆ ಬರುವುದು ವಿಳಂಬವಾಗುವುದೆಂದೂ, ಆದ್ದರಿಂದ ಈಗಿರುದ ಗೇಣಿ ಶಾಸನವೇ ಮುಂದುವರಿಯಲು ವಿಶೇಷ ಆಜ್ಞೆಯನ್ನು ಹೊರಡಿಸಲಾಗುವುದೆಂದೂ ಮಾನ್ಯ ಮುಖ್ಯಮಂತ್ರಿ ಶ್ರೀ ಜತ್ತಿಯವರು ಹುಬ್ಬಳ್ಳಿಯಲ್ಲಿ ಘೋಷಿಸಿದ್ದಾರೆ.

ಬೆಂಗಳೂರಿನಲ್ಲಿ ಪತ್ರಿಕಾ ಪ್ರತಿನಿಧಿಗಳೊಂದಿಗೆ ಮಾತನಾಡುತ್ತ ಅವರು ರಾಜ್ಯದಲ್ಲಿ ಭೂಸುಧಾರಣಾ ಕಾಯಿದೆಯನ್ನು ಕುರಿತು ಮಾತನಾಡುತ್ತ "ಪ್ರದೇಶ ಕಾಂಗ್ರೆಸ್ ಹೊಸಅಧ್ಯಕ್ಷರ ಆಯ್ಕೆಯಾದನಂತರ ರಚಿಸಲ್ಪಡುವ ಕಾರ್ಯಕಾರಿ ಸಮಿತಿಯ ಅಭಿಪ್ರಾಯ ಪಡೆದು, ವಿಚಾರ ವಿನಿಮಯ ಮಾಡಿಕೊಂಡು ಭೂಸುಧಾರಣೆ ಶಾಸನಕ್ಕೆ ಕರಡು ಮಸೂದೆಯನ್ನು ತಯಾರಿಸಲಾಗುವುದು" ಎಂದು ತಿಳಿಸಿದ್ದಾರೆ.

ಪಂಡರಾಪುರದಲ್ಲಿ ಸರ್ವೋದಯ ಸಮ್ಮೇಳನದಲ್ಲಿ ಭಾಗವಹಿಸಿ ಹಿಂತಿರುಗಿದ ಜತ್ತಿಯವರು ಮೇಲಿನ ಹೇಳಿಕೆಗಳನ್ನು ಮಾಡಿದ್ದಾರೆ. ಇದರ ಅರ್ಥವೇನು ?

ಕಾಲತಳ್ಳಲು ಯತ್ನವೆ ?

ರಾಜ್ಯ ಭೂಸುಧಾರಣೆಯನ್ನು ಕುರಿತು ಸಮಗ್ರ ಶಾಸನ ತರುವ ಪ್ರಶ್ನೆ ನೂತನ ರಾಜ್ಯ ಅಸ್ತಿತ್ವಕ್ಕೆ ಬಂದಂದಿನಿಂದಲೂ ಇದೆ. ಚುನಾವಣೆಗಳನಂತರ ಅಧಿಕಾರಕ್ಕೆ ಬಂದ ನಿಜಲಿಂಗಪ್ಪನವರು ಜತ್ತಿಯವರ ಅಧ್ಯಕ್ಷತೆಯಲ್ಲಿಯೇ ಸ್ಥಾಪಿಸಿದ ಭೂಸುಧಾರಣಾ ಸಮಿತಿಯು ತನ್ನ ವರದಿಯನ್ನು ರಚಿಸಿ ಒಂಭತ್ತು ತಿಂಗಳಿಗೂ ಮೀರಿದೆ. ಸಮಿತಿಯ ವರದಿಯು ಶಾಸನ ಸಭೆಯಲ್ಲಿ ಮಂಡಿತವಾಗಿ, ಹತ್ತು ದಿನಗಳ ಕಾಲ ದೀರ್ಘವಾದ ಚರ್ಚೆ ನಡೆದಿದೆ. ಶಾಸನ ಸಭೆಯ ಹೊರಗೂ ಸಹ ಈ ಬಗ್ಗೆ ಚರ್ಚೆ ವಿಶಾಲವಾಗಿ ನಡೆದಿದೆ.

ಕಳೆದ ಶಾಸನಸಭಾ ಅಧಿವೇಶನದಲ್ಲಿ ಮಾಜಿ ಮುಖ್ಯ ಮಂತ್ರಿ ನಿಜಲಿಂಗಪ್ಪನವ

ಅಧಿಕಾರಕ್ಕೇ ಸಂಚಕಾರ ಬಂದುದರಿಂದ ಅವರು ಕೈಬಿಟ್ಟರೆಂದು ಹೇಳಬಹುದು. ನಿಜಲಿಂಗಪ್ಪನವರ ಮಂತ್ರಿಮಂಡಲ ಕರಡು ಶಾಸನ ತಯಾರಿಸಿತ್ತೇ ಇಲ್ಲವೇ ಎಂಬುದು ಪ್ರಶ್ನೆಯಾಗಿದೆ. ನಂಬಲರ್ಹವಾದ ಕಡೆಗಳಿಂದ ಬಂದ ಸುದ್ದಿಯ ಪ್ರಕಾರ ಮಸೂದೆಯ ಕರಡು ಸಿದ್ಧವಿದೆ ಎಂದು ತಿಳಿದು ಬರುತ್ತದೆ. ನಿಜಲಿಂಗಪ್ಪನವರು ಮಸೂದೆಯನ್ನು ಶಾಸನ ಸಭೆಯ ಮುಂದೆ ತರದಿದ್ದುದಕ್ಕೆ ಕಾರಣ ಕಾಂಗ್ರೆಸ್ಸಿನಲ್ಲಿರುವ ಪ್ರಬಲವಾದ ವ್ಯಕ್ತಿಗಳು ಅದನ್ನು ವಿರೋಧಿಸಿದುದೇ ಕಾರಣವೆಂದು ನಿಸ್ಸಂದೇಹವಾಗಿ ಹೇಳಬಹುದು. ನಿಜಲಿಂಗಪ್ಪನವರೂ ಆದಷ್ಟುಕಾಲ ತಳ್ಳಲು ಯತ್ನಿಸಿ

ಲಿನ ಹಿನ್ನೆಲೆಯಲ್ಲಿ ನೋಡಿದರೆ, ಆದಷ್ಟು ಕಾಲ ತಳ್ಳಲು ಪ್ರಯತ್ನಿಸಲಾಗುವುದು ಎಂಬುದು ಶತಸ್ಸಿದ್ಧವಾಗುತ್ತದೆ. ಜತ್ತಿಯವರ ಮಂತ್ರಿಮಂಡಲದಲ್ಲಿಯೇ ತೀವ್ರವಾಗಿ ಭೂಸುಧಾರಣೆಗಳನ್ನು ವಿರೋಧಿಸುವವರು ಇದ್ದಾರೆಂಬುದನ್ನು ನಾವು ಮರೆಯುವಂತಿಲ್ಲ.

ಒಮ್ಮೆ ಶಾಸನ ಸಭೆಯಲ್ಲಿ ಚರ್ಚೆಯಾಗಿರುವಾಗ ಮಸೂದೆಯನ್ನು ತಯಾರಿಸಿ, ಆದಷ್ಟು ಜಾಗ್ರತೆಯಾಗಿ ಶಾಸನ ಸಭೆಯ ಮುಂದೆ ತರುವುದು ಸರಕಾರದ ಕರ್ತವ್ಯವಾಗಿದೆ. ಆದರೆ ಜತ್ತಿಯವರು ಇಂದು ಹೊಸ ರಾಗವೊಂದನ್ನು ಹಾಡಿದ್ದಾರೆ. ಪ್ರದೇಶ ಕಾಂಗ್ರೆಸ್ ಸಮಿತಿಯ ಚುನಾವ

ಭೂಮಾಲಿಕರ ಒತ್ತಾಯಕ್ಕೆ ಮಣಿದ ಜತ್ತಿಯವರ ಕುಂಟುನೆಪ ?

ರು ಜತ್ತಿ ಸಮಿತಿಯ ಶಿಫಾರಸಿನ ಆಧಾರದ ಮೇಲೆ ಕರಡು ಮಸೂದೆಯನ್ನು ಶಾಸನ ಸಭೆಯ ಮುಂದೆ ಮಂಡಿಸುವುದಾಗಿ ತಿಳಿಸಿದ್ದರು. ಅಧಿವೇಶನ ಮುಕ್ತಾಯವಾಗುತಿದ್ದಂತೆಯೇ ಕಾಂಗ್ರೆಸ್ ಪಕ್ಷದಲ್ಲಿನ ಒಳಜಗಳಗಳು ಮುಗಿಲುಮುಟ್ಟಿ ಅವರ

ಯಶಸ್ವಿಯಾದರು. ಈಗ ಜತ್ತಿಯವ ಕಾಲ ಬಂದಿದೆ.

ಜತ್ತಿಯವರ ಮೀನ ಮೇಷ

ತಾವೇ ಸ್ವತಃ ತಯಾರಿಸಿದ ವರದಿಯ ಬಗ್ಗೆ ಕಾಂಗ್ರೆಸ್ಸಿಗರಲ್ಲೂ, ಭೂಮಾಲಿಕರಲ್ಲೂ ಎದ್ದಗೊಂದಲ, ಆದ ಚರ್ಚೆ, ಬಂದಿದ್ದ ನೂರಾರು ಭೂಮಾಲಿಕರ ಸಂಘಗಳ ಮನವಿಗಳು ಇವೆಲ್ಲ ಜತ್ತಿಯವರಿಗೆ ಚೆನ್ನಾಗಿ ತಿಳಿದಿವೆ. ಅಧಿಕಾರಕ್ಕೆ ಬಂದಿರುವ ಅವರಿಗೆ ಈಗ ಭೂಸುಧಾರಣಾ ಕಾಯಿದೆ ತರುವುದು ಸಮಸ್ಯೆಯಾಗಿ ಬಂದಿದೆ. ಜತ್ತಿಯವರು ಈಗಾಗಲೇ ಮೀನ ಮೇಷ ಎಣಿಸಲು ಆರಂಭಿಸಿದ್ದಾರೆ. ಶಾಸನ ಬರುವುದು ಇನ್ನೂ ತಡವಾಗಬಹುದು ಎಂದು ಮುನ್ಸೂಚನೆಯಿತ್ತಿದ್ದಾರೆ. ಮೇ

ಣೆಯಾಗಿ, ಹೊಸ ಅಧ್ಯಕ್ಷರು ಮತ್ತು ಸಮಿತಿಯೊಂದಿಗೆ ಸಮಾಲೋಚನೆ ನಡೆಸಿ ನಂತರ ಮಸೂದೆಯನ್ನು ತಯಾರಿಸಲಾಗುವುದೆಂದು ತಿಳಿಸಿದ್ದಾರೆ. ಮಸೂದೆ ಸಿದ್ಧಗೊಳಿಸುವುದಕ್ಕೂ ಕಾಂಗ್ರೆಸ್ ಸಮಿತಿಗೂ ಸಂಬಂಧವೇನು ಎಂಬುದೀಗ ಅರ್ಥವಾಗದಿದೆ. ಇದು ಪ್ರಜಾಪ್ರಭುತ್ವದ ಎಲ್ಲ ನಿಯಮಗಳಿಗೂ ವಿರೋಧವಾದುದಾಗಿದೆ. ವಿಷಯ ಶಾಸನ ಸಭೆಯಲ್ಲಿ ಚರ್ಚೆಯಾಗಿದ್ದರೂ ಸಹ, ಈಗ ಕಾಂಗ್ರೆಸ್ ಸಮಿತಿಯಲ್ಲಿ ಅಭಿಪ್ರಾಯ ಪಡೆಯಬೇಕೆಂಬುದು ವಿಚಿತ್ರವಾಗಿ ಭೂಸುಧಾರಣಾ ಕಾಯಿದೆಯು ಕೇವಲ ಒಂದು ಪಕ್ಷದ ಸ್ವತ್ತಲ್ಲ, ಅದು ಇಡೀ ಜನತೆಗೆ ಅನ್ವಯಿಸುವಂಥ ಕಾಯಿದೆ ಎಂಬಂಶವನ್ನು ಜತ್ತಿಯವರ ನೆನಪಿಗೆ ತರಬೇಕಾಗಿದೆ.

ಕಾಂಗ್ರೆಸ್ ರಾಜ್ಯದಲ್ಲಿ ಸಾಮಾಜಿಕ ಅನ್ಯಾಯಗಳ ಅತಿರೇಕತೆ, ಪರಿಣಾಮ - ಆತ್ಮಹತ್ಯೆಗಳು !

ಸಾಮ್ಯವಾದಿ ಸಮಾಜ ವ್ಯವಸ್ಥೆಯೇ ತನ್ನ ಗುರಿ ಎಂದು ಸಾರುತ್ತಿರುವ ಕಾಂಗ್ರೆಸ್ ರಾಜ್ಯದ ಹನ್ನೊಂದು ವರ್ಷಗಳ ರಾಜ್ಯ ಕಾರಭಾರದಲ್ಲಿ ಸಾಮಾಜಿಕ ಅನ್ಯಾಯಗಳು ಅತಿರೇಕತೆಯ ಮಟ್ಟವನ್ನು ಮುಟ್ಟಿ ಮೇಲೇರುತ್ತಿವೆ. ಹಸಿವಿನಿಂದ ಜನ ಹುಳುಗಳಂತೆ ಸಾಯುತ್ತಲೇ ಇರುವರು. ಕಾಂಗ್ರೆಸ್ ಕಾರುಭಾರಿಗಳೇ ಇದನ್ನು ಒಪ್ಪಿಕೊಳ್ಳುತ್ತಿದ್ದಾರೆ.

ಪ್ರಧಾನಿ ನೆಹ್ರೂರವರ ಪತ್ರಿಕಾ ಗೋಷ್ಠಿಯಲ್ಲಿ ಅವರನ್ನು ಜಯಪುರದಲ್ಲಿ ಢೇಬರರು ಮಾಡಿದ ಭಾಷಣದ ಬಗ್ಗೆ ಪ್ರಶ್ನಿಸಲಾಯಿತು. "ಭಾರತೀಯರ ಜೀವನದಲ್ಲಿ ದಿನ ದಿನಕ್ಕೂ ಹಸಿವಿನಿಂದ ಆತ್ಮಹತ್ಯೆಗಳ ಸಂಖ್ಯೆ ಹೆಚ್ಚುತ್ತಿದೆ. ಜನರು ಹಾವು, ಇಲಿ ಮುಂತಾದವುಗಳನ್ನು ತಿಂದು ಬದುಕುತ್ತಿದ್ದಾರೆ" ಎಂದು ಢೇಬರರು ಹೇಳಿದ್ದರು.

ಪ್ರಧಾನಿ ಮಾತನಾಡುತ್ತ "ಢೇಬರರು ಏನು ಹೇಳಿದರೋ ನನಗೆ ಗೊತ್ತಿಲ್ಲ. ಆದರೆ, ಕಾಂಗ್ರೆಸ್ ಅಧ್ಯಕ್ಷರು ಇನ್ನೊಂದು ದಿನ ಮಾತನಾಡುತ್ತ ತಮ್ಮ ಸೌರಾಷ್ಟ್ರದಲ್ಲೇ ದುಷ್ಟ ಸಾಮಾಜಿಕ ಸ್ಥಿತಿಯಿಂದ ಮಹಿಳೆಯೊಬ್ಬಾಕೆ ಆತ್ಮಹತ್ಯೆ ಮಾಡಿಕೊಂಡಳು, ಹಸಿವಿನಿಂದಷ್ಟೇ ಆತ್ಮಹತ್ಯೆಗಳು ನಡೆಯುತ್ತಿಲ್ಲ, ಸಾಮಾಜಿಕ ಒತ್ತಡಗಳಿಂದಲೂ ನಡೆಯುತ್ತಿವೆ. ರಾವ್ ಸಮಿತಿ ಕೂಡ ಇದನ್ನು ತನ್ನ ವರದಿಯಲ್ಲಿ ಹೇಳಿದೆ." ಎಂದರು !

"ಭಾರತದ ಹಲವು ಭಾಗದಲ್ಲಿ, ಮಧ್ಯ ಪ್ರದೇಶದ ಬಾಸ್ತಾರ್ ಜಿಲ್ಲೆಯಲ್ಲಿ ಆಹಾರಾಭಾವವಿದ್ದರೂ ಪ್ರಥಮ ಬಾರಿಯಾಗಿ ಇದೀಗ ಆಹಾರ ಸರಬರಾಜನ್ನು ಮಾಡಲು ಯತ್ನಿಸಲಾಯಿತೆಂದು ಹೇಳಲು ನನಗೆ ದುಃಖವೆನಿಸುತ್ತದೆ. ಇದ ಕ್ಕಿಂತಲೂ ಬೇಡದಲು ಯಾವ ವ್ಯವಸ್ಥೆಯನ್ನು ಮಾಡಲಿಲ್ಲ." ಎಂದೂ ಪ್ರಧಾನಿ ತಿಳಿಸಿದರು.

ಕೇರಳ ಶಿಕ್ಷಣ ಮಸೂದೆಯನ್ನು ವಿರೋಧಿಸಿದ ಪ್ರತಿಗಾಮಿಗಳ ಯಶಸ್ವೀ ಹಿನ್ನಡೆ !

ಕೇರಳದ ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಿಕ್ಕಾದ ರಾಜಕೀಯ ಪಕ್ಷದ ಹೇಡಿಗಳು ಕೇರಳವನ್ನು ಸಮಸ್ಯೆಯ ಶಿಶುವೆಂದು ಕರೆದರು. ಧ್ಯೇಯನಿಷ್ಠ ಧೀರರು ಆಡಳಿತವನ್ನು ವಹಿಸಿಕೊಂಡ ಒಂದು ವರುಷದ ಕಾಲಾವಧಿಯಲ್ಲೇ ರಾಜ್ಯಾಂಗದ ಚೌಕಟ್ಟಿನಲ್ಲಿದ್ದುಕೊಂಡೇ ಕ್ರಾಂತಿಕಾರಿ ಪರಿವರ್ತನೆಗಳನ್ನು ತಂದು ಜನರ ವಿಶ್ವಾಸಕ್ಕೆ ಪಾತ್ರರಾಗುತ್ತಿದ್ದಾರೆ. ಕೇರಳ ಅವರ ಪಾಲಿಗೆ ಸಮಸ್ಯೆಯ ಶಿಶುವಲ್ಲ. ಶಿಶುವಿನಂತೆ ಅರಚುತ್ತಿರುವ ಈ ರಾಜಕೀಯ ಬಲಿತ ಕೂಸುಗಳು ಸಮಸ್ಯೆಯನ್ನು ತೊಡಕುಗಳನ್ನು ತಂದೊಡ್ಡುತ್ತಿದ್ದಾರೆ.

ಎಂಥ ವಿರೋಧಗಳಲ್ಲೂ, ಪಿತೂರಿ, ಒಳಸಂಚುಗಳಲ್ಲೂ ಕಮ್ಯೂನಿಸ್ಟ್ ಸರಕಾರ ಎದೆಗಾರಿಕೆಯಿಂದ,ಅಲ್ಲಿ ಮುನ್ನಡೆದಿದೆ. ಅದಕ್ಕೊಂದು ಒಳ್ಳೆಯ ಸಾಕ್ಷಿ ಕೇರಳದ ಶಿಕ್ಷಣ ಮಸೂದೆ

ಕ್ರಿಶ್ಚಿಯನ್ ಧರ್ಮಗುರುಗಳೂ, ತಾವೂ ಮಾಡಲಾರದ, ಇನ್ನೊಬ್ಬರಿಗೆ ಮಾಡಗೊಡದ Dog in the manger policy ಯ ರಾಜಕೀಯ ಪಕ್ಷಗಳವರೂ ಕೇರಳದ ಶಿಕ್ಷಣ ಮಸೂದೆಯನ್ನು ಹು

(ಕೊನೇ ಪುಟ ನೋಡಿ)

ಅಂತರರಾಷ್ಟ್ರೀಯ

ಜೂನ್ 2 ರಂದು ಫ್ರಾನ್ಸಿನಲ್ಲಿ ಜ। ಡಿಗಾಲೆ ಕೈಗೆ ಸರ್ವಾಧಿಕಾರ ಅರ್ಪಿಸಲ್ಪಟ್ಟಿತು. ಪಾರ್ಲಿಮೆಂಟ್ ತನ್ನನ್ನು ತಾನೆ ಬರಖಾಸ್ತು ಮಾಡಿಕೊಂಡಿತು, ಆತ್ಮಹತ್ಯೆ ಮಾಡಿಕೊಂಡಿತು. ಪ್ರತ್ಯಕ್ಷ ಪ್ರತಿಗಾಮಿಗಳಾದ ಬಲಪಕ್ಷಗಳು ಮಾತ್ರವಲ್ಲ, ಸಮಾಜವಾದಿ ಕ್ರಾಂತಿಕಾರಿಗಳೆನಿಸಿಕೊಳ್ಳುವ ಸೋಷಲಿಸ್ಟ್ ಪಾರ್ಟಿ ಕೂಡ ಸೇರಿ ಪ್ರಜಾಪ್ರಭುತ್ವವನ್ನು ಕೊಲೆಗೈದವು.

ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಅಗ್ರಲೇಖನ ಹೇಳುವಂತೆ "ಮಾನವನ ಹಕ್ಕುಗಳು ಮೊತ್ತಮೊದಲು ಘೋಷಿಸಲ್ಪಟ್ಟಿದ್ದ ಫ್ರಾನ್ಸಿನಲ್ಲಿ, ಅಳಿಯುತ್ತಿರುವ ಪ್ರಜಾಪ್ರಭುತ್ವದ ಸುಟ್ಟ ಬೂದಿಯೊಳಗಿಂದ ಎಂಬಂತೆ, ಒಬ್ಬ ಸರ್ವಾಧಿಕಾರಿ ಎದ್ದು ಬಂದಿದ್ದಾನೆ." ಫ್ರಾನ್ಸಿನಲ್ಲಿ ಉಂಟಾಗಿರುವ ಫ್ಯಾಸಿಸ್ಟ್ ಸರ್ವಾಧಿಕಾರದ ಈ ಹೆಡೆ ಎತ್ತುವಿಕೆ ಯೂರೋಪಿನಲ್ಲಿ ಮಾತ್ರವಲ್ಲ ಜಗತ್ತಿನಲ್ಲೇ ಶಾಂತಿ, ಸ್ವಾತಂತ್ರ್ಯ ಹಾಗೂ ಪ್ರಗತಿಯ ಮೇಲೆ ಕವಿದಿರುವ ಕಾರ್ಮೋಡವಾಗಿದೆ.

ಡಿಗಾಲೆಯ ಪಿತೂರಿಯ ಬಿರುಗಾಳಿ ಬೀಸಲು ಆರಂಭವಾದಾಗಿನಿಂದ ಫ್ರೆಂಚ್ ಕಮ್ಯೂನಿಸ್ಟ್ ಪಾರ್ಟಿಯು ಪ್ರಜಾಪ್ರಭುತ್ವವಾದಿಗಳನ್ನು ಎಚ್ಚರಿಸುತ್ತ ಬಂದಿದೆ. ಅಲ್ಜೀರಿಯದಲ್ಲೂ ಅಜಾಸ್ಸಿಯೋದಲ್ಲೂ ಇದ್ದ ಫ್ರೆಂಚ್ ಸೈನ್ಯಾಧಿಕಾರಿಗಳು ಡಿಗಾಲೆಯ ಪರವಾಗಿ ದಂಗೆ ಎದ್ದಾಗಲೆ ಫ್ರೆಂಚ್ ಕಮ್ಯೂನಿಸ್ಟ್ ಪಾರ್ಟಿಯು ಸೋಷಲಿಸ್ಟ್ ಪಾರ್ಟಿ ಮತ್ತಿತರ ಎಲ್ಲ ಪ್ರಜಾಪ್ರಭುತ್ವವಾದಿ ಪಕ್ಷಗಳಿಗೆ ಕಳಕಳಿಯಿಂದ ವಿನಂತಿ ಮಾಡಿಕೊಂಡಿತ್ತು: "ಅಪಾಯವು ನಮ್ಮ ಬಾಗಿಲಲ್ಲಿರುವಾಗ ನೀವು ಪ್ರಜಾಪ್ರಭುತ್ವ ಶಕ್ತಿಗಳ ಅನೈಕ್ಯತೆಯನ್ನು ಉಳಿಸಿಕೊಂಡಿರಲು ಹಠ ಸಾಧಿಸುವಿರಾ? ದಂಗೆಗಾರರ ವಿರೋಧ ಕ್ರಮವಹಿಸಲು ಪ್ರಜಾಪ್ರಭುತ್ವ ಶಕ್ತಿಗಳೆಲ್ಲ ಒಂದಾಗೋಣ." ಈ ವಿನಂತಿಗೆ ಸೋಷಲಿಸ್ಟ್ ಮತ್ತಿತರ ಪಕ್ಷಗಳು ಕಿವಿಗೊಡಲಿಲ್ಲ.

ಸರ್ವಾಧಿಕಾರಿಗಳ ಪರಂಪರೆ

ಕ್ರಾಮ್‌ವೆಲ್‌ನಿಂದ ನೆಪೋಲಿಯನ್‌ನ ವರೆಗೆ, ಹಿಟ್ಲರ್ ಮತ್ತು ಮುಸೊಲಿನಿಯಿಂದ ಫ್ರಾಂಕೊನವರೆಗೆ ಎಲ್ಲ ಸರ್ವಾಧಿಕಾರಿಗಳೂ ಕೈಗೊಂಡಿರುವ ತಂತ್ರವೊಂದಿದೆ. ಬಲಹೀನ ಹಾಗೂ ಪ್ರತಿಗಾಮಿ ರಾಜಕೀಯ ಪಕ್ಷಗಳನ್ನೂ ರಾಜಕಾರಣಗಳನ್ನೂ ಭಯೋತ್ಪಾದನೆಯಿಂದ ಬೆದರಿಸಿ ತಮ್ಮ ದಾರಿಗೆ ತರುವುದು; ಘಟನೆಯ ಯಾವುದಾದರೊಂದು ಜಾರುಬಂಡಿಯ ಮೂಲಕ ನುಸುಳಿ ಗದ್ದುಗೆಗೆ ಏರುವುದು; ಅಧಿಕಾರಕ್ಕೆ ಬಂದಮೇಲೆ ಪಾರ್ಲಿಮೆಂಟು, ಘಟನೆ, ಕಾಯಿದೆ ಮತ್ತು ಕ್ರಮ ಮೊದಲಾದವುಗಳನ್ನೆಲ್ಲ ಕಸದ ಬುಟ್ಟಿಗೆ ಸರಿಸಿ ಬಲತ್ಕಾರದಿಂದ ಸರ್ವಾಧಿಕಾರ ಚಲಾಯಿಸುವುದು. ಡಿಗಾಲೆ ಅನುಸರಿಸುತ್ತಿರುವುದೂ ಇದೇ ದಾರಿಯನ್ನು.

ಕಳೆದ ಕೆಲವು ತಿಂಗಳುಗಳಿಂದ ಡಿಗಾಲೆ ಗುಪ್ತವಾಗಿ ಅಧಿಕಾರ ವಶಪಡಿಸುವ ಪಿತೂರಿ ನಡೆಸುತ್ತಿದ್ದ. ಅಲ್ಜೀರಿಯಾದಲ್ಲಿ ಫ್ರೆಂಚ್ ಸೈನ್ಯಾಧಿಕಾರಿಗಳ ದಂಗೆ ಈ ಪಿತೂರಿಯ ಒಂದು ಅಂಶವಾಗಿದೆ. ಡಿಗಾಲೆ ಪ್ರತ್ಯಕ್ಷವಾಗಿ ತನ್ನ ನಿಜರೂಪ ತೋರಿಸಲು ತಯಾರಾದಾಗ ಮಾಜಿ ಪ್ರಧಾನಿ ಫ್ಲಿಮ್ಲಿನ್ ಆತನಿಗೆ ಅದಕ್ಕೆ ಅವಕಾಶವನ್ನೂ ಒದಗಿಸಿಕೊಡದಿರಲಿಲ್ಲ. ಡಿಗಾಲೆಯ ಪತ್ರಿಕಾ ಸಮ್ಮೇಳನಕ್ಕೆ ಅವಕಾಶ ಕೊಡುವುದರ ಜೊತೆಯಲ್ಲೆ ಕಾರ್ಮಿಕರ ಫಾಸಿಸ್ಟ್ ವಿರೋಧ ಮತ ಪ್ರದರ್ಶನಗಳನ್ನು ಫ್ಲಿಮ್ಲಿನ್ ಸರಕಾರ ನಿರೋಧಿಸಿತು. ಪ್ರಜಾರಾಜ್ಯದ ವಿರೋಧ ದಂಗೆಮಾಡಿದ ಸೈನ್ಯಾಧಿಕಾರಿಗಳ ಮೇಲೆ ಕ್ರಮವಹಿಸದೆ, ಪ್ರಜಾಪ್ರಭುತ್ವವನ್ನು ಉಳಿಸಲು ಹೋರಾಡುವ ಕಾರ್ಮಿಕರ ವರ್ಗದ ಮೇಲೂ ಕಮ್ಯೂನಿಸ್ಟ್ ಪಾರ್ಟಿಯ ಮೇಲೂ ದಬ್ಬಾಳಿಕೆ ನಡೆಸಲಾಯಿತು.

'ಪ್ರಜಾಪ್ರಭುತ್ವದ ಮಾತೃಭೂಮಿ'ಯಲ್ಲಿ ಇಂದು ಪ್ರಜಾಪ್ರಭುತ್ವದ ಕಗ್ಗೊಲೆ

ಫ್ರಾನ್ಸಿನಲ್ಲಿ ಫಾಸಿಸ್ಟ್ ಸರ್ವಾಧಿಕಾರಿಯ ಪುನರಾವತಾರ!

ಡಿಗಾಲೆಯ ಕೊನೆಯ ಅವಸ್ಥೆ, ಎಲ್ಲಾ ಸರ್ವಾಧಿಕಾರಿಗಳ ಅವಸ್ಥೆಯೇ!

ಅಮೇರಿಕದ ನಿಲುಮೆ

ಫ್ರೆಂಚ್ ಕಾರ್ಮಿಕವರ್ಗ ಮತ್ತು ಅದರ ರಾಜಕೀಯ ಪಕ್ಷವಾದ ಕಮ್ಯೂನಿಸ್ಟ್ ಪಾರ್ಟಿ ಡಿಗಾಲೆ ಅಧಿಕಾರಕ್ಕೆ ಬರದಂತೆ ತಡೆಯಲು ಸರ್ವಶಕ್ತಿಯಿಂದ ಹೋರಾಡುತ್ತಿವೆ. ಐಕ್ಯತೆಯಿಂದ "ಈ ರಾಷ್ಟ್ರೀಯ ಬಿಕ್ಕಟ್ಟಿನ ಸಂದರ್ಭದಲ್ಲಿ ಪ್ರಜಾರಾಜ್ಯದಲ್ಲಿ ನಂಬಿಕೆ ಇರುವವರೆಲ್ಲ ಒಂದಾಗಬೇಕು." ಎಂದು ಕಮ್ಯೂನಿಸ್ಟ್ ಪಾರ್ಟಿ ಕರೆಯಿತ್ತಿದೆ.

ಆದರೆ ಅಂಥ ಐಕ್ಯತೆಯಲ್ಲಿ ಸರ್ವನಾಶವನ್ನು ಕಾಣುವ ಶಕ್ತಿಗಳ ಫ್ರಾನ್ಸನ್ನು ಡಿಗಾಲೆಗೆ ಬಲಿಯಿತ್ತರು. ಅಮೇರಿಕದ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ ಮೇ 17 ರ ಅಗ್ರ ಲೇಖನದಲ್ಲಿ ಫ್ರಾನ್ಸಿನ ಸಾಮ್ರಾಜ್ಯಶಾಹಿ ಕಿಂಕರರಿಗೆ ಹೀಗೆಂದು ಉಪದೇಶ ಮಾಡಿತು: "ಇಂಥ ಪರಿಸ್ಥಿತಿಯಲ್ಲಿ ಡಿಗಾಲೆಗೆ ವಿರೋಧವಿರುವವರೆಲ್ಲರೂ ಕಮ್ಯೂನಿಸ್ಟರೊಡನೆ ಒಂದು ಐಕ್ಯರಂಗ ಏರ್ಪಡಿಸುವ ಅಪಾಯವಿದೆ. ಅದೇನೂ ಸಣ್ಣ ಗಂಡಾಂತರವಲ್ಲ. ಅದಕ್ಕೋಸ್ಕರ ಕಮ್ಯೂನಿಸ್ಟರು ಹೊಂಚು ಹಾಕುತ್ತಿದ್ದಾರೆ ಅಂಥ ಘಟನೆ ನಡೆಯಬಾರದೆಂದು 'ಸ್ವತಂತ್ರ ಜಗತ್ತು' (ಅಂದರೆ ಸಾಮ್ರಾಜ್ಯಶಾಹಿಗಳು) ಆಶಿಸಬೇಕು. ಹಾಗೆ ಆಗದಂತೆ 'ಫ್ರೆಂಚ್ ಪ್ರಜಾಪ್ರಭುತ್ವವು' (ಅಂದರೆ ಪ್ರಜಾಪ್ರಭುತ್ವಕ್ಕೆ ದ್ರೋಹ ಮಾಡುವಂಥವರು) ಗಟ್ಟಿಯಾಗಿ ನಿಲ್ಲುವವೆಂದು ಬಯಸಬೇಕು." ಅಮೇರಿಕನ್ ಸಾಮ್ರಾಜ್ಯಶಾಹಿಯ ಆಶೆ ಈಡೇರಿತು, ಬಯಕೆ ಪೂರ್ತಿಯಾಯಿತು.

ಇದು ನಡೆಯಲಾರದು

ಅಮೇರಿಕನ್ ಸಾಮ್ರಾಜ್ಯಶಾಹಿಯ ರೊಟ್ಟಿ ತುಪ್ಪಕ್ಕೆ ಬಿತ್ತು, ಡಿಗಾಲೆ ಸರ್ವಾಧಿಕಾರಿಯಾದ, ಫ್ಯಾಸಿಸಮಿನ ಕಾರ್ಮೋಡ ಎದ್ದಿತು. ಆದರೆ ಇದು ನಡೆಯಲಾರದು. ಜನತೆ ಇದನ್ನು ನಡೆಸಿಗೊಡಲಾರದು.

ಪ್ರಜಾರಾಜ್ಯದ ರಕ್ಷಣೆಗೆ ಫ್ರೆಂಚ್ ಜನತೆ ಹೋರಾಡುವುದು. ಫ್ರೆಂಚ್ ಕಮ್ಯೂನಿಸ್ಟ್ ಪಾರ್ಟಿಯ ಕರೆಯಂತೆ ಸಂಘಟಿತ ಕಾರ್ಮಿಕ ವರ್ಗ ಮುಷ್ಕರ ಮತ್ತು ಮತಪ್ರದರ್ಶನ ಆರಂಭಿಸಿದೆ. ವಸಾಹತು ಶಾಹಿಯ ವಿರೋಧವಾಗಿ ಅಲ್ಜೀರಿಯದ ಜನತೆ ಹೋರಾಡುತ್ತಿದೆ. ಫ್ಯಾಸಿಸಮಿನ ವಿರೋಧವಾಗಿ ನಡೆಯುವ ಈ ಹೋರಾಟಕ್ಕೆ ಜಗತ್ತಿನ ಪ್ರಜಾಪ್ರಭುತ್ವವಾದಿಗಳೆಲ್ಲರ ಸಹಾನುಭೂತಿಯಿದೆ, ಬೆಂಬಲವಿದೆ. ಹಿಂದಿನ ಸರ್ವಾಧಿಕಾರಿಗಳು ಹೋದ ದಾರಿ ಡಿಗಾಲೆ ಕೂಡ–ಇಂದಲ್ಲವಾದರೆ ನಾಳೆ–ಹೋಗಲೇಬೇಕು.

ಸಮಾಜವಾದೀ ರಾಷ್ಟ್ರಗಳ ಅಭೇದ್ಯ ಸ್ನೇಹ

ಸೈನಿಕ ಸಂಖ್ಯೆಯನ್ನು ಕಡಮೆಗೊಳಿಸುವಲ್ಲಿ ಸಮಾಜವಾದೀ ರಾಷ್ಟ್ರಗಳ ದಿಟ್ಟ ಹೆಜ್ಜೆ ಜಗತ್ತಿಗೊಂದು ಮಾದರಿ

ಸ್ನೇಹ, ಸಹಕಾರ ಮತ್ತು ಪರಸ್ಪರ ಸಹಾಯದ ವಾರ್ಸಾ ಒಡಂಬಡಿಕೆಗೆ ಸೇರಿದ ರಾಜ್ಯಗಳ ರಾಜಕೀಯ ಸಲಹಾ ಸಮಿತಿಯ ಸಭೆಯ ಕುರಿತು ಹೊರಡಿಸಲಾದ ಪ್ರಕಟನೆಯನ್ನು ಈ ಕೆಳಗೆ ಕೊಡಲಾಗಿದೆ. ಈ ಸಮಿತಿಯ ಸಭೆಯು ೧೯೫೮ರ ಮೇ ದಿನಾಂಕ ೨೪ರಂದು ಮಾಸ್ಕೋ ನಗರದಲ್ಲಿ ನಡೆಯಿತು.

ಆಲ್ಬೇನಿಯಾ, ಬಲ್ಗೇರಿಯಾ, ಹಂಗೆರಿ, ಜರ್ಮನ್ ಜನಾಧಿಪತ್ಯವಾದೀ ಗಣತಂತ್ರ, ಪೋಲೆಂಡ್, ರೂಮಾನಿಯಾ, ಸೋವಿಯೆತ್ ಒಕ್ಕೂಟ, ಚೆಕೊಸ್ಲೊವಾಕಿಯಾ—ಈ ದೇಶಗಳ ಪ್ರಧಾನ ಮಂತ್ರಿಗಳೂ, ಕಮ್ಯೂನಿಸ್ಟ್-ಕಾರ್ಮಿಕ ಪಕ್ಷಗಳ ಪ್ರಧಾನ ಕಾರ್ಯದರ್ಶಿಗಳೂ, ವಿದೇಶಾಂಗ ಮಂತ್ರಿಗಳೂ, ಮುಖ್ಯ ಸೈನ್ಯಾಧಿಕಾರಿಗಳೂ ಈ ಸಭೆಯಲ್ಲಿ ಹಾಜರಿದ್ದರು. ಅಸ್ವಸ್ಥತೆಯ ಕಾರಣದಿಂದ ಹಂಗರಿಯ ಪ್ರಧಾನ ಮಂತ್ರಿಯವರು ಬಂದಿರಲಿಲ್ಲ. ಚೀಣದ ಜನತೆಯ ಗಣತಂತ್ರದಿಂದಲೂ ಪ್ರತಿನಿಧಿಗಳು ಸಮಾಕ್ಷಕರಾಗಿ ಬಂದಿದ್ದರು.

ಬಲ್ಗೇರಿಯಾದ ಜನತೆಯ ಗಣತಂತ್ರದ ಮಂತ್ರಿಮಂಡಲಾಧ್ಯಕ್ಷರಾದ ಅಂತನ್ ಯುಗೋವ್‌ರವರು ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿದ್ದರು.

ವಾರ್ಸಾ ಒಡಂಬಡಿಕೆಯ ೩ನೆಯ ಕಲಮಿಗನುಗುಣವಾಗಿ, ಇದಕ್ಕೆ ಸೇರಿದ ರಾಜ್ಯಗಳ ಹಿತಗಳಿಗನ್ವಯಿಸುವ ಪ್ರಮುಖ ಅಂತರರಾಷ್ಟ್ರೀಯ ಸಮಸ್ಯೆಗಳೆಲ್ಲದರ ಮೇಲೆ ರಾಜ್ಯಗಳ ನಡುವೆ ಪರಾಮರ್ಶೆಯನ್ನೊಳಗೊಂಡು, ಪ್ರಸಕ್ತ ಅಂತರರಾಷ್ಟ್ರೀಯ ಪರಿಸ್ಥಿತಿಯ ಬಗ್ಗೆ ವಿಚಾರ ವಿನಿಮಯವು ನಡೆಯಿತು ಅಂತರರಾಷ್ಟ್ರೀಯ ಪರಿಸ್ಥಿತಿಯ ಮೌಲ್ಯ ನಿರ್ಣಯದಲ್ಲಿಯೂ, ಜನತೆಗಳ ಶಾಂತಿ-ಭದ್ರತೆಗಳ ಸಲುವಾಗಿ ನಡೆಯುವ ಹೋರಾಟದಲ್ಲಿ ಅವುಗಳ ಸ

ವಾರ್ಸಾ ಒಡಂಬಡಿಕೆಯ ಪ್ರಕಟಣೆ

ರ್ವಸಮಾನ ಕಾರ್ಯಭಾರಗಳ ಬಗ್ಗೆಯೂ, ಈ ಒಡಂಬಡಿಕೆಗೆ ಸೇರಿದ ಸಮಾಜವಾದೀ ರಾಜ್ಯಗಳಲ್ಲಿ, ಸಂಪೂರ್ಣ ಒಮ್ಮತವಿರುವುದನ್ನು ರಾಜಕೀಯ ಸಲಹಾ ಸಮಿತಿಯು ತೃಪ್ತಿಯಿಂದ ಗಮನಿಸುತ್ತಿದೆ. ಈ ಒಡಂಬಡಿಕೆಗೆ ಸೇರಿದ ರಾಜ್ಯಗಳ ಪ್ರಕಟನೆಯೊಂದನ್ನು ಈ ಸಮಿತಿಯು ಸರ್ವಾನುಮತಿಯಿಂದ ಅಂಗೀಕರಿಸಿದ್ದು, ಪತ್ರಿಕೆಗಳಲ್ಲಿ ಆ ಪ್ರಕಟನೆಯು ಮುದ್ರಿಸಲ್ಪಟ್ಟಿದೆ.

ವಾರ್ಸಾ ಒಡಂಬಡಿಕೆಯ ಸದಸ್ಯ ರಾಷ್ಟ್ರಗಳ ಸಂಯುಕ್ತ ಸಾಯುಧ ಸೇನೆಗಳ ಮುಖ್ಯ ಸೇನಾನಾಯಕರಾದ ಮಾರ್ಷಲ್ ಐ. ಎಸ್. ಕೊನೇವ್‌ರವರು, ಸಾಯುಧ ಸೇನೆಗಳು ನಡೆಯಲಿರುವ ಇನ್ನೊಂದು ಖೋತಾ ಬಗ್ಗೆಯೂ, ರುಮಾನಿಯಾ ಗಣತಂತ್ರದಲ್ಲಿಂದ ಸೋವಿಯೆತ್ ಸೇನೆಗಳನ್ನು ವಾಪಸು ಕರೆಸಿಕೊಳ್ಳುವ ಬಗ್ಗೆಯೂ ಸಮಿತಿಗೆ ವರದಿಯನ್ನೊಪ್ಪಿಸಿದರು.

ಮೊದಲೇ ಪ್ರಕಟಿಸಲಾದಂತೆ ೧೯೫೮ರಲ್ಲಿ ಸೋವಿಯೆತ್ ಒಕ್ಕೂಟ ಸಾಯುಧ ಸೇನೆಗಳಲ್ಲಿ ಇನ್ನೊಮ್ಮೆ ೩,೦೦,೦೦೦ ಜನ ಸೈನಿಕರನ್ನು ಕಡಮೆ ಮಾಡುವುದರ ಜತೆಗೆ ವಾರ್ಸಾ ಒಡಂಬಡಿಕೆಯ ಸದಸ್ಯ ರಾಜ್ಯಗಳು ೧೯೫೮ರಲ್ಲಿ ಇನ್ನೊಮ್ಮೆ ಸಾಯುಧ ಸೇನೆಗಳಲ್ಲಿ ಒಟ್ಟು ೧,೧೯,೦೦೦ ಜನರಷ್ಟು ಗಣನೀಯ ಪ್ರಮಾಣದ ತಗ್ಗುವರಿಯನ್ನುಂಟು ಮಾಡಬೇಕೆಂದು ನಿಶ್ಚಯಿಸಿಕೊಂಡಿವೆ. ಈ ಪೈಕಿ ರೂಮಾನಿಯಾ ಗಣತಂತ್ರವು ೫೫,೦೦೦ ಜನರನ್ನೂ, ಬಲ್ಗೇರಿಯವು ೨೩,೦೦೦ ಜನರನ್ನೂ, ಪೋಲೆಂಡ್ ೨೦,೦೦೦ ಜನರನ್ನೂ, ಚೆಕೋಸ್ಲೊವಾಕಿಯಾ ಗಣತಂತ್ರವು ೨೦,೦೦೦ ಜನರನ್ನೂ ಮತ್ತು ಆಲ್ಬೇನಿಯಾ ಗಣತಂತ್ರವು ೧,೦೦೦ ಜನರನ್ನೂ ಖೋತಾ ಮಾಡುವುವು, ಈ ರೀತಿಯಾಗಿ ವಾರ್ಸಾ ಒಡಂಬಡಿಕೆಯ ಸದಸ್ಯ ದೇಶಗಳು ೧೯೫೮

(೬ನೇ ಪುಟ ನೋಡಿ)

ಶ್ರಮಿಕ ವರ್ಗದ ಮುನ್ನಡೆ

★

ಕರ್ನಾಟಕದಲ್ಲಿ ಎಂದಿಗಿಂತಲೂ ಇದೀಗ ಶ್ರಮಿಕವರ್ಗ ಹೆಚ್ಚು ಸುಸಂಘಟಿತವಾಗುತ್ತಿದೆ, ಹೆಚ್ಚು ಬಲಶಾಲಿಯಾಗುತ್ತಿದೆ ದುಡಿಯುವವರ್ಗ ಶ್ರಮಜೀವಿಗಳ ಏಕೈಕ ಪಕ್ಷವಾದ ಕಮ್ಯೂನಿಸ್ಟ್ ಪಕ್ಷಕ್ಕೇ ಹೆಚ್ಚು ಹೆಚ್ಚಾಗಿ ಬಲ ನೀಡುತ್ತಿದೆ. ಕರ್ನಾಟಕಾದ್ಯಂತ ನಡೆದಿರುವ ಸಂಘಟನೆಯ ಸೂಕ್ಷ್ಮ ಪರಿಚಯಕ್ಕೆ ನಡೆಯುತ್ತಿರುವ ಸಭೆಗಳೇ ನಿದರ್ಶನವಾಗಿವೆ.

ಕರ್ನಾಟಕದಲ್ಲಿ ರೈತ-ಕಾರ್ಮಿಕರ ಶಕ್ತಿ ಬಲಗೊಳ್ಳುತ್ತಿದೆ

ಹೊನ್ನಾವರ—

ಮೇ 26ರಂದು ಹೊನ್ನಾವರದಲ್ಲಿ ತಾಲ್ಲೂಕು ರೈತರ ಸಭೆಯು ನಡೆದು ಒಂದು ಸಮಿತಿಯನ್ನು ರಚಿಸಲಾಗಿದೆ. ಸಭೆಯ ಮುಂದೆ ರೈತರು "ರೈತ ಸಂಘಕ್ಕೆ ಜಯವಾಗಲಿ" "ಕಮ್ಯೂನಿಸ್ಟ್ ಪಾರ್ಟಿಗೆ ಜಯವಾಗಲಿ" "ಪ್ರಗತಿಗಾಮಿ ಭೂಶಾಸನ ಕೂಡಲೇ ಜಾರಿಗೆ ಬರಲೆಂಬ" ಘೋಷಣೆಗಳನ್ನು ಕೊಟ್ಟು ಊರೆಲ್ಲಾ ಸುತ್ತಾಡಿ ಸಭೆ ಜರಗುವ ಸ್ಥಳಕ್ಕೆ ಬಂದರು. ಸಭೆಗೆ ಶ್ರೀ ದೀಪಣ್ಣ ಶೆಟ್ಟರು ಅಧ್ಯಕ್ಷತೆ ವಹಿಸಿದ್ದರು. ಎಸ್. ಪಿ. ಡಿ'ಸೋಜ, ಲಿಂಗು ಗೋವುಗೌಡ, ನಾಗಪ್ಪನಾಯ್ಕ, ಕೃಷ್ಣನಾಯ್ಕ ಮುಂತಾದವರು ತಾಲೂಕಿನ ರೈತರ ಸಮಸ್ಯೆಗಳ ಬಗ್ಗೆ ಭಾಷಣಮಾಡಿದರು. ಸಭೆಯ ಸಂಚಾಲಕರಾದ ಗುಬ್ಬನಾಯ್ಕರವರು ರೈತ ಸಂಘಟನೆಯ ಅವಶ್ಯಕತೆಯನ್ನು ವಿವರಿಸಿದರು. ಕರ್ನಾಟಕ ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯದರ್ಶಿ ಕಾಂ। ಎನ್. ಎಲ್. ಉಪಾಧ್ಯಾಯರು ರೈತರ ಮತ್ತು ಜನತೆಯ ಮುಂದಿರುವ ಸಮಸ್ಯೆಗಳ ಬಗ್ಗೆ ಭಾಷಣಮಾಡಿದರು. ವಂದನಾರ್ಪಣೆಯ ನಂತರ ಸಭೆ ಮುಕ್ತಾಯವಾಯಿತು.

ಆದರ ನಂತರ ತಾಲೂಕಿನ ರೈತ ಕಾರ್ಯಕರ್ತರ ಸಭೆಯು ಎನ್. ಎಲ್. ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಸೇರಿ ತಾಲ್ಲೂಕು ರೈತ ಸಂಘದ ಸಮಿತಿಯನ್ನು ರಚಿಸಲಾಯಿತು. ಸಮಿತಿಗೆ ದೀಪಣ್ಣ ಶೆಟ್ಟರು ಅಧ್ಯಕ್ಷರಾಗಿಯೂ, ಗುಬ್ಬನಾಯ್ಕರು,ಕಾರ್ಯದರ್ಶಿಯಾಗಿಯೂ, ಡಾ। ಗೋನ್ಸ್‌ರವರು ಖಜಾಂಚಿಯಾಗಿಯೂ ಮತ್ತು ತಾಲೂಕಿನ ಪ್ರಮುಖ ಕಾರ್ಯಕರ್ತರನ್ನೊಳಗೊಂಡ ಸಮಿತಿಯನ್ನು ಚುನಾಯಿಸಲಾಯಿತು. ತಾಲೂಕಿನಲ್ಲಿ ಜುಲೈ ತಿಂಗಳೊಳಗೆ ಕರ್ನಾಟಕ ಪ್ರಾಂತೀಯ ರೈತ ಸಂಘಕ್ಕೆ 1,000 ಸದಸ್ಯರನ್ನಾದರೂ ಸೇರಿಸಬೇಕೆಂದು ತೀರ್ಮಾನಿಸಲಾಯಿತು.

ಬಹಿರಂಗ ಸಭೆಯಲ್ಲಿ ಜತ್ತಿ ಸಮಿತಿಯ ಶಿಫಾರ್ಸುಗಳಿಂದ ಮುಂಬಯಿ ಕರ್ನಾಟಕದ ರೈತರಿಗೆ ಹಾನಿಯಾಗಲಿರುವುದರಿಂದ ಅದನ್ನು ಖಂಡಿಸಿ ಮೈಸೂರು ಸರಕಾರ ತರಲಿರುವ ಭೂಸುಧಾರಣೆಯು ಮುಂಬಯಿ ಟೆನೆನ್ಸಿ ಕಾಯಿದೆಗಿಂತ ಪ್ರಗತಿಗಾಮಿಯಾಗಿರತಕ್ಕದ್ದೆಂದೂ, ಇಲ್ಲದಿದ್ದರೆ ರೈತರು ಅದನ್ನು ಪ್ರತಿಭಟಿಸುವರೆಂದೂ ಹೇಳಲಾಗಿದೆ. ಇನ್ನೊಂದು ನಿರ್ಣಯದಲ್ಲಿ ಕೇರಳ ಸರಕಾರವನ್ನು ಅಭಿನಂದಿಸಲಾಯಿತು.

ತಾ. 22ರಂದು ಅಜಿಲಗೋಡಿನಲ್ಲಿ ಶ್ರೀ ತಿಪ್ಪಯ್ಯ ಕುಪ್ಪಯ್ಯ ವೈದ್ಯರವರ ಅಧ್ಯಕ್ಷತೆಯಲ್ಲಿ ರೈತರ ಸಭೆ ನಡೆದಿತ್ತು. ಗುಬ್ಬನಾಯ್ಕ, ನಾಗಪ್ಪನಾಯ್ಕ, ಎನ್. ಎಲ್. ಉಪಾಧ್ಯಾಯ, ಬಿ. ಪಿ ಕದಂ, ಜಿ. ವಿ. ಪವಾರ ಮುಂತಾದವರು ಭಾಷಣ ಮಾಡಿದವರು.

ಕಾರವಾರ—

ಮೇ 27ರಂದು ಕಾರವಾರದಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ಆಶ್ರಯದಲ್ಲಿ ಬಹಿರಂಗ ಸಭೆ ನಡೆಯಿತು. ಸಿ. ಎಫ್. ಪೆಡ್ರಿಯವರು ಸಭೆಯ ಉದ್ದಿಶ್ಯವನ್ನು ತಿಳಿಸಿದರು. ವಕೀಲರಾದ ಬಿ. ಪಿ. ಕದಂರವರು ಅಧ್ಯಕ್ಷತೆ ವಹಿಸಿದ್ದರು. ಎನ್. ಎಲ್. ಉಪಾಧ್ಯಾಯರು ಅಮೃತಸರ ಅಧಿವೇಶನದಲ್ಲಾದ ತೀರ್ಮಾನಗಳನ್ನು ವಿವರಿಸಿ ಕೇರಳದ ಕಮ್ಯೂನಿಸ್ಟ್ ಸರಕಾರಕ್ಕೂ ಮೈಸೂರಿನ ಕಾಂಗ್ರೆಸ್ ಸರಕಾರಕ್ಕೂ ಇರುವ ವತ್ಯಾಸಗಳನ್ನು ತಿಳಿಸಿ ಭಾಷಣಮಾಡಿದರು.

ದಾಂಡೇಲಿ—

ಉತ್ತರ ಕಾನಡಾ ಜಿಲ್ಲೆಯ ಪ್ರಸಿದ್ಧ ಕೈಗಾರಿಕಾ ಕೇಂದ್ರವಾದ ದಾಂಡೇಲಿಯಲ್ಲಿ ಮೇ 29ರಂದು ಬಹಿರಂಗ ಸಭೆ ನಡೆಯಿತು. ಇಂಡಿಯನ್ ಪ್ಲೈವುಡ್ ಕಾರ್ಖಾನೆಯ ಕೆಲಸಗಾರರ ಸಂಘದ ಕಾರ್ಯದರ್ಶಿಯಾದ ಕಾಮ್ರೇಡ್ ಕುಟ್ಟಿಯವರು ಅಧ್ಯಕ್ಷತೆ ವಹಿಸಿದ್ದರು. ಎನ್. ಎಲ್. ಉಪಾಧ್ಯಾಯರು ಕಾಂಗ್ರೆಸ್ ಸರಕಾರದ ಪ್ರತಿಗಾಮಿ ಮತ್ತು ಕಾರ್ಮಿಕ ವಿರೋಧಿ ನೀತಿಯನ್ನು ವಿವರಿಸಿ ಬೆಂಗಳೂರು, ಜಂಷಡ್‌ಪುರ ಮುಂತಾದ ಕಡೆ ಕಾಂಗ್ರೆಸ್ ಸರಕಾರ ಕೆಲಸಗಾರರ ಮೇಲೆ ದಬ್ಬಾಳಿಕೆ, ಲಾಠಿಚಾರ್ಜು, ಗೋಳಿಬಾರು ಮುಂತಾದುವುಗಳನ್ನು ನಡೆಸಿದ್ದನ್ನು ತೀವ್ರವಾಗಿ ಖಂಡಿಸಿದರು. ದಾಂಡೇಲಿಯ ವಿವಿಧ ಕೈಗಾರಿಕೆಗಳಲ್ಲಿರುವ ಕಾರ್ಮಿಕ ಸಂಘಗಳು ಒಟ್ಟಿಗೆ ಸೇರಿ, ಕೇಂದ್ರ ಸಂಸ್ಥೆಯನ್ನು ರಚಿಸಿ ತಮ್ಮ ನ್ಯಾಯವಾದ ಬೇಡಿಕೆಗಳನ್ನು ಪಡೆಯಲು ಬಲವಾದ ಸಂಘಟನೆಯನ್ನು ಕಟ್ಟಬೇಕೆಂದು ತಿಳಿಸಿದರು. ದಾಂಡೇಲಿಯ ಅನೇಕ ಉದ್ಯಮಗಳಲ್ಲಿ ತುಟ್ಟಿಭತ್ಯ ಕೊಡದೇ ಇರುವುದು ಶೋಚನೀಯವಾಗಿದೆ ಎಂದು ಹೇಳಿದರು. ದಯಾನಂದ ನಾಡಕರ್ಣಿಯವರು ಕಾರ್ಮಿಕರಲ್ಲಿ ಒಗ್ಗಟ್ಟಿನ ಅವಶ್ಯಕತೆಯನ್ನು ವಿವರಿಸಿದ ನಂತರ ಸಭೆ ಮುಕ್ತಾಯವಾಯಿತು.

ಹಾಸನ—

ಭಾನುವಾರ ಜೂನ್ 1ರಂದು ಹಾಸನದಲ್ಲಿ ಕಮ್ಯೂನಿಸ್ಟ್ ಪಾರ್ಟಿಯಾಶ್ರಯದಲ್ಲಿ ಬಹಿರಂಗ ಸಭೆ ನಡೆಯಿತು. ಕಮ್ಯೂನಿಸ್ಟ್ ನಾಯಕರಾದ ಎಚ್. ಎಸ್. ಮುರುಗಪ್ಪನವರು ಅಧ್ಯಕ್ಷತೆವಹಿಸಿದ್ದರು.

ರೈತ ನಾಯಕರಾದ ಕಳಸಯ್ಯನವರು ಆರಂಭ ಭಾಷಣಮಾಡಿ ರೈತರಿಗೂ ಹರಿಜನರಿಗೂ ಆಗುವ ಅನ್ಯಾಯಗಳನ್ನು ತಿಳಿಸಿದರು ಕಾಮ್ರೇಡ್ ಎನ್. ಎಲ್. ಉಪಾಧ್ಯಾಯರು ಅಂತರರಾಷ್ಟ್ರೀಯ ಪರಿಸ್ಥಿತಿ, ವಿಶ್ವ ಶಾಂತಿ ಚಳುವಳಿಯ ಮಹತ್ವಗಳನ್ನು ವಿವರಿಸಿದರು ಮತ್ತು ದೇಶದ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಯನ್ನು ತಿಳಿಸಿ ಈ ಬಿಕ್ಕಟ್ಟಿಗೆ ಕಾಂಗ್ರೆಸ್ಸಿನ ಪ್ರತಿಗಾಮಿ ನೀತಿಯೇ ಕಾರಣವೆಂದು ಹೇಳಿದರು. ಶಾಂತಿಯುತ ಸಾಧನೆಯಿಂದ ಸಮಾಜವಾದ ಸ್ಥಾಪನೆಗೆ ಭಾರತ ಕಮ್ಯೂನಿಸ್ಟ್ ಪಾರ್ಟಿಯು ದುಡಿಯುವುದೆಂದು ಅಮೃತಸರದಲ್ಲಾದ ಪಾರ್ಟಿ ಅಧಿವೇಶನ ತೀರ್ಮಾನಿಸಿದೆ. ಇದರಿಂದ ಪಾರ್ಟಿ ಬಗ್ಗೆ ಅನೇಕರ ಮನಸ್ಸಿನಲ್ಲಿದ್ದ ತಪ್ಪು ಭಾವನೆ ದೂರವಾಗಿದೆ. ಕಾಂಗ್ರೆಸ್ಸನ್ನೆದುರಿಸಲು ಕಮ್ಯೂನಿಸ್ಟ್ ಪಾರ್ಟಿಗೆ ಎಲ್ಲರೂ ಬೆಂಬಲ ಕೊಟ್ಟು ಸಾಮೂಹಿಕ ಸಂಘಟನೆಯನ್ನು ಬಲವಾದ ಕಮ್ಯೂನಿಸ್ಟ್ ಪಾರ್ಟಿಯನ್ನು ಕಟ್ಟಲು ಎಲ್ಲರೂ ನೆರವಾಗಬೇಕೆಂದು ಉಪಾಧ್ಯಾಯರು ಕೋರಿದರು.

ಷಾಪ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ ಆಕ್ಟನ್ನು ಹಾಸನಕ್ಕೆ ಕೂಡಲೇ ಜಾರಿಮಾಡಬೇಕೆಂದು ಮೈಸೂರು ಸರಕಾರವನ್ನು ಕೇಳಿಕೊಳ್ಳುವ ಮತ್ತು ದೇವಿಕುಲಂ ಉಪ ಚುನಾವಣೆಯಲ್ಲಿ ಅದ್ಭುತ ವಿಜಯಗಳಿಸಿದ ಕೇರಳದ ಕಮ್ಯೂನಿಸ್ಟ್ ಪಾರ್ಟಿಗೆ ಅಭಿನಂದನೆಯನ್ನು ಸಲ್ಲಿಸುವ ತೀರ್ಮಾನಗಳಾದುವು.

ಶಿವಮೊಗ್ಗ ಜಿಲ್ಲೆಯಲ್ಲಿ ಕಮ್ಯೂನಿಸ್ಟ್ ಪಕ್ಷ ಬೆಳೆಯುತ್ತಿದೆ

ಜಿಲ್ಲಾ ಸಮ್ಮೇಳನಕ್ಕೆ ಸಿದ್ಧತೆ — ಸದಸ್ಯರಿಗೆ ಆಹ್ವಾನ

ಕಳೆದ ಒಂದು ವರುಷದಿಂದ ಶಿವಮೊಗ್ಗ ಜಿಲ್ಲೆಯಲ್ಲಿ ಕಮ್ಯೂನಿಸ್ಟ್ ಪಕ್ಷವು ಅತ್ಯಂತ ತ್ವರಿತ ಗತಿಯಿಂದ ಬೆಳೆಯುತ್ತಿದೆಯಲ್ಲದೆ ಹೆಚ್ಚು ಬಲಶಾಲಿಯೂ ಆಗುತ್ತಿದೆ. ಇಡೀ ಜಿಲ್ಲೆಗೆ ಪಕ್ಷದ ಕಛೇರಿ ಒಂದೇ ಒಂದು ಭದ್ರಾವತಿಯಲ್ಲಿ ಇತ್ತು. ಆದರೆ ಇದೀಗ ಸಿಡಿಗೆ, ಹೊಳೆಹಣಸವಾಡಿ, ತೀರ್ಥಹಳ್ಳಿ, ತೂದೂರು, ಮೇಗರವಳ್ಳಿ ಮುಂತಾದ ಊರುಗಳಲ್ಲಿ ಕೂಡ ಪಕ್ಷದ ಕಛೇರಿಗಳನ್ನು ತೆರೆಯಲಾಗಿದೆ. ಸಾಗರ, ನಗರ, ನ್ಯಾಮತಿ, ಹೊನ್ನಾಳಿ, ಕಂತೇನಹಳ್ಳಿ ಮತ್ತು ಚನ್ನಗಿರಿಗಳಲ್ಲಿ ಪಕ್ಷದ ಕಛೇರಿಗಳನ್ನು ತೆರೆಯಬೇಕೆಂದು ಕೇಳಿಕೊಳ್ಳಲಾಗುತ್ತಿದೆ. ಕಮ್ಯೂನಿಸ್ಟ್ ಪಕ್ಷದಲ್ಲಿ ಜನರಿಗೆ ಬೆಳೆಯುತ್ತಿರುವ ವಿಶ್ವಾಸಕ್ಕೆ ಇವು ತಕ್ಕ ನಿದರ್ಶನಗಳಾಗಿವೆ.

ಕಮ್ಯೂನಿಸ್ಟ್ ಪಕ್ಷವು ತನ್ನ ಅನೇಕ ಚಟುವಟಿಕೆಗಳಲ್ಲಿ ತೊಡಗಿದ್ದರೂ ಈವರೆಗೂ ಜಿಲ್ಲೆಯ ಕೇಂದ್ರ ಸಮಿತಿಯನ್ನು ಸ್ಥಾಪಿಸಲು ಸಾಧ್ಯವಾಗದೆ ಹೋಗಿರುವದರಿಂದ ಜಿಲ್ಲಾ ವ್ಯಾಪಾರವಾಗಿ ಚಟುವಟಿಕೆಗಳನ್ನು ನಡೆಸಲು ಸಾಧ್ಯವಾಗಿಲ್ಲ. ಆದಕ್ಕೆಂದೇ ಇದೀಗ ಜಿಲ್ಲಾ ಸಮ್ಮೇಲನವೊಂಡನ್ನು ನಡೆಸಬೇಕೆಂದೂ, ಜಿಲ್ಲಾ ಸಂಘಟನಾ ಸಮಿತಿಯನ್ನು ರಚಿಸಬೇಕೆಂದೂ ಯೋಚಿಸಲಾಗಿದೆ.

ಈ ಉದ್ದೇಶ ಸಾಧನೆಗಾಗಿ ಜಿಲ್ಲೆಯ ಪಕ್ಷದ ಘಟಕಗಳ ಪ್ರತಿನಿಧಿಗಳ ಪೂರ್ವ ಸಭೆಯೊಂದನ್ನು ಶಿವಮೊಗ್ಗದ ನೆಹ್ರೂ ರೋಡಿನಲ್ಲಿರುವ ಪಕ್ಷದ ಕಛೇರಿಯಲ್ಲಿ ಇದೇ ಜೂನ್ 15ರಂದು ಮಧ್ಯಾನ 1 ಗಂಟೆಗೆ ಕರೆಯಲಾಗಿದೆ. ಆಯಾ ಘಟಕಗಳವರು ತಮ್ಮ ಪ್ರತಿನಿಧಿಗಳನ್ನು ಕಳುಹಿಸಬೇಕೆಂದು ಕೋರಲಾಗಿದೆ.

ದ. ಕ. ಜಿಲ್ಲಾ ಪ್ರೆಸ್ ಕೆಲಸಗಾರರ ಸಭೆ

ದ. ಕ. ಜಿಲ್ಲಾ ಪ್ರೆಸ್ ಕೆಲಸಗಾರರ 21ನೇ ವಾರ್ಷಿಕ ಮಹಾಸಭೆಯು ತಾ. 24—5—58ರಂದು ಎಸ್. ಸಿ. ಸಿ. ಬ್ಯಾಂಕಿನ ಹಾಲಿನಲ್ಲಿ ಉಡುಪಿಯ ಮಜೂರ ಮುಂದಾಳುಗಳಾದ ಶ್ರೀ ಟಿ. ರಾಮಮೋಹನ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರುಗಿತು.

ಸಂಘದ ಉಪಾಧ್ಯಕ್ಷರು ಸಭಿಕರನ್ನೂ, ಅಧ್ಯಕ್ಷರನ್ನೂ ಸ್ವಾಗತಿಸಿದರು. ಬಳಿಕ ಸರಸ್ವತಿ ಪ್ರೆಸ್ಸಿನ ಬೈಂಡರ್ ಶ್ರೀ ಭೈರೋಜಿ, ಕೆನರಾ ಪ್ರೆಸ್ಸಿನ ಶ್ರೀ ನಾರಾಯಣ ಸುವರ್ಣ ಹಾಗೂ ಯೂನಿಯನಿನ ಮಾಜಿ ಸಂಘಟಕರಲ್ಲೊಬ್ಬರಾದ ಶ್ರೀ ಕೆ. ಕೃಷ್ಣರಾವ್, ಬಿ. ಎ. ಮತ್ತು ರಾಷ್ಟ್ರೀಯ ಮುಂದಾಳುಗಳಾದ ಶ್ರೀ ಆಜಾದ್ ಮತ್ತು ಡಾ॥ ಖಾನ್ ಸಾಹೇಬ್ ಇವರುಗಳ ನಿಧನದ ಬಗ್ಗೆಯೂ, ಕಾಸರಗೋಡಿನ ಜನಪ್ರಿಯ ರೈತ ಮುಂದಾಳುಗಳಾಗಿದ್ದ ಶ್ರೀ ಯನ್. ಜಿ. ಕಾಮತ್ ಅವರ ಆಕಸ್ಮಿಕ ನಿಧನದ ಬಗ್ಗೆಯೂ ಸಭೆಯು ಸಂತಾಪ ಸೂಚಿಸಿ ಒಂದು ನಿಮಿಷ ಮೌನವಾಚರಿಸಿ ದಿವಂಗತರಿಗೆ ಗೌರವ ಅರ್ಪಿಸಿತು.

ಕೇರಳದ ದೇವೀಕುಳಂ ಮತದಾರ ಕ್ಷೇತ್ರದಲ್ಲಿ ನಡೆದ ಚುನಾವಣೆಯಲ್ಲಿ ವಿಜಯ ಹೊಂದಿದ ಶ್ರೀಮತಿ ರೋಸಮ್ಮ ಪೊನ್ನೂಸ್‌ರನ್ನು ಅಭಿನಂದಿಸುವ ಹಾಗೂ ಜಮ್‌ಷೆಡ್‌ಪುರದಲ್ಲಿ ಮಜೂರರ ಮೇಲೆ ನಡೆದ ಗೋಳೀಬಾರನ್ನು ಖಂಡಿಸುವ ಮತ್ತು ಇನ್ನಿತರ ಮಜೂರರ ಸಂಬಂಧವಾದ ಠರಾವುಗಳು ಸಭೆಯಲ್ಲಿ ಮಂಜೂರು ಮಾಡಲ್ಪಟ್ಟವು.

ವಾರ್ಷಿಕ ಮಹಾಸಭೆಗೆ ಬಂದಿದ್ದ ಎಸ್. ಕೆ. ಟಿ. ಯು. ಸಿ.ಯ ಅಧ್ಯಕ್ಷರಾದ ಶ್ರೀ ಎ. ಶಾಂತಾರಾಮ ಪೈಯವರು ಮಜೂರ ಸಂಘಟನೆಯ ಬಗ್ಗೆ ಉಪಯುಕ್ತ ಸಲಹೆ ಸೂಚನೆಗಳನ್ನಿತ್ತರು. ನಂತರ ಮೋಟಾರ್ ವರ್ಕರ್ಸ್ ಯೂನಿಯನ್ನಿನ

(ಆನೇ ಪುಟ ನೋಡಿ)

ಕಮ್ಯೂನಿಸ್ಟ್ ಸರಕಾರ ಮತ್ತು ಕೆಥೋಲಿಕ್ ಚರ್ಚ್

ಜೆರಾಲ್ಡ್ ಪಿರೇರಾ

[ಈ ಲೇಖನವನ್ನು ಬರೆದವರು ಗೋವನ್ ಪೀಪಲ್ಸ್ ಪಾರ್ಟಿಯ ಕೇಂದ್ರ ಸಮಿತಿಯ ಓರ್ವ ಸದಸ್ಯರು ಅವರು ಗೋವದ ಪ್ರಸಿದ್ಧ ಕೇಥೋಲಿಕ್ ನಾಯಕರು. ಕೇರಳದಲ್ಲಿ ಕಳೆದ ಒಂದು ವರ್ಷದಿಂದ ಅಧಿಕಾರದಲ್ಲಿರುವ ಕಮ್ಯೂನಿಸ್ಟ್ ನಾಯಕತ್ವದ ಸರಕಾರದ ವಿರೋಧವಾಗಿ ಅಲ್ಲಿನ ಕೆಥೋಲಿಕ್ ಮಠಾಧಿಪತಿಗಳು ಕೈಗೊಂಡಿರುವ ತೀವ್ರ ಪ್ರತಿಭಟನೆಯ ಕಾರ್ಯಕ್ರಮವನ್ನು ಲೇಖಕರು ಖಂಡಿಸಿದ್ದಾರೆ. ಜಗತ್ತಿನ ಎಲ್ಲ ಕಡೆಗಳಲ್ಲೂ ಎಲ್ಲ ಸಂದರ್ಭಗಳಲ್ಲೂ ಕೆಥೋಲಿಕ್ ಚರ್ಚ್ ಹೇಗೆ ಪ್ರಗತಿಗೆ ತಡೆಯೊಡ್ಡುತ್ತ ಬಂದಿದೆ ಎಂದು ಚಾರಿತ್ರಿಕ ದಾಖಲೆಗಳ ಸಹಿತವಾಗಿ ಈ ಲೇಖನದಲ್ಲಿ ವಿವರಿಸಿದ್ದಾರೆ. —ಸಂ.]

★

ಘಟನಾತ್ಮಕವಾಗಿ ಕೇರಳದಲ್ಲಿ ಕಮ್ಯೂನಿಸ್ಟರ ನಾಯಕತ್ವದಲ್ಲಿ ಸರಕಾರ ರಚನೆಯಾಗಿ ಒಂದು ವರ್ಷ ಕಳೆಯಿತು. ಆ ಸರಕಾರ ರಚನೆಯಾದಾಗ ದೇಶದಾದ್ಯಂತ ಪ್ರಗತಿಶೀಲ ಶಕ್ತಿಗಳೆಲ್ಲ ಸಂತೋಷ ಹೊಂದಿದ್ದವು. ವಿರೋಧಿಗಳು ರೋಷ ತಾಳಿದ್ದರು. ಅನೇಕ ಮಿತ್ರರು, ಶುಭಾಕಾಂಕ್ಷಿಗಳು, ಅನುಮಾನ ತಳೆದಿದ್ದರು. ಆದರೆ ಕಮ್ಯೂನಿಸ್ಟರು ಮೆಲ್ಲಮೆಲ್ಲನೆ, ಸ್ಥಿರವಾದ ಹೆಜ್ಜೆಗಳನ್ನಿಡುತ್ತ, ತಾವು ಪ್ರತಿ ಸರಕಾರ ರೂಪಿಸಿ ಚೆನ್ನಾಗಿ ನಡೆಸಬಲ್ಲರೆಂದು ತೋರಿಸಿ ಕೊಟ್ಟಿದ್ದಾರೆ. ಅಲ್ಲದೆ ಹಿಂದಿನ ಸರಕಾರಗಳಿಗಿಂತ ಉತ್ತಮವಾದ ಆಡಳಿತೆ ನಡೆಸಲು ಸಮರ್ಥರೆಂದು ಖಚಿತ ಪಡಿಸಿದ್ದಾರೆ.........

ಭಾರತದ ಪ್ರಗತಿಶೀಲ ಚಳುವಳಿಯ ಭವಿಷ್ಯವು ಬಹಳ ಮಟ್ಟಿಗೆ ಕೇರಳದ ಕಮ್ಯೂನಿಸ್ಟ್ ಸರಕಾರದ ಜಯಾಪಜಯಗಳನ್ನು ಹೊಂದಿಕೊಂಡಿದೆ. ಬೇರೆ ಯಾವುದೇ ಪಕ್ಷ ಅಧಿಕಾರದಲ್ಲಿ ಇದ್ದಿದ್ದರೂ ಮಾಡಲಾರದೆ ಬಿಡುತ್ತಿದ್ದ ಯಾವ ಕಾರ್ಯಗಳನ್ನೆಲ್ಲ ಕಮ್ಯೂನಿಸ್ಟ್ ಸರಕಾರ ಸಾಧಿಸಿದೆ ಎಂಬ ಪ್ರಶ್ನೆಗೆ ದೊರಕುವ ಉತ್ತರವು ದೇಶದ ಮತದಾರರ ಮಟ್ಟಿಗೆ ಒಂದು ಅಳತೆಗೋಲಾಗುವುದು.

ಸಾಧಿಸಿರುವುದೇನು?

ಕಮ್ಯೂನಿಸ್ಟ್ ಸರಕಾರವು ಅನೇಕ ಎಡರು ತೊಡರುಗಳನ್ನು ಇದಿರಿಸಿ ಕಾರ್ಯ ಸಾಧಿಸಬೇಕಾಗಿದೆ. ಪ್ರತಿಪಕ್ಷಗಳು ಪ್ರತಿಯೊಂದು ಹೆಜ್ಜೆಯನ್ನು ವಿರೋಧಿಸುತ್ತಿವೆ. ಬಂಡವಾಳಶಾಹಿ ಪತ್ರಿಕೆಗಳು ಎಡೆಬಿಡದೆ ಅಪಪ್ರಚಾರ ನಡೆಸುತ್ತಿವೆ. ಎಲ್ಲದಕ್ಕಿಂತ ಹೆಚ್ಚಾಗಿ ಕೆಥೋಲಿಕ್ ಚರ್ಚ್ ತೀವ್ರ ಪ್ರತಿಭಟನೆಯನ್ನು ಸಂಘಟಿಸುತ್ತಿದೆ. ಇಂಥ ತೊಡಕು ತೊಂದರೆಗಳು ಇದ್ದರೂ ಕಮ್ಯೂನಿಸ್ಟ್ ಸರಕಾರವು ಅನೇಕ ಮಹತ್ಕಾರ್ಯಗಳನ್ನು ನೆರವೇರಿಸಿದೆ.

ಕೇರಳವು ಒಂದು "ಸಮಸ್ಯಾ ಪ್ರಾಂತ". ಕಮ್ಯೂನಿಸ್ಟ್ ಪಾರ್ಟಿಯು ಒಂದು "ಸಮಸ್ಯಾ ಪಕ್ಷ" ಎನ್ನುವುದು ತಿರುಳಿಲ್ಲದ ಮಾತೆಂದು ಕಮ್ಯೂನಿಸ್ಟ್ ಸರಕಾರ ತೋರಿಸಿಕೊಟ್ಟಿದೆ. ಅಧಿಕಾರ ಸೂತ್ರವು ಯೋಗ್ಯರಾದವರ ಕೈಯ್ಯಲ್ಲಿದ್ದರೆ ಕೇರಳದಲ್ಲೂ ಸ್ಥಿರವಾದ ಸರಕಾರ ಇರಲು ಸಾಧ್ಯವಿದೆ ಎಂಬುದು ಸ್ಪಷ್ಟವಾಗಿದೆ. ಲಂಚ-ಭಿಷುವತ್ತುಗಳಿಗೆ ಎಡೆಕೊಡದೆ ಜನತೆಯ ಹಿತವನ್ನು ಮುಖ್ಯವೆಂದು ಎಣಿಸಿ ಆಡಳಿತೆ ನಡೆಸುವ ಸರಕಾರ ಬಲವಾಗಿ ಉಳಿಯುವುದೆಂದು ಖಚಿತವಾಗಿದೆ. ಕಾಂಗ್ರೆಸ್, ಪಿ. ಎಸ್. ಪಿ., ಹಾಗು ಕೇಂದ್ರದ ಆಡಳಿತೆಗಳನ್ನು ಕಂಡಿರುವ ಕೇರಳದಲ್ಲಿ ಇದೀಗ ಕಮ್ಯೂನಿಸ್ಟರ ನಾಯಕತ್ವದಲ್ಲಿ ಸ್ಥಿರವಾದ ಸರಕಾರವೊಂದು ನಡೆಯುವಂತಾಗಿದೆ.

ಕೇರಳದ ವಿದ್ಯಾಭ್ಯಾಸ ಮಸೂದೆ, ಭೂಸಂಬಂಧ ಮಸೂದೆ, ರೈತರಿಂದ ಹೊಲತಪ್ಪಿಸುವುದನ್ನು ತಡೆಯುವ ಶಾಸನ ಮೊದಲಾದ ಅನೇಕ ಪ್ರಗತಿಶೀಲ ಹೆಜ್ಜೆಗಳನ್ನು ಇಡಲಾಗಿದೆ. ಇವುಗಳಿಂದ ಜನರ ಜೀವನ ಸುಧಾರಿಸಿದೆ. ಒಂದು ಪ್ರಜಾಪ್ರಭುತ್ವ ಸರಕಾರವಿಲ್ಲದೆ ಇಂಥಾ ಸುಧಾರಣೆಗಳಾಗಲು ಸಾಧ್ಯವಿಲ್ಲ.

ಇಷ್ಟೊಂದು ಸ್ವಲ್ಪ ಸಮಯದಲ್ಲಿ ಇಷ್ಟೊಂದು ಹೆಚ್ಚು ಪ್ರಗತಿ ಆಗಿರುವುದು ಪ್ರತಿಗಾಮಿಗಳಿಗೂ ಪ್ರತಿಪಕ್ಷಗಳಿಗೂ ಹಿಡಿಸುವುದಿಲ್ಲ. ಈ ಸುಧಾರಣೆಗಳ ಪ್ರಯೋಜನವನ್ನು ಜನರು ಪಡೆಯುವಂತಾಗುವಾಗ ಕಾಂಗ್ರೆಸ್ಸಾಗಲಿ ಎಲ್ಲ ಪ್ರತಿಪಕ್ಷಗಳು ಒಂದಾಗಿಯಾಗಲಿ ತಿರುಗಿ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ ಎಂದು ಅವರು ಬಲ್ಲರು. ಆದುದರಿಂದ ಅವರು ಭಯೋತ್ಪಾದನೆ, ಬಲಾತ್ಕಾರ, ಲಂಚ ಹಾಗು ಗಲಭೆಗಳೇ ಮೊದಲಾದ ಎಲ್ಲ ಮಾರ್ಗಗಳಿಂದಲೂ ಕಮ್ಯೂನಿಸ್ಟ್ ಸರಕಾರವನ್ನು ಉರುಳಿಸಲು ಪ್ರಯತ್ನಿಸುತ್ತಾರೆ. ಇಂಥ ಕೃತ್ಯಗಳ ಅಪಾದನೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದಲೇ ಪ್ರತಿಗಾಮಿಗಳು ಕೆಥೋಲಿಕ್ ಚರ್ಚ್‌ನ್ನು ಇದಿರು ಹಾಕಿ, ಅದರ ಮರೆಯಲ್ಲಿ ಅವಿತು ಕೆಲಸ ಮಾಡುತ್ತಿದ್ದಾರೆ.

ಕೆಥೋಲಿಕ್ ಚರ್ಚ್‌ನ ದಾರಿ

ಪ್ರತಿಗಾಮಿತನಕ್ಕೆ ಆಧಾರವಾದ ಕೆಥೋಲಿಕ್ ಚರ್ಚ್, ಹಿಂದಿನಿಂದ ಈ ವರೆಗೆ ಯಾವಾಗಲೂ ಪ್ರಗತಿಯನ್ನು ವಿರೋಧಿಸುತ್ತ ಬಂದಿದೆ. ಕ್ರಾಂತಿಕಾರಿ ಬಂಡವಾಳ ವರ್ಗವು ಪಾಳೆಯಗಾರಿ ಪದ್ಧತಿಯನ್ನು ಉರುಳಿಸಿ ಪುಡಿಗುಟ್ಟುತ್ತಿದ್ದ ಕಾಲದಲ್ಲಿ ಕೆಥೋಲಿಕ್ ಚರ್ಚ್ ತನ್ನ ಹಳೆಯ ವೈಭವಗಳಿಗೆ ಅಂಟಿಕೊಂಡಿದ್ದು ಪ್ರಗತಿಯನ್ನು ವಿರೋಧಿಸಿತ್ತು, ಅಳರಸರಿಗೂ ಪಾಳೆಯಗಾರ ಪ್ರಭುಗಳಿಗೂ ಬೆಂಬಲ ನೀಡುತ್ತಿತ್ತು.

ಭೂಮಿಯು ಸೂರ್ಯನ ಸುತ್ತು ತಿರುಗುತ್ತಿದೆ ಎಂದು ರೋಮನ್ ಕೆಥೋಲಿಕ್ ಚರ್ಚ್‌ನ ಅಧಿಪತಿ ಪೋಪ್‌ಗೆ ಮನದಟ್ಟಾಗದುದರಿಂದ ಬಡ ಗಲಿಲಿಯೋ ಗಲ್ಲಿಗೆ ಏರಿಸಲ್ಪಟ್ಟನು. ಪ್ರತಿಯೊಂದು ಪ್ರಗತಿಶೀಲ ಶಾಸನವನ್ನೂ ದೈವದ್ರೋಹವೆಂದು ಖಂಡಿಸುವುದು, ಧರ್ಮಾನುಯಾಯಿಗಳನ್ನು ಮೂಢತೆಯಲ್ಲಿ ಇರಿಸುವುದು ಕೆಥೋಲಿಕ್ ಚರ್ಚ್ ಅನುಸರಿಸುತ್ತ ಬಂದಿರುವ ಕ್ರಮ. ಆದರೆ ಕೊನೆಗೆ, ಚರ್ಚ್‌ನ ವಿರೋಧವಿದ್ದರೂ ಮುಂದುವರಿದ ಸಮಾಜದೊಡನೆ ಚರ್ಚ್ ಮನಸ್ಸಿಲ್ಲದಿದ್ದರೂ ಹೊಂದಿಕೊಳ್ಳಬೇಕಾಗಿ ಬಂದಿದೆ. ಚರ್ಚ್ ಎಂದೂ ಮನಸಾರೆ ಪ್ರಗತಿಗೆ ದಾರಿ ಬಿಟ್ಟುಕೊಟ್ಟಿಲ್ಲ. ಹಲವು ಬಾರಿ ಆಯುಧ ಎತ್ತಿ ಪ್ರತಿಭಟಿಸಿದ್ದೂ ಇದೆ; ಕೆಲವೊಮ್ಮೆ ಗೆದ್ದುದೂ ಇದೆ. ಇತ್ತೀಚೆಗಿನ ಚರಿತ್ರೆಯಲ್ಲಿ ಸ್ಪೆಯಿನ್‌ನಲ್ಲಿ ಅತ್ಯಧಿಕ ಬಹುಮತದಿಂದ ರಿಪಬ್ಲಿಕನ್ (ಪ್ರಜಾಪ್ರಭುತ್ವವಾದಿ) ಪಕ್ಷದವರು ಆರಿಸಲ್ಪಟ್ಟು ಅಧಿಕಾರ ವಹಿಸಿಕೊಂಡಾಗ, ಅದರ ವಿರೋಧವಾಗಿ ಆಯುಧ ಸಹಿತ ದಂಗೆ ಹೂಡಲು ಕೆಥೋಲಿಕ್ ಚರ್ಚ್ ಕರೆಕೊಟ್ಟಿತು. ಮೂರು ವರ್ಷಗಳ ತೀವ್ರ ಹೋರಾಟದಲ್ಲಿ ಪ್ರಜಾಪ್ರಭುತ್ವ ಸೋತಿತು, ಫ್ರಾಂಕೋ ಸರ್ವಾಧಿಕಾರ ಜಯಿಸಿತು.

ಚರ್ಚ್‌ನ ರಾಜಕೀಯ ಪಾತ್ರ

ಇದು ರೋಮನ್ ಕೆಥೋಲಿಕ್ ಚರ್ಚ್‌ನ ರಾಜಕೀಯ ಪಾತ್ರ—ಇದನ್ನು ನಾವು ಮರೆಯಬಾರದು. ಕೇರಳದಲ್ಲಿ ಸದ್ಯ ಕಮ್ಯೂನಿಸ್ಟ್ ಸರಕಾರದೊಡನೆ ಕೆಥೊಲಿಕ್ ಮಠಾಧಿಕಾರಿಗಳು ಸಹಕರಿಸುವರೆಂಬ ಭ್ರಮೆ ಯಾರಿಗೂ ಬೇಡ. ಈಗ ಕೆಥೋಲಿಕ್ ಚರ್ಚ್ ಕೇರಳದಲ್ಲಿ ಕ್ರಿಸ್ಟೋಫರ್ ದಳವನ್ನು ಸಂಘಟಿಸುತ್ತಿದೆ. ಈ ಆಯುಧಧಾರಿ ಸ್ವಯಂಸೇವಕ ದಳಕ್ಕೆ ಎಲ್ಲ ಪ್ರತಿಗಾಮಿ ಶಕ್ತಿಗಳೂ ಹಣದ ಚೀಲಗಳೂ ಭೂಮಾಲಿಕರೂ ಸಾಮ್ರಾಜ್ಯಶಾಹಿಗಳೂ ಸಹಾಯ ನೀಡುವರು. ಅದನ್ನು ಪ್ರಗತಿಶೀಲ ಶಕ್ತಿಗಳ ವಿರೋಧವಾಗಿ ಉಪಯೋಗಿಸಲಾಗುವುದು. ಜನರಿಗೆ ಈ ಅಪಾಯವನ್ನು ಮುಂದಟ್ಟು ಮಾಡಬೇಕು. ಹಾಗಾದರೆ ಮಾತ್ರ ಅದನ್ನು ತಡೆಗಟ್ಟಬಹುದು.

ಪ್ರಗತಿಶೀಲ ಸುಧಾರಣೆಗಳನ್ನು ಪ್ರತಿಭಟಿಸಲು ಎಲ್ಲ ಪ್ರತಿಗಾಮಿಗಳ ಜೊತೆಯಲ್ಲೂ ಸೇರಿ, ಎಲ್ಲ ತಂತ್ರಗಳನ್ನೂ ಹೂಡಿ, ಕೆಥೋಲಿಕ್ ಚರ್ಚ್ ಹೋರಾಡುವುದು. ಆದರೆ ಅದರ ಆಟ ಜಯಿಸಲಾರದೆಂದು ಖಂಡಿತವಾದಾಗ, ಸಾಮೂಹಿಕ ಪರಿವರ್ತನೆ ಸ್ಥಿರವಾದಾಗ, ಮಾತ್ರ ಕೆಥೋಲಿಕ್ ಚರ್ಚ್ ಅದಕ್ಕೆ ಹೊಂದಿಕೊಂಡು ಹೋಗುವುದು. ಅಂಥ ಪರಿಸ್ಥಿತಿಯಲ್ಲಿ ಮಾತ್ರವೆ ಕೆಥೋಲಿಕ್ ಚರ್ಚ್ ರಾಜಕೀಯದಲ್ಲಿ ಕೈಹಾಕದೆ, ಕೇವಲ ಧಾರ್ಮಿಕ ಸಂಸ್ಥೆಯಾಗಿ ವರ್ತಿಸಬಹುದು.

ಚರ್ಚ್ ಮತ್ತು ನಾಝಿಸಂ

ಕಳೆದ ಯುದ್ಧದ ಮೊದಲೂ ಯುದ್ಧದ ಸಂದರ್ಭದಲ್ಲೂ ಕೆಥೋಲಿಕ್ ಚರ್ಚ್ ವಹಿಸಿದ್ದ ಪಾತ್ರವನ್ನು ನಾವೆಂದಿಗೂ ಮರೆಯಬಾರದು. ಇಟೆಲಿಯಲ್ಲಿ ಹಾಗು ಜರ್ಮನಿಯಲ್ಲಿ ಫಾಸಿಸಂಮಿಗೆ ಚರ್ಚ್ ಬೆಂಬಲ ಕೊಟ್ಟಿತು. ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಅಡ್ಡಗಾಲಿಟ್ಟಿತು. ಗೋವಾ ವಿಮೋಚನಾ ಸಮರವನ್ನು ವಂಚಿಸಿತು. ಕಳೆದ ಯುದ್ಧದಲ್ಲಿ ಕೆಥೋಲಿಕ್ ಚರ್ಚ್‌ನ ನೇರವಾದ ಕೈವಾಡಕ್ಕೆ ಒಳಗಾಗಿ ಜನರಲ್ ಫಿಟೇನ್ ಫ್ರಾನ್ಸ್‌ಗೆ ದ್ರೋಹ ಮಾಡಿದ ಸಂಗತಿ ಚರಿತ್ರೆಯಲ್ಲಿ ದಾಖಲಾಗಿರುವ ವಿಷಯವಾಗಿದೆ. ಹಾಗೆಯೇ ಬೆಲ್ಜಿಯಂನ ಅರಸ ಮೂರನೆ ಲಿಯೋಪಾಲ್ಡ್ ಚರ್ಚ್‌ನ ಆಜ್ಞೆಗೆ ಒಳಗಾಗಿ ಸ್ವದೇಶಕ್ಕೆ ದ್ರೋಹ ಮಾಡಿದ.

ಹಿಟ್ಲರನ ಯುದ್ಧಶ್ರಮಗಳಿಗೆ ಬೆಂಬಲ ನೀಡುವುದಕ್ಕೆ ಜರ್ಮನಿಯ ಬಿಶಪ್‌ಗಳು 1936 ಅಗೋಸ್ತು 30ರಂದು ಒಂದು ಧಾರ್ಮಿಕ ಪರಿಪತ್ರವನ್ನು ಪ್ರಕಟಿಸಿದರು. ಅದರಲ್ಲಿ "ನಮ್ಮ ಜನರ ಹಾಗು ಪಿತೃದೇಶದ ಕರ್ತವ್ಯ ಏನೆಂಬುದು ಸ್ಪಷ್ಟವಿದೆ......ಬಿಕ್ಕಟ್ಟನ್ನು ಪರಿಹರಿಸುವುದರಲ್ಲಿ ನಮ್ಮ ಚಾನ್ಸಲರ್(ಹಿಟ್ಲರ್) ದೇವರ ಸಹಾಯದಿಂದಲೂ ಜನರ ಸಹಕಾರದಿಂದಲೂ ಜಯಹೊಂದಲು ಸಾಧ್ಯವಿದೆ" ಎಂದು ಹೇಳಲಾಗಿದೆ. ಅನಂತರ ಪೋಪ್ ಗುರುಗಳ ಉಪದೇಶದಂತೆ ಮತ್ತೊಂದು ಪ್ರಕಟಣೆ ಹೊರಡಿಸಿ, "ರಕ್ಷಣೆಯ ಯುದ್ಧದಲ್ಲಿ ಚಾನ್ಸಲರ್ (ಹಿಟ್ಲರ್) ಗೆ ಸರ್ವಶಕ್ತಿಯಿಂದ ಚರ್ಚ್ ಸಹಾಯ ಮಾಡುವುದು ತಮ್ಮ ಕರ್ತವ್ಯವೆಂದು ಜರ್ಮನ್ ಬಿಶಪ್‌ಗಳು ಅಭಿಪ್ರಾಯ ಪಡುತ್ತಾರೆ" ಎಂದು ಹೇಳಲಾಗಿದೆ.

ಹಾಗೆಯೇ ಇಟಲಿಯಲ್ಲಿ ಮುಸೊಲಿನಿಗೆ ರೋಮನ್ ಕೆಥೋಲಿಕ್ ಚರ್ಚ್ ಬೆಂಬಲ ಕೊಟ್ಟಿತು. ಮುಸೊಲೊನಿಗೆ ಸರ್ವಾಧಿಕಾರವನ್ನು ವಹಿಸಿಕೊಡುವ ಸಲುವಾಗಿ ಕೆಥೋಲಿಕ್ ಪಕ್ಷವನ್ನು ವಿಸರ್ಜಿಸಲಾಯಿತು. 1926 ಅಕ್ಟೋಬರ್ 31ರಂದು ಪೊಂಟಿಫಿಕಲ್ ಲಿಗೇಟ್ ಕಾರ್ಡಿನಲ್ ಮೆಂಡೆಲ್‌ವಾಲ್ ಬಹಿರಂಗವಾಗಿ ಹೀಗೆ ಘೋಷಿಸಿದರು: "ಇಟೆಲಿಯ ಸರಕಾರದ ಸೂತ್ರವನ್ನು ಹಿಡಿದಿರುವ ಮುಸೊಲೊನಿಗೆ ನನ್ನ ಕೃತಜ್ಞತೆಗಳು. ಆತ ಮತಕ್ಕೆ ಮನ್ನಣೆ ಕೊಡಬೇಕೆಂದಿದ್ದಾನೆ.... ದೇವರಿಂದ ರಕ್ಷಿಸಲ್ಪಡುವ ಮುಸೋಲೊನಿ ರಾಷ್ಟ್ರದ ಸೌಭಾಗ್ಯವನ್ನು ಉತ್ತಮಗೊಳಿಸಿದ್ದಾನೆ". ಅದೇ ವರ್ಷ ದಶಂಬರ 20ರಂದು ಸ್ವತಃ ಪೋಪ್ ಘೋಷಿಸಿದರು: "ಮುಸೊಲೊನಿಯು ದೇವರು ಕಳಿಸಿರುವ ಮನುಷ್ಯ"!

ಅಬಿಸೀನಿಯದ ಆಕ್ರಮಣಕ್ಕೆ ಆಶೀರ್ವಾದ

ಮುಸೋಲೊನಿಯ ಫಾಸಿಸ್ಟ್ ಸೈನ್ಯಗಳು ಅಬಿಸೀನಿಯವನ್ನು ಅಕ್ರಮಿಸುವ ಮೊದಲು ಪೋಪ್ ಗುರುಗಳ ಆಶೀರ್ವಾದ ಪಡೆದಿದ್ದ. ಈ ಆಕ್ರಮಣವನ್ನು ಇಡೀ ಜಗತ್ತೇ ಖಂಡಿಸಿತಾದರೂ ಕೆಥೋಲಿಕ್ ಚರ್ಚ್ ತನ್ನ ಸರ್ವಶಕ್ತಿಯನ್ನೂ ಮುಸೋಲೊನಿಯ ಬೆಂಬಲಕ್ಕೆ ಅಣಿಗೊಳಿಸಿ ಒದಗಿಸಿತು. ಸಾನ್ ಮಿನಾಟೋದ ಬಿಶಪ್, "ಫಾಸಿಸ್ಟ್ ಇಟೆಲಿಯ ವಿಜಯದ ಸಲುವಾಗಿ ಚರ್ಚುಗಳಲ್ಲಿರುವ ಬಂಗಾರ ಮತ್ತು ಗಂಟೆಗಳನ್ನು ಕೂಡ ಕರಗಿಸಿ ಕೊಡಲು ನಾವು ತಯಾರಿದ್ದೇವೆ" ಎಂದು ಸಾರಿದರು. ಸಿಯಾನೆಯ ಬಿಶೊಪ್, "ಸತ್ಯವನ್ನೂ ನ್ಯಾಯವನ್ನೂ ರಕ್ಷಿಸುವ ನಮ್ಮ ನಾಯಕ (ಮುಸೊಲೊನಿ) ಮತ್ತು ಆತನ ಸೈನಿಕರು" ಜಯ ಹೊಂದಲೆಂದು ಹರಸಿದರು. ಮಿಲಾನ್‌ದ ಆರ್ಚ್ ಬಿಶಪ್ ಶುಸ್ಟರ್, "ಇಟೆಲಿಯ ಬಾವುಟವು ಕ್ರೂಜೆಗೆ ಜಯವನ್ನು ತರುತ್ತಿದೆ, ಗುಲಾಮರ ವಿಮೋಚನೆಗೆ ದಾರಿ ಮಾಡುತ್ತಿದೆ, ನಮ್ಮ ಧರ್ಮ ಪ್ರಚಾರಕ್ಕೆ ಮಾರ್ಗ ತೆರೆಯುತ್ತಿದೆ" ಎಂದು ಘೋಷಿಸಿದರು.

ಅಬಿಸೀನಿಯವನ್ನು ಸಂಪೂರ್ಣವಾಗಿ ಸದೆಬಡಿದ ಬಳಿಕ ಮುಸೊಲೊನಿಗೆ ಸ್ವತಃ ಪೋಪ್ ಗುರುಗಳೇ ಅಭಿನಂದನೆಯ ಸಂದೇಶ ಕಳುಹಿಸಿದರು.

"........ಸರ್ವಾಧಿಪತಿಯೇ, ನಿನ್ನನ್ನು ದೇವರು ಕಾಪಾಡಲಿ..... ಕ್ರಿಶ್ಚಿಯನ್ ಧರ್ಮದ ಕೇಂದ್ರವಾದ ಕ್ರಿಶ್ಚಿಯನ್ ರೋಮ್‌ಗೆ ಐಶ್ವರ್ಯ, ಮಹತ್ವ ಮತ್ತು ಕೀರ್ತಿ ತರಲು ನೀನು ನಡೆಸುವ ಎಲ್ಲ ಯುದ್ಧಗಳೂ ಜಯಹೊಂದಲಿ ಎಂದು ದೇವರನ್ನು ಪ್ರಾರ್ಥಿಸು" ಎಂದು ಉಡಿನ್‌ದ ಆರ್ಚ್‌ಬಿಶಪ್ ಮುಸೊಲನಿಗೆ ಸಂದೇಶವಿತ್ತರು.

ಇದು ರೋಮನ್ ಕೆಥೋಲಿಕ್ ಚರ್ಚ್‌ನ ರಾಜಕೀಯ ಇತಿಹಾಸ. ಧರ್ಮದ ಹೆಸರಲ್ಲಿ ಫಾಸಿಸಂನ ಅಮಾನುಷ ಕ್ರೂರತನ, ಅಕ್ರಮಣ, ಯುದ್ಧದ ತಾಂಡವ ನೃತ್ಯಗಳಿಗೆ ಪ್ರೋತ್ಸಾಹ ಮತ್ತು ಬೆಂಬಲ ಕೊಟ್ಟು ಮಾನವ ಕುಲವನ್ನು ಅಸಹನೀಯ ಕಷ್ಟ-ಕಾರ್ಪಣ್ಯಗಳಿಗೆ, ನಾಶ-ನಷ್ಟಗಳಿಗೆ ಗುರಿಪಡಿಸಿದ ಚರಿತ್ರೆ.

ಆದರೆ ಜಗತ್ತಿನ ಜನತೆ ಧರ್ಮಗುರುಗಳ ರಾಜಕೀಯ ಮಾರ್ಗದರ್ಶನವನ್ನು ಅನುಸರಿಸಲಿಲ್ಲ. ನಾಝಿಸಂ ಮತ್ತು ಫಾಸಿಸಂ ಜನರ ಪ್ರತ್ಯಾಘಾತದಿಂದ ಸೋತು ಮುರಿದು ಬಿದ್ದವು. ಪ್ರಗತಿಶೀಲ ಶಕ್ತಿಗಳು ಜಯ ಸಾಧಿಸಿದುವು.

ಸಾಮ್ರಾಜ್ಯಶಾಹಿಗಳಿಗೆ ಬೆಂಬಲ

ಈಗ ಕೆಥೋಲಿಕ್ ಚರ್ಚ್ ಪೋರ್ಚುಗಲ್, ಸ್ಪೆಯಿನ್, ಮತ್ತಿತರ ಕಡೆಗಳಲ್ಲಿ ಫಾಸಿಸಮಿನ ಅವಶೇಷಗಳಿಗೆ ಬೆಂಬಲ ನೀಡುವುದರ ಜೊತೆಯಲ್ಲೆ ಎಲ್ಲ ಸಾಮ್ರಾಜ್ಯಶಾಹಿ ವಸಾಹತುಶಾಹಿಗಳಿಗೂ ಸಹಾಯಕೊಡುತ್ತಿದೆ.

ಭಾರತದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಮೊದಲಿಂದ ಕೊನೆಯ ತನಕವೂ ಕೆಥೋಲಿಕ್ ಚರ್ಚ್ ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ನೆರವಾಗಿತ್ತು. ಸ್ವಾತಂತ್ರ್ಯ ಬಂದ ಮೇಲೆ—1947ರ ನಂತರ—ಸ್ವಲ್ಪ ಮಟ್ಟಿಗೆ ಹೊಸ ಪರಿಸ್ಥಿತಿಗೆ ಹೊಂದಿಕೊಳ್ಳುವ ಜಾಣತನವನ್ನದು ತೋರಿಸಿತು. ಈಗಲೂ ಕೆಥೋಲಿಕ್ ಮಠಾಧಿಕಾರಿಗಳಲ್ಲಿ ಅನೇಕರು ಸಾಮ್ರಾಜ್ಯಶಾಹಿಗಳ ಪಕ್ಷವಹಿಸಿ ಮಾತಾಡುತ್ತಾರೆ. ನಾಗಾ ಪ್ರದೇಶದಲ್ಲಿ ಕೆಥೋಲಿಕ್ ಧರ್ಮಪ್ರಚಾರಕರು ನಡೆಸುತ್ತಿರುವ ರಾಜಕೀಯ ಕೈವಾಡವೇನೆಂದು ಎಲ್ಲರಿಗೂ ತಿಳಿದಿರುವ ವಿಷಯ.

ನಮ್ಮ ದೇಶದ ಕೆಥೋಲಿಕ್ ಧರ್ಮಾಧಿಕಾರಿಗಳ ಅಧಿಕೃತ ಪತ್ರಿಕೆಯಾದ "ಎನಲ್ಸ್

(೫ನೇ ಪುಟ ನೋಡಿ)

ಕಮ್ಯೂನಿಸ್ಟ್ ಪಾರ್ಟಿಯ ಅಮೃತಸರ ಅಧಿವೇಶನ

ಅಜಯ ಘೋಷ್

—(ಕಳೆದ ಸಂಚಿಕೆಯಿಂದ)—

ಹೊಸ ಪರಿಸ್ಥಿತಿಯ ರೂಪಗಳು

ಮೊದಲನೆಯದಾಗಿ, ಪಾಲಘಾಟ್ ನಂತರದ ಕಾಲದಲ್ಲಿ ನಮ್ಮ ದೇಶದಲ್ಲಿ ಅನೇಕ ಬೆಳವಣಿಗೆಗಳಾಗಿವೆ. ಅದರಲ್ಲಿ ಅತ್ಯಂತ ಮಹತ್ವವಾದದು ಜನಸಮೂಹಗಳಲ್ಲಿನ ಜಾಗೃತಿ ಮತ್ತು ಕ್ರಿಯಾಶೀಲತೆ. ನಮ್ಮ ಪಾರ್ಟಿಯ ಕಡೆಗೆ ಚರಿತ್ರೆಯ ಯಾವ ಕಾಲಘಟ್ಟಕ್ಕಿಂತಲೂ ಅಧಿಕವಾಗಿ ಜನಸಮುದಾಯವು ದೊಡ್ಡ ಪ್ರಮಾಣದಲ್ಲಿ ಬಂದಿರುವುದು ಅತ್ಯಂತ ಮಹತ್ವವಾದುದಾಗಿದೆ.

ಕಮ್ಯೂನಿಸ್ಟ ಸರಕಾರ ಮತ್ತು ಕೆಥೋಲಿಕ್ ಚರ್ಚ

(೪ನೇ ಪುಟದಿಂದ)

ಆಫ್ ದಿ ಈಸ್ಟ್" ಎಂಬ ಪತ್ರಿಕೆಯ 1958 ಮಾರ್ಚ ತಿಂಗಳ ಸಂಚಿಕೆಯಲ್ಲಿ ಒಂದು ಅಗ್ರಲೇಖನವಿದೆ. ಅದರಲ್ಲಿ "ಆಸ್ಯಾ ಖಂಡದ ಹಲವು ದೇಶಗಳು ಇತ್ತೀಚೆಗೆ ಸ್ವಾತಂತ್ರ್ಯ ಪಡೆದಿವೆ. ಸ್ವಾಂತಂತ್ರಾನಂತರದ ಘಟನೆಗಳನ್ನು ನೋಡಿದರೆ ಈ ದೇಶಗಳು ಸ್ವಾತಂತ್ರ್ಯಕ್ಕೆ ತಯಾರಾಗಿಲ್ಲವೆಂದು ತೋರುತ್ತದೆ" ಎಂದು ಬರೆದಿದೆ. ಇಂಡೋನೇಶಿಯದ ಜನತೆ ಪಶ್ಚಿಮ ಇರಿಯನ್ ಪ್ರದೇಶವನ್ನು ವಿಮೋಚನೆಗೊಳಿಸಲು ಕೈಕೊಂಡ ಕ್ರಮವನ್ನು ಆ ಲೇಖನದಲ್ಲ ಖಂಡಿಸಲಾಗಿದೆ. ಆದರೆ ಢಚ್ಚರು ಪಶ್ಚಿಮ ಇರಿಯನ್‌ನಿಂದ ಹೊರಗೆ ಹೋಗಬೇಕೆಂದು ಎಲ್ಲೂ ಹೇಳಿಲ್ಲ. ಆ ಲೇಖನವನ್ನು ಓದಿದಾಗ ಅರ್ಥವಾಗುವುದೇನೆಂದರೆ ಆಸ್ಯ—ಆಫ್ರಿಕಾ ದೇಶಗಳು ಸ್ವಾತಂತ್ರ್ಯಕ್ಕೆ ಯೋಗ್ಯವಾಗಿಲ್ಲ; ಸ್ವಾತಂತ್ರ್ಯ ಪಡೆದಿರುವ ದೇಶಗಳಲ್ಲಿ ತಿರುಗಿ ಸಾಮ್ರಾಜ್ಯಶಾಹಿಗಳು ತಮ್ಮ ಅಧಿಕಾರ ಸ್ಥಾಪಿಸಿದರೆ ಉತ್ತಮ; ಇನ್ನೂ ಸ್ವಾತಂತ್ರ್ಯ ದೊರಕದ ದೇಶಗಳಿಗೆ ಸ್ವಾತಂತ್ರ್ಯ ಕೊಡಕೂಡದು !

ಗೋವಾ ಸ್ವಾತಂತ್ರ್ಯಕ್ಕೆ ವಿರೋಧ

ಕೆಥೋಲಿಕ್ ಚರ್ಚ ಗೋವಾದಲ್ಲಿ ಪೋರ್ಚುಗೀಸ್ ರಾಜ್ಯಭಾರಕ್ಕೆ ಬೆಂಬಲ ಕೊಡುತ್ತಿದೆ. ರಾಷ್ಟ್ರೀಯವಾದಿಗಳಾದ ಧರ್ಮಗುರುಗಳು ಶಿಕ್ಷೆಗೆ ಗುರಿಯಾಗುತ್ತಾರೆ, ಅಥವ ಭಾರತಕ್ಕೆ ಓಡಿಬರಬೇಕಾಗುತ್ತದೆ. ಗೋವದಲ್ಲೂ ಪೋರ್ಚುಗಲ್‌ನಲ್ಲೂ ಚರ್ಚ ಫ್ಯಾಸಿಸ್ಟ ದಬ್ಬಾಳಿಕೆಗೆ ಬೆಂಬಲ ಕೊಡುತ್ತಿರುವಾಗ ಭಾರತದಲ್ಲಿ ಚರ್ಚ ಮೌನವಾಗಿ ಅದಕ್ಕೆ ಸಮ್ಮತಿಸಬೇಕಾಗುತ್ತದೆ.........

ಹೊಸಕಾಲ, ಹೊಸಶಕ್ತಿಗಳು

ಕಾಲ ಬದಲಾಗುತ್ತಿದೆ. ಧರ್ಮದಿಂದ ರಾಜಕೀಯ ಬೇರ್ಪಡಬೇಕಾದ ಸಮಯ ಬಂದಿದೆ. ಕೆಥೋಲಿಕ್ ಧರ್ಮಾಧಿಕಾರಿಗಳು ಇನ್ನಾದರೂ ಇದನ್ನು ತಿಳಿದುಕೊಳ್ಳಲಿ. ಸಮಾಜದ ಪ್ರಗತಿಯೊಡನೆ ಹೆಜ್ಜೆಯಿಟ್ಟು ನಡೆಯಲು ಚರ್ಚ ಕಲಿಯಬೇಕು.

ಕೇರಳದಲ್ಲಿ ಜನರ ಜೀವನವನ್ನು ಉತ್ತಮಗೊಳಿಸುವ ಮಹತ್ಕಾರ್ಯದಲ್ಲಿ ಕಮ್ಯೂನಿಸ್ಟರೂ ಕೆಥೋಲಿಕರೂ ಸಹಕರಿಸುವಂತಾಗಲೆಂದು ಹಾರೈಸೋಣ. ಕೆಥೋಲಿಕ್ ಧರ್ಮಾಧಿಕಾರಿಗಳು ಪ್ರತಿಗಾಮಿಗಳ ಉಪಕರಣಗಳಾಗದಿರಲಿ. ಹಾಗಾದರೆ ಅವರ ಅಧಃಪತನಕ್ಕೆ ಅವರೇ ಹೊಣೆಗಾರರಾಗುವರು. ಇಂಡೋನಾಶಿಯೋ ಚರ್ಚಿನ ನಾಯಕರು ಈ ಸತ್ಯವನ್ನು ಮನವರಿಕೆ ಮಾಡಿಕೊಂಡು ಪ್ರಗತಿಶೀಲ ಶಕ್ತಿಗಳೊಡನೆ ಹೊಂದಿಕೊಳ್ಳಬೇಕಾಗುವುದು.

ಪಾರ್ಟಿಯು ಪ್ರಬಲವಾಗಿದ್ದ ಆಂಧ್ರ, ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಷ್ಟೇ ಅಲ್ಲ ಉತ್ತರ ಪ್ರದೇಶ ಮತ್ತು ಬಿಹಾರದಂತಹ ಇತರ ರಾಜ್ಯಗಳಲ್ಲೂ ಸಹ ನಮ್ಮ ಪಾರ್ಟಿಯು ಬಲಗೊಳ್ಳುತ್ತಿದೆ. ಕಾರ್ಮಿಕ ವರ್ಗ ಹೆಚ್ಚು ಐಕ್ಯಗೊಳ್ಳುತ್ತಿದೆ. ಸುಸಂಘಟಿತವಾಗಿದೆ ಮತ್ತು ಅನೇಕ ಬೇಡಿಕೆಗಳನ್ನು ಪಡೆದಿದೆ.

ಎರಡನೆಯದಾಗಿ, ಕಾಂಗ್ರೆಸ್ಸಿನ ಪ್ರಭಾವ ಕುಗ್ಗುತ್ತಿದೆ ಮತ್ತು ಅದು ತೀವ್ರ ಬಿಕ್ಕಟ್ಟಿನಲ್ಲಿದೆ. ಪ್ರಾಗ್ಜ್ಯೋತಿಷ್‌ಪುರ ಕಾಂಗ್ರೆಸ್ ಅಧಿವೇಶನದಲ್ಲಿ, ಉತ್ತರ ಪ್ರದೇಶದಲ್ಲಿ ಬಿ. ಸಿ. ಗುಪ್ತರವರ ಪರಾಜಯ ಮತ್ತು ಪ್ರಾದೇಶಿಕ ಸಮಿತಿಗಳಲ್ಲಿ ಒಳಜಗಳ ಇವುಗಳಲ್ಲಿ ಅದನ್ನು ಕಾಣಬಹುದು. ಪಂಡಿತ ನೆಹರೂರವರು ಸಹ "ಏನೋ ಆಗಿದೆ" ಎಂದು ಇತ್ತೀಚಿಗೆ ಹೇಳಿದ್ದಾರೆ. ಆದರೆ ಅವರು, ಕಾಂಗ್ರೆಸ್ಸ ಜನತೆಯಿಂದ ದೂರ ಸರಿಯುತ್ತಿದೆ ಎಂಬುದನ್ನು ಮಾತ್ರ ಹೇಳಲಿಲ್ಲ. ಅದು ಜನತೆಯಿಂದ ದೂರ ಸರಿದಿರುವುದರಿಂದ ಅಧಿಕಾರ ಲಾಲಸೆ ಮತ್ತು ಅಧಃಪತನ ಬೆಳೆದಿದೆ. ಕಾಂಗ್ರೆಸ್ಸಿನ ಪ್ರಸಕ್ತ ಬಿಕ್ಕಟ್ಟು ಸಾಧಾರಣವಾದುದಲ್ಲ. ಸ್ವಹಿತಸಾಧಕರು ಬೇರೂರಿರುವುದರಿಂದ, ಕೇವಲ ಶಿಸ್ತಿನ ಮಾತನ್ನಾಡುವುದರಿಂದ ಇದು ಬಗೆಹರಿಯದು. ತಾತ್ಕಾಲಿಕವಾಗಿಯಾದರೂ ಪಂಡಿತ ನೆಹರೂರವರು ರಾಜಿನಾಮೆ ಕೊಡಲು ಮುಂದೆ ಬಂದುದು—ನಂತರ ಹಿಂತೆಗೆದುಕೊಂಡರೂ ಈ ಬಿಕ್ಕಟ್ಟಿನ ಪರಮಾವಧಿಯನ್ನೇ ತೋರಿಸುತ್ತದೆ.

ಮೂರನೆಯದಾಗಿ, ಎಡ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳಷ್ಟೇ ಪ್ರಬಲವಾಗುತ್ತಿಲ್ಲ. ನಮ್ಮ ಪಾರ್ಟಿ ಮತ್ತು ಎಡಪಕ್ಷಗಳ ಶಕ್ತಿಗಳು ಬಲಹೀನವಾಗಿರುವೆಡೆಗಳಲ್ಲಿ ಜಾತೀಯವಾದೀ ಮತ್ತು ಪ್ರತ್ಯೇಕವಾದೀ ಪಕ್ಷಗಳು ಅಪಾಯಕಾರೀ ರೀತಿಯಲ್ಲಿ ತಲೆಯೆತ್ತಿವೆ, ಉದಾ: ದ್ರಾವಿಡ ಮುನ್ನೇತ್ರ ಕಳಗಂ, ಗಣತಂತ್ರ ಪರಿಷತ್, ಆಕಾಲಿ ದಳ, ಜನಸಂಘ, ಇತ್ಯಾದಿ. ಕಾಂಗ್ರೆಸ್ಸಿನ ಕ್ಷೀಣಿಸುತ್ತಿರುವ ಪ್ರಭಾವವನ್ನು ಬಳಸಿಕೊಂಡು ಈ ಪಕ್ಷಗಳು ಜನತೆಯನ್ನು ತಪ್ಪು ದಾರಿಗೆಳೆಯಲು ಯತ್ನಿಸುತ್ತಿವೆ.

ನಾಲ್ಕನೆಯದಾಗಿ, ರಾಜಕೀಯ ವಾತಾವರಣವು ಪ್ರಧಾನವಾಗಿ ಯೋಜನೆಯ ಬಿಕ್ಕಟ್ಟಿನಿಂದ ಕೂಡಿದೆ—ನಿಜವಾಗಿ ಇದು ಬಂಡವಾಳಶಾಹಿ ನೀತಿಗಳ ಬಿಕ್ಕಟ್ಟಾಗಿದೆ.

ಐದನೆಯದಾಗಿ, ಈ ಬಿಕ್ಕಟ್ಟು ತೀವ್ರವಾದ ಪ್ರತಿಗಾಮಿಗಳಿಗೆ, ಸಾಮ್ರಾಜ್ಯಶಾಹಿಯೊಂದಿಗೆ ಸಂಪರ್ಕವಿರುವವರಿಗೆ, ಯೋಜನೆಯ ಪ್ರತಿಗಾಮಿ ಸ್ವಭಾವಗಳ ವಿರುದ್ಧ ಧಾಳಿನಡೆಸಲು ಅವಕಾಶ ದೊರಕಿಸಿಕೊಟ್ಟಿದೆ. ಈ ಕಾಲಾವಧಿಯಲ್ಲಿ ಇದು ಅತ್ಯಂತ ಅಪಾಯಕಾರಿಯಾದುದಾಗಿದೆ, ಇದನ್ನು ಕಡೆಗಣಿಸಿದಲ್ಲಿ ಪ್ರಜಾಪ್ರಭುತ್ವ ಚಳವಳಿಗೆ ಧಕ್ಕೆ ಬರುತ್ತದೆ. ಅದ್ದರಿಂದಾಗಿ ನಮ್ಮ ರಾಜಕೀಯ ನಿರ್ಣಯದಲ್ಲಿ ಈ ಬಗ್ಗೆ ವಿವವರವಾಗಿ ಉಲ್ಲೇಖಿಸಲಾಗಿದೆ.

ಆರನೆಯದಾಗಿ, ಈ ಎಲ್ಲದರ ಪರಿಣಾಮವಾಗಿ ಕಾಂಗ್ರೆಸ್ಸಿನಲ್ಲಿ ಘರ್ಷಣೆಯು ಅಧಿಕಾರಕ್ಕಾಗಿಯಷ್ಟೇ ಅಲ್ಲದೆ ನೀತಿಗಳ ಮೇಲೂ ನಡೆಯುತ್ತಿದೆ. ಕಾಂಗ್ರೆಸ್ಸಿನಲ್ಲಿರುವ ಪ್ರಜಾಪ್ರಭುತ್ವ ಶಕ್ತಿಗಳು ಬೆಳೆದಿರುವುದಷ್ಟೇ ಅಲ್ಲದೆ, ಹೆಚ್ಚು ಬಹಿರಂಗವಾಗಿಯೂ ಮತ್ತು ದೃಢವಾಗಿಯೂ ಅದು ವ್ಯಕ್ತಗೊಳ್ಳುತ್ತಿದೆ.

ಏಳನೆಯದಾಗಿ, ಈ ಒಂದು ಹಿನ್ನೆಲೆಯಲ್ಲಿ ಕೇರಳವು ಪ್ರಮುಖಪಾತ್ರ ವಹಿಸುತ್ತಿದೆ ಎಲ್ಲ ರಾಜ್ಯಗಳಲ್ಲಿಯೂ ಲಕ್ಷಾಂತರ ಜನರು ಕೇರಳ ಸರಕಾರದ ಕ್ರಮಗಳನ್ನು ಸಹಾನುಭೂತಿಯಿಂದ ನೋಡುತ್ತಿದ್ದಾರೆ.

ಇಂಥ ಕ್ಲಿಷ್ಟವಾದ ಮತ್ತು ತೀವ್ರವಾಗಿ ಬೆಳೆಯುತ್ತಿರುವ ಪರಿಸ್ಥಿತಿಯಲ್ಲಿ ಕಮ್ಯೂನಿಸ್ಟ ಪಾರ್ಟಿಯು ಪ್ರಜಾಪ್ರಭುತ್ವ ಶಕ್ತಿಗಳನ್ನು ಒಂದು ಗೂಡಿಸುವುದರಲ್ಲಿ ಮತ್ತು ಅದರ ನಾಯಕತ್ವ ವಹಿಸುವುದರಲ್ಲಿ ತನ್ನ ಪಾತ್ರ ನಿರ್ವಹಿಸಲು ಯಾವ ರೀತಿ ಕೆಲಸ ಮಾಡಬೇಕು ?

ದ್ವಿತೀಯ ಪಂಚವಾರ್ಷಿಕ ಯೋಜನೆ

ನಮ್ಮ ಪಾರ್ಟಿ ಮತ್ತು ಇಡೀ ದೇಶದ ಮುಂದೆ ಇರುವ ತಕ್ಷಣದ ಹೋರಾಟವೆಂದರೆ ಯೋಜನೆಯ ಗುರಿಯನ್ನು ಸಾಧಿಸುವುದಾಗಿದೆ. ಯೋಜನೆಯು ವಿಫಲವಾದಲ್ಲಿ ಸರಕಾರಕ್ಕೆ ಕೆಟ್ಟ ಹೆಸರು ಬರುವುದರಿಂದ ನಮ್ಮ ಪಾರ್ಟಿಯು ಅದು ವಿಫಲವಾಗಬೇಕೆಂದು ಹಾರೈಸುತ್ತದೆ ಎಂದು ಹೇಳುವವರಿದ್ದಾರೆ. ಅಷ್ಟೇ ಅಲ್ಲ ಕಮ್ಯೂನಿಸ್ಟರಿಗೆ ಅಂತರ್ಯುದ್ಧ ಮತು ಕ್ರಾಂತಿ ಬೇಕಾಗಿದೆ ಎಂದು ದುಷ್ಪ್ರಚಾರ ಮಾಡಲಾಗುತ್ತಿದೆ.

ಯೋಜನೆಯು ಅಸಮರ್ಪಕವೆಂದೂ, ಅದು ಸಮಾಜವಾದವನ್ನು ತರುವುದಿಲ್ಲವೆಂದೂ ನಾವು ನಿರ್ಭಯವಾಗಿ ಹೇಳಿದ್ದೇವೆ. ಆದರೂ ಯೋಜನೆಯ ಗುರಿಗಳನ್ನು ಸಾಧಿಸಿದಲ್ಲಿ ಅದು ನಮ್ಮ ರಾಷ್ಟ್ರೀಯ ಆರ್ಥಿಕವನ್ನು , ಸ್ವಾತಂತ್ರ್ಯವನ್ನು ಬಲಗೊಳಿಸುವುದೆಂದೂ, ಯೋಜನೆಯು ವಿಫಲಗೊಂಡಲ್ಲಿ ಜನತೆಯ ಸಂಕಷ್ಟಗಳು ಹೆಚ್ಚುವುದೆಂದೂ ನಾವು ಹೇಳಿದ್ದೇವೆ. ಆದ್ದರಿಂದಾಗಿ ಜನತೆಯ ಹಿತಗಳಿಗೆ ಅನುಗುಣವಾಗಿರುವ ಯೋಜನೆಯ ಗುರಿಗಳ ಸಾಧನೆಗಾಗಿ ನಾವು ಯತ್ನಿಸುತ್ತೇವೆ. ಸರಕಾರವು ಬಂಡವಾಳಶಾಹಿ ಸರಕಾರವಾಗಿರುವುದರಿಂದ ನದು ತಯಾರಿಸಿರುವ ಯೋಜನೆಗೂ ನಮಗೂ, ಕಾರ್ಮಿಕರಿಗೂ, ರೈತರಿಗೂ ಏನೂ ಸಂಬಂಧವಿಲ್ಲ ಎಂದು ನಾವು ಹೇಳುವುದಿಲ್ಲ.

ಭೂಸುಧಾರಣೆಗಳಿಗಾಗಿ ಹೋರಾಟವನ್ನು ತೀವ್ರಗೊಳಿಸುತ್ತ ರೈತರು ಆಹಾರೋತ್ಪಾದನೆಯನ್ನು ಹೆಚ್ಚಿಸಲು ಸತತವಾಗಿ ಯತ್ನಿಸುತ್ತಾರೆ. ಕಾರ್ಮಿಕರು ತಮ್ಮ ಹಕ್ಕುಗಳ ರಕ್ಷಣೆಗಾಗಿ, ನ್ಯಾಯವಾದ ಬೇಡಿಕೆಗಳಿಗಾಗಿ ಹೋರಾಡುತ್ತ ಕೈಗಾರಿಕೋತ್ಪನ್ನವನ್ನು ಹೆಚ್ಚಿಸಲು ದುಡಿಯುತ್ತಾರೆ. ದೇಶದ ಎಲ್ಲೆಡೆಗಳಲ್ಲಿಯೂ ಜನತೆಗೆ ಕಾರ್ಖಾನೆಗಳು, ಒಳ್ಳೆಯ ನೀರಿನ ಸೌಕರ್ಯ, ಆಸ್ಪತ್ರೆಗಳು, ಶಾಲೆಗಳು, ಪುಸ್ತಕ ಭಂಡಾರಗಳು ಬೇಕಾಗಿವೆ.

ಇವೆಲ್ಲವೂ ತನ್ನಷ್ಟಕ್ಕೆ ತಾನೆ ಅಥವಾ ಸರಕಾರದ ಆಶ್ವಾಸನೆಗಳಿಂದ ಬರುವುದಿಲ್ಲ. ದೇಶಾದ್ಯಂತ ಜನತೆಯು ಭಾಗವಹಿಸದಿದ್ದಲ್ಲಿ ಇದನ್ನು ಸಾಧಿಸಲು ಸಾಧ್ಯವಿಲ್ಲ.

ಯೋಜನೆಯ ಒಳ್ಳೆಯ ಅಂಶಗಳನ್ನು ವಿರೋಧಿಸಿ, ಅದರ ಗುರಿಯನ್ನು ಬದಲಿಸಲು ತೀವ್ರ ಪ್ರತಿಗಾಮಿಗಳು ಕಾಂಗ್ರೆಸ್ಸಿನ ಒಳಗೂ ಮತ್ತು ಹೊರಗೂ ಯತ್ನಿಸುತ್ತಿರುವುದರ ವಿರುದ್ಧ ಹೋರಾಟ ನಡೆಸುವುದು ಅಗತ್ಯವಾಗಿದೆ. ಈ ರಾಷ್ಟ್ರೀಯ ವಿರೋಧಿ ಶಕ್ತಿಗಳನ್ನು ಪರಾಜಯಗೊಳಿಸದಿದ್ದಲ್ಲಿ ಭಾರತದ ಮುನ್ನಡೆ ಸಾಧ್ಯವಿಲ್ಲ. ಈ ಶಕ್ತಿಗಳನ್ನು ಮತ್ತು ಅದರ ಚಟುವಟಿಕೆಗಳನ್ನು ಬಹಿರಂಗಗೊಳಿಸಲು ನಾವು ಸತತವಾಗಿ ಶ್ರಮಿಸುತ್ತೇವೆ.

ಸರಕಾರ ಮತ್ತು ಭೂಸುಧಾರಣೆಗಳು

ಪ್ರಾಗ್ಜ್ಯೋತಿಷ್‌ಪುರದ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷ ಢೇಬರ್‌ರವರು "ನಾವು ಭೂಸಮಸ್ಯೆಯನ್ನು ತೆಗೆದುಕೊಳ್ಳೋಣ. ಗೇಣಿದಾರರಲ್ಲಿ ನಾವು ಹೊಲದಿಂದ ಹೊರದೂಡುವ ಭೀತಿಯನ್ನು ನಾವು ತೊಡೆದುಹಾಕಿದ್ದೇವೆಯೇ ? ರೈತ ಕಾತುರತೆಯಿಂದ ಭೂಮಿಗಾಗಿ ಎದುರು ನೋಡುತ್ತಿದ್ದಾನೆ; ತನ್ನ ಜೀವಮಾನವಿಡೀ ದುಡಿಯುತ್ತಿದ್ದು, ಅದಕ್ಕಾಗಿ 'ಕಾಯುತ್ತಿದ್ದಾನೆ," ಎಂದು ವಿವರಿಸಿದ್ದಾರೆ. ಮುಂದುವರೆದು ಅವರು "ರೈತನೊಂದಿಗೆ ನಿಕಟ ಸಂಪರ್ಕ ಅಗತ್ಯ, ಭೂಸುಧಾರಣೆಗಳನ್ನು ದ್ವಿತೀಯ ಪಂಚ ವಾರ್ಷಿಕ ಯೋಜನೆಯ ಕಾಲಾವಧಿಯಲ್ಲಿ ಪೂರಯಿಸಬೇಕು" ಎಂದು ತಿಳಿಸಿ, ಭೂಸುಧಾರಣೆಯು ನಮ್ಮ ಗ್ರಾಮಾಂತರದ ಆರ್ಥಿಕವನ್ನು ಸುಧಾರಿಸಲು ಪ್ರಥಮ ಹೆಜ್ಜೆ ಎಂದು ಘೋಷಿಸಿದ್ದಾರೆ. ಕಾಂಗ್ರೆಸು ಹತ್ತು ವರ್ಷಗಳು ಆಡಳಿತೆಯಲ್ಲಿದ್ದರೂ ಇದು ಎಷ್ಟರಮಟ್ಟಿಗೆ ಸಾಧಿತವಾಗಿದೆ. ಭೂಮಾಲಿಕರು ಭೂಸುಧಾರಣೆಗಳನ್ನು ಹೇಗೆ ಮುರಿಯುತ್ತಿದ್ದಾರೆ ಎಂದು ತೋರಿಸುವುದಷ್ಟೇ ಅಲ್ಲ ಆದರೆ ಅದನ್ನು ಎದುರಿಸಿ ಹೋರಾಡುವುದು ಹೇಗೆ ಎಂದು ತೋರಿಸಬೇಕಾಗಿದೆ. ಕಾಂಗ್ರೆಸ್‌ನಲ್ಲಿ ಮತ್ತು ಸರಕಾರಗಳಲ್ಲಿ ಭೂಸುಧಾರಣೆಗಳನ್ನು ನಿಧಾನ ಮಾಡಲಾಗುತ್ತಿದೆ ಮತ್ತು ಅದನ್ನು ನ್ಯೂನತೆಗಳಿಂದ ಕೂಡಿಸಿ, ಮುರಿಯಲಾಗುತ್ತಿದೆ.

ಆದ್ದರಿಂದಾಗಿ ಯೋಜನೆಯನ್ನು ಕಾರ್ಯಗತಗೊಳಿಸಬೇಕು ಎಂದು ಹೇಳುವಾಗ ನಾವು ದ್ವಿಮುಖ ಹೋರಾಟವನ್ನು ನಡೆಸಬೇಕಾಗಿದೆ. ಬಹಿರಂಗವಾಗಿ ಯೋಜನೆಯನ್ನು ವಿರೋಧಿಸಿ ಅದನ್ನು ಮುರಿಯಲು ಯತ್ನಿಸುತ್ತಿರುವವರ ವಿರುದ್ಧ ಮತ್ತು ತಮ್ಮ ನೀತಿಗಳಿಂದ ಯೋಜನೆಯನ್ನು ಆತಂಕಕ್ಕೀಡು ಮಾಡಲು ಮತ್ತು ಅದನ್ನು ವಿಫಲಗೊಳಿಸಲು ಅನುಕೂಲ ಕಲ್ಪಿಸುವವರ ವಿರುದ್ಧ ಹೋರಾಟ ನಡೆಸಬೇಕಾಗಿದೆ. ಈ ಹೋರಾಟವನ್ನು ನಿರಂತರವಾಗಿ ನಡೆಸುವುದರಿಂದ ಮಾತ್ರ ದೇಶದಲ್ಲಿರುವ ಎಲ್ಲ ಪ್ರಜಾಪ್ರಭುತ್ವ ಶಕ್ತಿಗಳನ್ನು ಒಂದುಗೂಡಿಸಲು ಪಾರ್ಟಿಗೆ ಸಾಧ್ಯವಾಗುತ್ತದೆ.

ರಾಜಕೀಯ ನಿರ್ಣಯದಲ್ಲಿ ಪಾರ್ಟಿ ಕೆಲಸದಲ್ಲಿನ ಕೆಲವು ಮುಖ್ಯ ನ್ಯೂನತೆಗಳ ಬಗ್ಗೆಯೂ ಸಹ ಗಮನವನ್ನು ಸೆಳೆಯಲಾಗಿದೆ.

ಜನ ಮಾತನಾಡುತ್ತಿದ್ದಾರೆ

ಈ ದುರಾಡಳಿತಕ್ಕೆ ಬೇಸತ್ತೆ !

ನಮ್ಮೂರಿನ ಬಳಿ ಮಾರಳ್ಳಿ ಗ್ರಾಮದಲ್ಲಿರುವ ಹೊನ್ನೂರಪ್ಪನವರು ವರ್ಷ ವರೆಗೆ ಹಿಂದೆ ಕಾಂಗ್ರೆಸ್ಸಿನ ವಿರೋಧಿಗಳಾಗಿದ್ದರು. ಈಗವರು ನಮ್ಮ ಹೋಬಳಿ ಮಂಡಲ ಕಾಂಗ್ರೆಸ್ ಅಧ್ಯಕ್ಷ ಪೀಠವನ್ನ ಏರಿದ್ದಾರೆ. ಗಂಟಗಾನಹಳ್ಳಿ ಮಲ್ಟಿಪರ್ಪಸ್ ಸಹಕಾರ ಸಂಘದ ಅಧ್ಯಕ್ಷರು ಸಂಘದ ಬಹುಮಂದಿ ಸದಸ್ಯರಿಗೆ ತಿಳುವಳಿಕೆ ಕೊಡದೇನೆ ಅಕ್ರಮವಾಗಿ ಜನರಲ್ ಬಾಡಿ ಮೀಟಿಂಗ್ ನಡೆಸಿ, ತಮಗೆ ಬೇಕಾದವರ ಕಮಿಟಿಯೊಂದನ್ನು ನಿರ್ಮಾಣ ಮಾಡಿಕೊಂಡು, ಅಧಿಕಾರಿ ವರ್ಗದ ಸಹಾಯ ಪಡೆದು ಮೆಣಸಿನ ಕಾಯಿ ಪರ್ಮಿಟ್ ಗಳಿಸಿ, ಬರಿ ಪರ್ಮಿಟ್ ಮಾರಿಕೊಂಡು ಸೊಸೈಟಿ ಹೆಸರಿನಲ್ಲಿ ಅಧಿಕ ಲಾಭವನ್ನ ಗಳಿಸಿಕೊಂಡಿದ್ದಾರೆ. ಇವರ ಈ ದುರ್ವ್ಯಾಪಾರಕ್ಕೆ ಅನೇಕ ಕಾಂಗ್ರೆಸ್ ಮುಖಂಡರ ಬೆಂಬಲವಿದೆಯೆಂದು ಜನರು ಮಾತಾಡಿಕೊಳ್ಳುತ್ತಿದ್ದಾರೆ. ಇದನ್ನು ಸರಿಯಾದ ವಿಚಾರಣೆಗೆ ಗುರಿಪಡಿಸಬೇಕೆಂದು ಪ್ರಾರಂಭವಾದಾಗಲಿಂದ ಒಂದೇ ಸಮನಾಗಿ ಸರ್ಕಾರವನ್ನ ಒತ್ತಾಯ ಮಾಡುತ್ತಿದ್ದೇವೆ. ಕೇಳುವವರೇ ದಿಕ್ಕಿಲ್ಲ. "ಮುಂಧ್ರಾ ಪ್ರಕರಣಕ್ಕೆ ಯಾವ ಭಾಗದಲ್ಲೂ ಇದು ಕಡಮೆಯಲ್ಲ; ಅದು ಕೋಟಿಗಳ ವ್ಯವಹಾರವಾದರೆ ಇದು ಲಕ್ಷಗಳ ವ್ಯವಹಾರ". ಇದನ್ನೆಲ್ಲಾ ಮುಚ್ಚಿಕೊಂಡು ಸರ್ಕಾರ ಯಾತಕ್ಕೆ ತನ್ನ ಘನತೆಗೆ ಕುಂದುಂಟುಮಾಡಿಕೊಳ್ಳುತ್ತಿದೆಯೋ ಅರ್ಥವಾಗುತ್ತಿಲ್ಲ. ಹೊನ್ನೂರಪ್ಪನವರ ಎರಡು ಎಕರೆ ಜಮೀನು ನೀರಲ್ಲಿ ಮುಳುಗಡೆಯಾಗುವವನ್ನ ಉಳಿಸಿಕೊಡುವ ಸಲುವಾಗಿ ಸರ್ಕಾರದ ಸಾಹಸವೆಷ್ಟು? ಎಂಟು ವರ್ಷಗಳಿಂದ ಎಷ್ಟು ಕೇಳಿಕೊಂಡಾಗ್ಯೂ ಬೀಡಕೆರೆ ಕೆರೆ ಕೋಡಿ ಉತಾವಣೆ ಮಾಡದೆ ರೈತರಿಗೆ ಬೆಳೆಗೆ ನೀರು ಪೂರೈಸದೆ ಗೋಳಾಗಿದೆ. ಕಾಂಗ್ರೆಸ್ಸಿನ ಹನ್ನೊಂದು ವರ್ಷದ ಆಡಳಿತದಲ್ಲಿ ಜನಕ್ಕೆ ಮಾಡಿರುವ ಉಪಕಾರ ಇಂಥದ್ದೆ. ಒಂದು ಹಳ್ಳಿಯಲ್ಲಿ ಈ ರೀತಿ ಇರಬೇಕಾದರೆ ದೇಶಾದ್ಯಂತ ಇಂಥಾ ದುರಾಡಳಿತದಿಂದ ಜನರು ಎಷ್ಟು ನೋಯುತ್ತಿರಬೇಕು! ಕಾಂಗ್ರೆಸ್ಸಿನ ಆಡಳಿತ ದೇಶದಲ್ಲಿ ಮುಂದುವರಿಯುವುದರಿಂದ, ಪ್ರಗತಿಗೆ ಬದಲು ಹಾನಿಯುಂಟಾಗುವುದರಲ್ಲಿ ಸಂಶಯವಿಲ್ಲ. ನಾನು ಸುಮಾರು ಇಪ್ಪತ್ತು ವರ್ಷಗಳಿಂದ ಕಾಂಗ್ರೆಸ್ಸಿನ ಸದಸ್ಯನಾಗಿದ್ದು ಅನೇಕ ಬಾರಿ ತಾಲ್ಲೂಕು ಕಾಂಗ್ರೆಸ್ ಸಮಿತಿಯಲ್ಲಿ ಸದಸ್ಯನಾಗಿ ಕೆಲಸ ಮಾಡಿರುತ್ತೇನೆ. ಕಾಂಗ್ರೆಸ್ ಹಿಡಿದಿರುವ ಈ ಅಪಮಾರ್ಗದಿಂದ ಮನನೊಂದೇ ಈ ಸಂಸ್ಥೆಗೆ ನಾನು ನನ್ನ ರಾಜೀನಾಮೆಯನ್ನು ಇತ್ತೀಚೆಗೆ ಸಲ್ಲಿಸಬೇಕಾಯಿತು!

ಕೆ. ಆರ್. ರಾಮಾಂಜನಪ್ಪ,
ತುರುವಗೆರೆ

ಜನರಿಗೆ ಉಪಕಾರವಲ್ಲ, ಪೋಲೀಸರಿಗೆ ಉತ್ಪತ್ತಿ !

ಶಿಸ್ತು ಮತ್ತು ಪ್ರಾಮಾಣಿಕತೆ ಇಲ್ಲದ ಇಂದಿನ ಸರ್ಕಾರದ ಆಡಳಿತ ವ್ಯವಸ್ಥೆಯಲ್ಲಿ ಜನರ ಪ್ರಗತಿಯಾಗುವುದು ಸಾಧ್ಯವಿಲ್ಲದಾಗಿದೆ. ಇದಕ್ಕೆ ನಮ್ಮ ಭಾಗದಲ್ಲಿ ನಡೆದಿರುವ ದುಷ್ಕೃತ್ಯಗಳೇ ಸಾಕ್ಷಿಯಾಗಿವೆ.

ಕಳೆದ ಸಾಲಿನಲ್ಲಿ ನಮ್ಮ ಭಾಗದಲ್ಲಿ ೧೩ ಕೊಲೆ ಪ್ರಕರಣಗಳು ನಡೆದಿವೆ. ಇವುಗಳಲ್ಲಿ ಕೇವಲ ಮೂರು ನಾಲ್ಕು ಕೇಸುಗಳಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಗಿರಬಹುದು ಅಷ್ಟೆ. ಇದರಲ್ಲಿ ಪೋಲೀಸರ ಕರ್ತವ್ಯ ಲೋಪವಿಲ್ಲವೆಂದು ಹೇಗೆ ಹೇಳಲಿಕ್ಕಾದೀತು?

ಪಾನ ನಿರೋಧ ಶಾಸನ ಮಾತ್ರ ಜಾರಿಯಲ್ಲಿದೆ. ಆದರೆ ಇದು ಗೃಹ ಕೈಗಾರಿಕೆಯಾಗಿ ಪರಿಣಮಿಸಿದೆ. ಇದು ಪೋಲೀಸ್ ಅಧಿಕಾರಿಗಳಿಗೆ ಉತ್ಪತ್ತಿಯಾಗಿದೆಯೆ ವಿನಃ ಜನರಿಗೆ ಉಪಕಾರವಾಗಿಲ್ಲ. ಕೊಲೆ ಹಾಗೂ ಕಳ್ಳಮದ್ಯಪಾನಗಳ ಹಾವಳಿ ಮಿತಿಮೀರಿವೆ. ಅನೇಕ ಅಧಿಕಾರಿಗಳ ಮೇಲಿರುವ ಲಂಚ, ದೊಂಬಿ ಮುಂತಾದ ಆಪಾದನೆಗಳನ್ನು ಇಲಾಖೆಯವರು ನಿರ್ಲಕ್ಷಿಸುತ್ತಿರುವದು ಶೋಚನೀಯ. ಶಿಫಾರಸ್ಸು ಮತ್ತು ದಾಕ್ಷಿಣ್ಯಕ್ಕೋಸ್ಕರ ಆಪಾದಿತರುಗಳನ್ನು ರಕ್ಷಿಸುವುದು ಪ್ರಜಾಸರ್ಕಾರದ ನೀತಿಯೆನಿಸದು, ಪ್ರಜಾವರ್ಗಕ್ಕೆ ನೆಮ್ಮದಿಯೂ ದೊರೆಯದು. ಈಗಿನ ಹಲವು ಅಧಿಕಾರಿಗಳ ದುರಾಡಳಿತವನ್ನು ಮೈಸೂರಿನ ನೂತನ ಮಂತ್ರಿಮಂಡಳ ಮಟ್ಟ ಹಾಕದಿದ್ದರೆ ಸರಕಾರಕ್ಕೂ ಪ್ರಜಾವರ್ಗಕ್ಕೂ ಕ್ಷೇಮವಿಲ್ಲ,

ಕೆ. ಯಲ್. ಹುಚ್ಚಪ್ಪ,
ಹಳೇಬೀಡು ಹೋಬಳಿ.

ಹ್ಣು ಮತ್ತೆ ಭರವಸೆಗಳು....

ಶ್ರೀ ನಿಜಲಿಂಗಪ್ಪನವರ ಸರಕಾರವನ್ನು ಅದೇ ಸರಕಾರಿ ಪಕ್ಷದವರೇ ಅವಿಶ್ವಾಸ ತೋರಿಸಿ ಉರುಳಿಸಿ ಹೊಸ ಮಂತ್ರಿಮಂಡಳ ಅಧಿಕಾರ ವಹಿಸಿಕೊಂಡಿದೆಯಷ್ಟೆ. ಶ್ರೀ ನಿಜಲಿಂಗಪ್ಪನವರ ಸರ್ಕಾರವನ್ನು ಅವಿಶ್ವಾಸ ಸೂಚನೆಯಿಂದ ಕೆಳಗಿಳಿಸುವದರಲ್ಲಿ ಪ್ರಮುಖ ಪಾತ್ರ ವಹಿಸಿದವರು ಹಿಂದೆ ತಾವೂ ಅವಿಶ್ವಾಸಕ್ಕೆ ಪಾತ್ರರಾದವರೇ! ಒಬ್ಬರಲ್ಲಿ ಒಬ್ಬರಿಗೆ ವಿಶ್ವಾಸವಿಲ್ಲ. ಎಲ್ಲರಿಗೂ ಬೇಕಾಗಿರುವುದು ಅಧಿಕಾರ ಎಂಬುದು ಸ್ಪಷ್ಟವಾಗುತ್ತದೆ. ಇಂಥ ರಾಜಕೀಯ ಪಕ್ಷದಿಂದ ಪ್ರಜಾ ನೆಮ್ಮದಿಯಾಗುವುದು ಸಾಧ್ಯವಿಲ್ಲ. ಯಾಕೆಂದರೆ ಬಂದ ಹೊಸಬರೆಲ್ಲ ಜನರ ವಿಶ್ವಾಸವನ್ನು ಸಂಪಾದಿಸಲು ಮೊದಲು ಸುಳ್ಳು ಭರವಸೆಗಳನ್ನು ಕೊಡುತ್ತಾರೆ. ತಮಗೆ ಅಧಿಕಾರ ಪಟ್ಟ ದೊರಕಿಸಿಕೊಟ್ಟ ಮಹನೀಯರು ತಮ್ಮ ಸ್ವಾರ್ಥ ಸಾಧಿಸಿಕೊಳ್ಳಲು ಇವರನ್ನು ಅಡ್ಡದಾರಿಗೆಳೆಯುತ್ತಾರೆ. ಹೀಗಾಗಿ ಒಟ್ಟು ಕಾಂಗ್ರೆಸ್ಸಿಗರು ಪ್ರಯೋಜನಕ್ಕೆ ಬಾರದವಾಗಿದ್ದು ತಮ್ಮ ಅಧಿಕಾರಾವಧಿಯಲ್ಲಿ ಸಂಪಾದಿಸಿಕೊಂಡುಹೋಗುವ ಚಾಳಿಯನ್ನು ಬೆಳೆಸಿಕೊಳ್ಳುತ್ತಿರುವುದು ನಮ್ಮ ರಾಜ್ಯದಲ್ಲಿ ಕಂಡುಬರುತ್ತಿದೆ.

ಇದಕ್ಕೆಲ್ಲ ಕಾರಣ ನಮ್ಮಲ್ಲಿ ಒಂದು ಪ್ರಬಲವಾದ ವಿರೋಧ ಪಕ್ಷವಿಲ್ಲದಿರುವುದು. ವಿರೋಧ ಪಕ್ಷದ ಮೂಗು ದಾರವಿಲ್ಲದೆ ಆಡಳಿತ ಪಕ್ಷದ ನಿರಂಕುಶ ಪ್ರಭುತ್ವ ಬೆಳೆಯಲು ಸಹಕಾರಿಯಾಗಿದೆ.

ಅಂತೆಯೇ ಜನರೀಗ ಹೊಸ ಮಂತ್ರಿಮಂಡಳ ಅಥವಾ ಇನ್ನಾವುದೇ ಕಾಂಗ್ರೆಸ್ ಮಂತ್ರಿಮಂಡಳ (ಈ ಮಂತ್ರಿಮಂಡಳ ಆರೇ ತಿಂಗಳು ಎಂದು ಭವಿಷ್ಯ ಬೇರೆ ಹೇಳುತ್ತಿದ್ದಾರೆ!)ದ ಬಗ್ಗೆ ಹೆಚ್ಚು ಆಶೆ ಇಟ್ಟುಕೊಳ್ಳದೆ, ಸುಳ್ಳು ಭರವಸೆಗಳಿಗೆ ಮೋಸಹೋಗದೆ ಪುರೋಗಾಮಿ ಶಕ್ತಿಗಳಿಗೆ ಬೆಂಬಲ ನೀಡಿ ಬಲಿಷ್ಠ ಎಡಪಕ್ಷವೊಂದನ್ನು, ವಿರೋಧ ಪಕ್ಷವೊಂದನ್ನು ನಿರ್ಮಿಸುವುದು ಈಗ ಅಗತ್ಯವಾಗಿದೆ.

ಕೆ. ರಾಮಣ್ಣ, ದಾವಣಗೆರೆ.

ದ. ಕ. ಜಿಲ್ಲಾ ಪ್ರೆಸ್ ಕೆಲಸಗಾರರ ಸಭೆ

(೭ನೇ ಪುಟದಿಂದ)

ಕಾರ್ಯದರ್ಶಿ ಶ್ರೀ ಡೇವಿಡ್ ಕರ್ಕಡ, ಪ್ರೆಸ್ ಕೆಲಸಗಾರರಾದ ಶ್ರೀಗಳಾದ ರಾಧಾಕೃಷ್ಣ, ಯಂ. ಗೋಪಾಲ ಮುಂತಾದವರು ಸಂಘಟನೆಯ ಕುರಿತು ಮಾತನಾಡಿದರು. ಅಧ್ಯಕ್ಷರು ಪ್ರೆಸ್ ಕೆಲಸಗಾರರು ಜಿಲ್ಲಾ ಸಂಘಟನೆಯನ್ನು ಬಲಪಡಿಸುವ ಬಗ್ಗೆ ತನ್ನ ಸಹಕಾರ ನೀಡುವುದಾಗಿ ವ್ಯಕ್ತಪಡಿಸಿದರು. ಪ್ರೆಸ್ ಕೆಲಸಗಾರರು ಇನ್ನು ಹೆಚ್ಚಿನ ಸಂಘಟನೆಯನ್ನು ಬಲಪಡಿಸಿ ತಮ್ಮ ನ್ಯಾಯವನ್ನು ಪಡೆಯಲು ಮುಂದಾಗಬೇಕೆಂದು ವಿನಂತಿಸಿಕೊಂಡರು.

ಮುಂದಿನ ವರ್ಷಕ್ಕೆ ಅಧಿಕಾರಿ ವರ್ಗದ ಚುನಾವಣೆ ನಡೆದು ಶ್ರೀಗಳಾದ ಪಿ. ಎಂ. ಎನ್. ಮೂರ್ತಿ, ಎಡ್ವೊಕೇಟ್, ಅಧ್ಯಕ್ಷರಾಗಿಯೂ, ಯು. ಪಿ. ಡಿ'ಸೋಜ, ಉಪಾಧ್ಯಕ್ಷ, ಯಂ. ಗೋಪಾಲ, ಕಾರ್ಯದರ್ಶಿ, ಬಿ. ರಾಮಚಂದ್ರ ರಾವ್, ಕೋಶಾಧಿಕಾರಿ, ಕೆ. ಗಂಗಾಧರ, ಜತೆಕಾರ್ಯದರ್ಶಿಗಳಾಗಿಯೂ, ಇರುವ 20 ಜನರ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು.

'ಜನ ಮಾತನಾಡುತ್ತಿದ್ದಾರೆ....!

ಈ ವಿಭಾಗಕ್ಕೆ ಬರೆಯುವವರು ತಮ್ಮ ಕಾಗದಗಳನ್ನು ಚಿಕ್ಕವಾಗಿಯೂ ಸ್ಪಷ್ಟವಾಗಿಯೂ ಬರೆಯಬೇಕು. ಹೆಸರು, ವಿಳಾಸಗಳಿಲ್ಲದ ಹಾಗೂ ದೀರ್ಘವಾದ ಕಾಗದಗಳಿಗೆ ಗಮನ ಕೊಡಲಾಗುವುದಿಲ್ಲ. ವಾಚಕರು ಇದನ್ನು ಗಮನಿಸಿ ಇಂದಿನ ರಾಜಕೀಯ ಹಾಗೂ ಸಾಮಾಜಿಕ ಅನ್ಯಾಯಗಳ ಬಗ್ಗೆ ತಮ್ಮ ತೀವ್ರ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಬೇಕು ಎಂದು ನಾವು ಕೇಳಿಕೊಳ್ಳುತ್ತೇವೆ. —ಸಂ.

ಕೋಟೆಕಾರ್-ಮಂಗಳೂರು—

ಬೀಡಿ ಕಾರ್ಮಿಕರ ಮೂರನೇ ವಾರ್ಷಿಕ ಮಹಾಸಭೆ

ಮೇ 24ರಂದು ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ ಯೂನಿಯನಿನ 3ನೇ ವಾರ್ಷಿಕ ಮಹಾಸಭೆಯು ಜನಾಬ್ ಕೆ. ಮೂಸಬ್ಬರವರ ಅಧ್ಯಕ್ಷತೆಯಲ್ಲಿ ಆಫೀಸಿನ ಮಾಳಿಗೆಯಲ್ಲಿ ಜರುಗಿತು.

ಪ್ರಾರಂಬದಲ್ಲಿ ಕಾರ್ಯದರ್ಶಿಯವರು ಗತವರ್ಷದ ವರದಿ ಮತ್ತು ಲೆಖ್ಖ ಪತ್ರವನ್ನು ಸಭೆಯ ಮುಂದಿಟ್ಟರು. ಸಭೆಯು ಸಾರ್ವನೂಮತದಿಂದ ಅಂಗಿಕರಿಸಿತ್ತು ಕರ್ನಾಟಕ ಪ್ರಾಂತ ಬೀಡಿ ಮಜೂರರ ಪ್ರಥಮ ಸಮ್ಮೇಳನದಲ್ಲಿಟ್ಟ ಠರಾವುಗಳನ್ನೇ ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು. ಹೊಸ ವರ್ಷದ ಆಡಳಿತ ಸಮಿತಿಗೆ ಯು. ಎ. ಚೆಯ್ಯಬ್ಬನವರನ್ನು ಅಧ್ಯಕ್ಷರನ್ನಾಗಿಯು, ಕೆ. ಪಕೀರ್ ಸಾಹೇಬು ಮತ್ತು ಯು ಕೆ. ಇಬ್ರಾಹಿಂರವರನ್ನು ಉಪಾಧ್ಯಕ್ಷರಾಗಿಯೂ ಯು. ಜನಾರ್ಧನ ನಾಯಕರನ್ನು ಕಾರ್ಯದರ್ಶಿಯಾಗಿಯೂ ಯು. ಕೆ. ಮಹಮ್ಮದ್, ಯು. ಬಿ. ವೆಂಕಪ್ಪನವರನ್ನು ಸಹಾಯಕ ಕಾರ್ಯದರ್ಶಿಯಾಗಿಯೂ, ಯು. ಎ. ರಾಮನವರನ್ನು ಕೋಶಾಧಿಕಾರಿಯಾಗಿ ಹದಿನೈದು ಮಂದಿಯುಳ್ಳ ಕಾರ್ಯಕಾರೀ ಸಮಿತಿಯನ್ನು ಚುನಾಯಿಸಲಾಯಿತ್ತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಂಘಟನೆಯ ದೈಯ ಧೋರಣೆಯನ್ನು ವಿವರಿಸಿದರು ಕಾರ್ಯದರ್ಶಿಗಳು ಸಭೆಯ ಮುಕ್ತಾಯಕ್ಕೆ ಮುಂಚೆ ಧನ್ಯವಾದಗಳನ್ನು ಹೇಳಿದರು.

ಉಡುಪಿ—

ಮುನಿಸಿಪಲ್ ಕೆಲಸಗಾರರ ೪ನೇ ವಾರ್ಷಿಕ ಮಹಾಸಭೆ

ಉಡುಪಿ ಮುನಿಸಿಪಲ್ ಕೆಲಸಗಾರರ ಸಂಘದ 4ನೇ ವಾರ್ಷಿಕ ಮಹಾಸಭೆಯು ದ. ಕ. ಜಿಲ್ಲಾ ಟ್ರೇಡ್ ಯೂನಿಯನ್ ಕೌನ್ಸಿಲಿನ ಉಪಾಧ್ಯಕ್ಷರಾದ ಶ್ರೀ ಸಿಂಪ್ಸನ್ ಸೋನ್ಸ್‌ರ ಅಧ್ಯಕ್ಷತೆಯಲ್ಲಿ ಸಂಘದ ಕಛೇರಿಯಲ್ಲಿ ತಾ. 22-5-58 ರಂದು ನಡೆಯಿತು.

ಆರಂಭದಲ್ಲಿ ಕಾರ್ಯದರ್ಶಿಯವರು ವಾರ್ಷಿಕ ಲೆಕ್ಕ ಪತ್ರವನ್ನೂ, ವರದಿಯನ್ನು ಸಭೆಯ ಮುಂದಿಟ್ಟರು. ನಂತರ ಹೊಸವರ್ಷದ ಆಡಳಿತ ಕಮಿಟಿಗೆ ಈ ಕೆಳಗಿನವರನ್ನೊಳಗೊಂಡ 12ಮಂದಿಯನ್ನು ಚುನಾಯಿಸಲಾಯ್ತು. ಕೆ. ದಾಸ ಸೇರಿಗಾರ (ಅಧ್ಯಕ್ಷ) ಬಿ. ಅಂಗರ (ಉಪಾಧ್ಯಕ್ಷ) ಪಿ. ಸೀನನಾಯಕ್ (ಕಾರ್ಯದರ್ಶಿ) ಬಿ. ಐಕ (ಜೊತೆ ಕಾರ್ಯದರ್ಶಿ) ತುಪ್ರ (ಕೋಶಾಧಿಕಾರಿ)

ಕಾನೂನು ಪ್ರಕಾರ ಸಿಗಬೇಕಾದ ವಾರದ ರಜೆಯು ಸಿಗಬೇಕೆನ್ನುವ, ಸರಕಾರಿ ರಜೆಗಳನ್ನು ಮುನಿಸಿಪಲ್ ಕೆಲಸಗಾರರಿಗೂ ಕೊಡಬೇಕೆನ್ನುವ, ಲಾರಿ ಕೆಲಸಗಾರರಿಗೆ ರೈನ್‌ಕೋಟ್ ಕೊಡಬೇಕೆನ್ನುವ, ನಿಲ್ಲಿಸಿದ ಮನೆ ಬಾಡಿಗೆಯನ್ನು ಒಡನೆ ಕೊಡಬೇಕೆನ್ನುವ ಹಸಿಮುಲವನ್ನು ಗೊಬ್ಬರಕ್ಕಾಗಿ ತೆಗೆಯುವುದನ್ನು ನಿಲ್ಲಿಸಬೇಕೆನ್ನುವ, ಇವೇ ಮೊದಲಾದ 9ಕೇಳಿಕೆಗಳು ಮಂಜೂರಾದವು.

ಅಧ್ಯಕ್ಷರ ಭಾಷಣ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯವಾಯಿತು.

ರಾಷ್ಟ್ರೀಯ

ನೈನಿತಾಲ್‌ನಲ್ಲಿ ನಡೆದ ಭಾರತೀಯ ಕಾರ್ಮಿಕರ ಸಮ್ಮೇಳನ

ಕಳೆದ ಮೇ 19—20ರಂದು ನೈನಿತಾಲ್‌ನಲ್ಲಿ 16ನೆಯ ಭಾರತೀಯ ಕಾರ್ಮಿಕ ಸಮ್ಮೇಳನವು ನಡೆಯಿತು. ಕೇಂದ್ರ ಸರಕಾರದ ಕಾರ್ಮಿಕ ಸಚಿವರಾದ ಗುಲ್ಜಾರಿಲಾಲ್ ನಂದಾರವರು ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು.

ಸಮ್ಮೇಳನದಲ್ಲಿ ಮಾಲಿಕರ ಪರವಾಗಿ ಶ್ರೀ ಜಿ. ಡಿ. ಸೊಮಾನಿಯವರು ನಿಯೋಗದ ನೇತೃತ್ವ ವಹಿಸಿದ್ದರು. ಎ. ಐ. ಟಿ. ಯು. ಸಿ. ನಿಯೋಗದ ನಾಯಕರಾಗಿ ಶ್ರೀ ಎಸ್. ಡಾಂಗೆಯವರೂ, ಐ. ಎನ್. ಟಿ. ಯು. ಸಿ. ಪರವಾಗಿ ಶ್ರೀ ಎಸ್. ವಿ. ದಾವೆ, ಹಿಂದ್‌ಮಜ್ದೂರ್ ಪರವಾಗಿ ಅಂತೋನಿ ಪಿಳ್ಳೈ, ಯು. ಟಿ. ಯು. ಸಿ. ಪರವಾಗಿ ಶಿಶಿರ್‌ರಾಯ್, ಅಂಚೆತಂತಿ ನೌಕರರ ಫೆಡರೇಶನ್ ಪರವಾಗಿ ಬಿ. ಎನ್. ಘೋಷ್, ರಕ್ಷಣಾ ವ್ಯವಸ್ಥೆಯ ನೌಕರರ ಪರವಾಗಿ ಶ್ರೀ ಪಿ. ಎಲ್. ಮಾನಕರ್, ಬ್ಯಾಂಕ್ ನೌಕರರ ಪರವಾಗಿ ಪಿ. ಸಿ. ಕಕ್ಕರ್, ಎಸ್. ಎಂ. ಜೋಷಿ ಮತ್ತು ಎಸ್. ಜಿ. ಪಾಟ್ಕರ್ ಮತ್ತು ಸೂತಿ ಮಿಲ್‌ಮಜ್ದೂರ್ ಸಭಾದ ಮೂವರು ಪ್ರತಿನಿಧಿಗಳು ವಿಶೇಷ ಆಹ್ವಾನದ ಮೇಲೆ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಶ್ರೀಗಳಾದ ಪ್ರಭಾತ್‌ಕಾರ್ ಮತ್ತು ಎಸ್. ಎಂ. ಬ್ಯಾನರ್ಜಿಯವರೂ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ರಾಜ್ಯಗಳ ಕಾರ್ಮಿಕ ಸಚಿವರುಗಳಷ್ಟೇ ಅಲ್ಲದೆ, ಕೇಂದ್ರ ಸರಕಾರದ ಇತರ ಸಚಿವರುಗಳೂ ಸಹ ಭಾಗವಹಿಸಿದ್ದರು.

ಸಮ್ಮೇಳನವು ಕೈಗಾರಿಕಾ ಸಂಬಂಧವನ್ನು, ಎಂಪ್ಲಾಯಿಸ್ ಇನ್ಷೂರೆನ್ಸ್ ಸ್ಕೀಮ್, ಕೈಗಾರಿಕಾ ವಿವಾದ ಕಾಯಿದೆಗೆ ತಿದ್ದುಪಡಿ, ಇತ್ಯಾದಿ ಮುಖ್ಯ ವಿಷಯಗಳನ್ನು, ಹತ್ತಿ ಗಿರಣಿ ಕೈಗಾರಿಕೆಯಲ್ಲಿನ ಬಿಕ್ಕಟ್ಟನ್ನು ಕುರಿತು ಚರ್ಚಿಸಿತು.

ಸಮ್ಮೇಳನ ಕೂಡುತ್ತಿದ್ದಾಗ ಹತ್ತಿ ಗಿರಣಿಗಳ ಮುಚ್ಚುವಿಕೆಯ ವಿರುದ್ಧ ಮುಂಬಯಿಯಲ್ಲಿ ಸಾರ್ವತ್ರಿಕ ಮುಷ್ಕರದ ಭೀತಿ ಇದ್ದಿತು. ಮೇ 12ರಂದು ತಾತಾ ಉಕ್ಕಿನ ಕಾರ್ಖಾನೆಯಲ್ಲಿ ಸಂಘದ ಮಾನ್ಯತೆಗಾಗಿ ಮುಷ್ಕರವು ಯಶಸ್ವಿಯಾಗಿ ನಡೆದಿತ್ತು.

ಸಮ್ಮೇಳನದ ಅಧಿವೇಶನದಲ್ಲಿ ಶ್ರೀ ನಂದಾ, ಡಾಂಗೆ ಮತ್ತು ದಾವೆಯವರು ಕಾರ್ಖಾನೆಗಳ ಮುಚ್ಚುವಿಕೆಯಿಂದಾಗಿ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಯನ್ನು ಕುರಿತು ವಿವರಿಸಿದರು. ಕಾರ್ಮಿಕ ಪ್ರತಿನಿಧಿಗಳು ಕಾರ್ಮಿಕರು ಕೂಲಿ ಕಡಿತಕ್ಕಾಗಲೀ ರ್‍ಯಾಷನಲೈಸೇಷನ್‌ಗಾಗಲೀ ಒಪ್ಪುವುದಿಲ್ಲವೆಂಬುದನ್ನು ಸ್ಪಷ್ಟಪಡಿಸಿದರು.

ಸಮ್ಮೇಳನವು ನಂತರ ಎರಡು ಸಮಿತಿಗಳಾಗಿ, ಅಂದರೆ ಕಾರ್ಖಾನೆಗಳನ್ನು ಮುಚ್ಚುವುದರಿಂದ ಉದ್ಭವಿಸಿರುವ ಸಮಸ್ಯೆ, ಮತ್ತು ಕೈಗಾರಿಕಾ ಸಂಬಂಧವನ್ನು ಕುರಿತ ಸಮಿತಿ ವಿಭಾಗವಾಯಿತು.

ಟ್ರೇಡ್ ಯೂನಿಯನ್‌ಗಳ ಪ್ರಾತಿನಿಧ್ಯತೆಯನ್ನು ಇತ್ಯರ್ಥಗೊಳಿಸಲು ಗುಪ್ತ ಮತದಾನ ಪದ್ಧತಿ ಅನುಸರಿಸಬೇಕೆನ್ನುವ ಠರಾವನ್ನು ಎ.ಐ.ಟಿ.ಯು.ಸಿ. ಹೊರತು ಬಾಕಿ ಎಲ್ಲ ಕೇಂದ್ರ ಟ್ರೇಡ್ ಯೂನಿಯನ್‌ಗಳೂ ವಿರೋಧಿಸಿದುವು.

ಕೈಗಾರಿಕೆಗಳನ್ನು ಮುಚ್ಚುವುದರ ಬಗ್ಗೆ ಸಮಿತಿಯು ತೀವ್ರವಾಗಿ ಪರಿಶೀಲನೆ ನಡೆಸಿ, ಅನೇಕ ವರ್ಷಗಳಿಂದ ಮುಚ್ಚಲಾಗಿರುವುದನ್ನು ಬಿಟ್ಟು, ಹೊಸದಾಗಿ ಮುಚ್ಚಲು ನೋಟೀಸು ಕೊಡುವ ಕಾರ್ಖಾನೆಯ ಬಗ್ಗೆ ತನಿಖೆ ನಡೆಸಲು ತಜ್ಞರನ್ನೊಳಗೊಂಡ ಸಮಿತಿಯನ್ನು ನೇಮಿಸಲು ತೀರ್ಮಾನಿಸಲಾಯಿತು.

ಕೈಗಾರಿಕಾ ಸಂಬಂಧ, ಟ್ರೇಡ್ ಯೂನಿಯನ್ ಸಂಘಟನೆಗಳ ನಡುವೆ ಇರುವ ವೈಷಮ್ಯ ಇವುಗಳನ್ನು ಪರಿಶೀಲಿಸಿ, ಟ್ರೇಡ್ ಯೂನಿಯನ್‌ಗಳನ್ನು ಮಾನ್ಯತೆ ಮಾಡುವ ಬಗ್ಗೆ ಈ ಕೆಳಕಂಡ ಸಲಹೆಗಳನ್ನು ಸಮ್ಮೇಳನದಲ್ಲಿ ಮಾಡಲಾಗಿದೆ.

ಸಂಘದ ರಿಜಿಸ್ಟ್ರೇಷನನ್ನು ರಿಜಿಸ್ಟ್ರಾರ್‌ರವರು ಶೀಘ್ರವಾಗಿ ಮಾಡಬೇಕು ಮತ್ತು ಚಂದಾ ಹಣವು ತಿಂಗಳಿಗೆ ನಾಲ್ಕಾಣೆಗಳು ಮಾತ್ರ ಇರಬೇಕು.

ಒಂದು ಸಂಘಕ್ಕಿಂತ ಹೆಚ್ಚು ಸಂಘವಿರುವ ಕಡೆ, ಕಡೆಯ ಪಕ್ಷ ಒಂದು ವರ್ಷವಾದರೂ ಕೆಲಸ ಮಾಡುತ್ತಿದ್ದಲ್ಲಿ ಮಾನ್ಯತೆ ಕೊಡಬೇಕು. ಒಂದೇ ಸಂಘವಿರುವ ಕಡೆಗೆ ಇದು ಅನ್ವಯಿಸುವುದಿಲ್ಲ.

ಸಂಘದ ಸದಸ್ಯತ್ವವು ಕೊನೆಯ ಪಕ್ಷ ಆ ಕೈಗಾರಿಕೆಯ ಶೇಕಡ 15ರಷ್ಟನ್ನಾದರೂ ಹೊಂದಿರಬೇಕು.

(೬ನೇ ಪುಟ ನೋಡಿ)

ಪಣವಿಟ್ಟು ಪರಾಜಿತರಾದವರು

ಅತ್ಯಂತ ನಿಖರವಾಗಿ ನಡೆದ ದೇವೀಕುಳಂ ಚುನಾವಣೆಯಲ್ಲಿ ನಡೆದ ಹಲವು ಸ್ವಾರಸ್ಯಕರವಾದ ಪ್ರಸಂಗಗಳು ಇದೀಗ ಬೆಳಕಿಗೆ ಬಂದಿವೆ. ಪ್ರಚಾರದ ಅತಿರೇಕತೆಯಲ್ಲೋ ಕಾಂಗ್ರೆಸ್ ಯಶಸ್ಸಿನ ವಿಪರೀತ ನಂಬಿಕೆಯ ಭರದಲ್ಲೋ ಅನೇಕರು ಜಿದ್ದು ಕಟ್ಟಿ ಸೋತರು, ಸೋತು ಆ ಕರಾರುಗಳನ್ನು ಚುನಾವಣೆಯ ಬಳಿಕ ಪೂರೈಸಿದರು. ಅವರ ಪಣಗಳೆಂತಹವಿದ್ದವು? ನೋಡಿ—

● ಚುನಾವಣೆಯ ಫಲಿತಾಂಶ ಪ್ರಕಟವಾದ ಮಾರನೆಯ ದಿನ ಮುಂಜಾನೆ ಕಾಂಗ್ರೆಸ್ ಪ್ರಮುಖರೂ, ರಾಮಪುರಂ ಪಂಚಾಯ್ತಿಯ ಉಪಾಧ್ಯಕ್ಷರೂ ಆದ ಜೋಸೆಫ್ ಕರಾಕ್ಕಾಟ್ ಅವರು ಕೈಯಲ್ಲಿ ಕೆಂಬಾವುಟವನ್ನು ಹಿಡಿದುಕೊಂಡು ನಗರ ಪ್ರದಕ್ಷಿಣೆ ನಡೆಸುತ್ತಿರುವುದು ಕಂಡುಬಂದಿತು. ಅದು ಅವರು ಕಟ್ಟಿದ ಜಿದ್ದಾಗಿತ್ತು ! ಕಾಂಗ್ರೆಸ್ ಸೋತರೆ ಕೆಂಬಾವುಟವನ್ನು ಹಿಡಿದುಕೊಂಡು ಊರಿನಲ್ಲಿ ಪ್ರದರ್ಶನ ಹೊರಡುವೆ ಎಂದು ಅವರು ಶಪಥಗೈದಿದ್ದರು. ಈ ಪ್ರದರ್ಶನವನ್ನು ನೋಡಲು ತುಂಬಾ ಜನ ಸೇರಿದ್ದರು !

● ರಘುನಾಥಪುರದಲ್ಲಿ ನಡೆದ ಪ್ರಸಂಗವೇ ಬೇರೆಯಾಗಿತ್ತು. ಕಾಂಗ್ರೆಸ್ ಪರವಾಗಿರುವ ವ್ಯಾಪಾರಿಯೊಬ್ಬ ಕಾಂಗ್ರೆಸ್ ಸೋತರೆ ಕಮ್ಯೂನಿಸ್ಟ್ ಪಾರ್ಟಿಗಾಗಿ ತಾನು ಕೆಲಸ ಮಾಡುವುದಾಗಿ ಹೇಳಿದ. ಚುನಾವಣೆಯ ಫಲಿತಾಂಶವಾದ ಮರುದಿನ ಬೆಳಗ್ಗೆ ಆತ ತನ್ನ ಅಂಗಡಿಯನ್ನು ತೆರೆದಾಗ ಹೀಗೆ ಘೋಷಿಸಿದ: "ಈ ಕ್ಷಣದಿಂದ ನಾನು ಕಮ್ಯೂನಿಸ್ಟ್ ಕೆಲಸಗಾರ."

● ಆದರೆ ಇನ್ನೊಬ್ಬ ಪ್ರಾಣಿ ತನ್ನ ಅರ್ಧ ಮೀಸೆಯನ್ನೇ ಕಳೆದುಕೊಂಡುಬಿಟ್ಟ! ಕಾಂಗ್ರೆಸ್ ಸೋತರೆ ತನ್ನ ಅರ್ಧ ಮೀಸೆಯನ್ನು ಬೋಳಿಸಿಕೊಂಡು ಊರಿನಲ್ಲಿ ಮೆರವಣಿಗೆ ಹೊರಡುತ್ತೇನೆ ಎಂದು ಈತ ಪಣ ತೊಟ್ಟಿದ್ದ !

● ಇನ್ನೊಬ್ಬ ಪ್ರಾಣಿ ಚಂಗನಸ್ಸೇರಿ ಪೇಟೆ ಚೌಕದಲ್ಲಿ ವೇದಿಕೆಯೊಂದನ್ನು ನಿರ್ಮಿಸಿ ತನ್ನ ಎದುರಾಳಿಯನ್ನು ಬಹಿರಂಗವಾಗಿ ಬೋಳಿಸುವದಾಗಿ ಹೇಳಿದ್ದ !

● ಜೋನ್‌ಕಪ್ಪುರಮ್‌ನಲ್ಲಿ ಪಿ. ಎಸ್. ಪಿ. ಕಾರ್ಯಕರ್ತರೊಬ್ಬರು ಬಾಗಿಲುಗಳನ್ನು ಮುಚ್ಚಿಕೊಂಡು ಕುಳಿತಿದ್ದರು. ಕಮ್ಯೂನಿಸ್ಟ್ ಪಕ್ಷದ ಸಹಾನುಭೂತಿಗಳೊಬ್ಬರೊಡನೆ ಜಿದ್ದುಕಟ್ಟಿ ಕಮ್ಯೂನಿಸ್ಟರು ಗೆದ್ದರೆ ಈ ಪ್ರಭೃತಿಗಳು ಒಂದು ವಾರದ ವರೆಗೂ ಮನೆಯಿಂದ ಬರುವುದಿಲ್ಲವೆಂದು ಹೇಳಿದ್ದರು !

ಯಾರು ಏನು ಹೇಳಿದ್ದರು ? ಆದರೆ, ಆದ್ದದೇನು ?

ಭಾರತ ರಾಜ್ಯಾಂಗದ ಚೌಕಟ್ಟಿನಲ್ಲೇ ಏಕೈಕ ಮಹಾಪ್ರಯೋಗವೆನಿಸಿರುವ ಕೇರಳದ ಕಮ್ಯೂನಿಸ್ಟ್ ರಾಜ್ಯವ್ಯವಸ್ಥೆ ಯಶಸ್ವಿಯಾಗಿ ಮುನ್ನಡೆಯುತ್ತಿರುವುದು ಕಾಂಗ್ರೆಸ್ಸನ್ನೊಳಗೊಂಡು ಎಲ್ಲಾ ರಾಜಕೀಯ ಪಕ್ಷಗಳಿಗೂ ಅಸಹನೀಯವಾಗಿರುವ ವಿಷಯವಾಗಿದೆ. ರಾಜಕೀಯ ಸಿದ್ಧಾಂತ ತತ್ವ, ರೀತಿ ನೀತಿಗಳಲ್ಲಿ ಪರಸ್ಪರ ವಿರೋಧವಾಗಿರುವ ಪಕ್ಷಗಳೆಲ್ಲ ಕಮ್ಯೂನಿಸ್ಟ್ ಸರಕಾರವನ್ನು ಉರುಳಿಸುವ ಕಾರ್ಯದಲ್ಲಿ ಅಪವಿತ್ರ ಮೈತ್ರಿಯನ್ನು ಬೆಳೆಸಿಕೊಂಡರೂ ಮೊನ್ನೆಯ ದೇವೀಕುಳಂ ಉಪಚುನಾವಣೆಯಲ್ಲಿ ಜನ ತಾವು ಯಾರ ಕಡೆಗೆಂಬುದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟರು. ಎಲ್ಲಾ ಪತ್ರಿಕೆಗಳೂ ಅಪಪ್ರಚಾರದ ಸುರಿಮಳೆ ನಡೆಸಿದವು. ಸುಳ್ಳು ಆತ್ಮವಿಶ್ವಾಸವನ್ನು ಜನರಲ್ಲಿ ತುಂಬಲೆಳಸಿ ತಾವೇ ಆತ್ಮವಂಚಕರಾದರು—ಕಮ್ಯೂನಿಸ್ಟ್ ವಿರೋಧಿ ಪತ್ರಿಕೆಗಳವರು, ಕಾಂಗ್ರೆಸ್, ಪಿ.ಎಸ್.ಪಿ., ಮುಸ್ಲಿಂ ಲೀಗ್ ಇತ್ಯಾದಿ ಪಕ್ಷಗಳವರು. ದೇವಿಕುಳಂ ಉಪಚುನಾವಣೆಯ ಬಗ್ಗೆ ಇವರೆಲ್ಲ ಹೀಗೆ ಭವಿಷ್ಯ ನುಡಿದಿದ್ದರು:

ಮಾತೃಭೂಮಿ: (ಕಾಂಗ್ರೆಸ್ ದಿನಪತ್ರಿಕೆ) ಮೇ 10ರ ಸಂಪಾದಕೀಯದಲ್ಲಿ: "ದೇವೀಕುಳಂ ಜನತೆ ಕೇವಲ ಕಮ್ಯೂನಿಸ್ಟ್ ಪ್ರಚಾರದಿಂದ ಅವರೆಡೆ ಒಲಿಯದೆ ಕಾಂಗ್ರೆಸ್ಸಿಗೆ ಮರಳಿ ಬರುತ್ತಾರೆ ಎಂಬುವುದರಲ್ಲಿ ನಮಗೆ ಖಚಿತವಾದ ನಂಬಿಕೆಯಿದೆ".

ಕಾಮರಾಜ್ ನಾಡಾರ್: (ಮದರಾಸಿನ ಮುಖ್ಯ ಮಂತ್ರಿ) "ಕಾಂಗ್ರೆಸ್ ವಿಜಯಿಯಾಗುವ ಸಾಧ್ಯತೆ ತುಂಬಾ ಇದೆ".

ಕೌಮುದಿ: (ಆರ್.ಎಸ್.ಪಿ. ಪತ್ರಿಕೆ) ಶಿರೋಬರೆಹವನ್ನು ಹೀಗೆ ಕೊಟ್ಟಿತ್ತು: "ಮತದಾನ ಮುಗಿದಿದೆ. ಕಾಂಗ್ರೆಸ್ ವರ್ತುಲಗಳಲ್ಲಿ ಸಂಭ್ರಮ ಉಕ್ಕುತ್ತಿದೆ. ಕಮ್ಯೂನಿಸ್ಟ್ ವರ್ತುಲಗಳಲ್ಲಿ ಅಭದ್ರತೆಯ ಭಾವನೆ ಸುಳಿಯುತ್ತಿದೆ".

ದೀಪಿಕಾ: 'ಕಾಂಗ್ರೆಸ್ ಉಮೇದುವಾರ ಬಿ. ಕೆ. ನಾಯರ್ ಕಮ್ಯೂನಿಸ್ಟ್ ಉಮೇದುವಾರ ಶ್ರೀಮತಿ ರೋಜಮ್ಮ ಪುನ್ನೂಸರಿಗಿಂತಲೂ ಕನಿಷ್ಠಪಕ್ಷ ೫,೦೦೦ ಅಧಿಕ ಮತಗಳನ್ನಾದರೂ ಸಂಪಾದಿಸಿ ವಿಜಯಿಯಾಗುವರೆನ್ನುವದರಲ್ಲಿ ನಮಗೆ ಸಂದೇಹವೇ ಇಲ್ಲ".

ದಿನಮಣಿ: "ದೇವೀಕುಳಂ ಕಮ್ಯೂನಿಸ್ಟ್ ಸರ್ವಾಧಿಕಾರಕ್ಕೆ ವಿರೋಧವಾಗಿ ತೀರ್ಪು ಕೊಡುತ್ತದೆ. ಕಮ್ಯೂನಿಸ್ಟರ ಭದ್ರ ಕೋಟೆಯಾದ ದೇವೀಕುಳಂನ್ನು ಪ್ರಜಾಪ್ರಭುತ್ವದ ನಿಸ್ವಾರ್ಥ ಸೈನಿಕರು ವಶಪಡಿಸಿಕೊಳ್ಳುತ್ತಾರೆ. ದೇವೀಕುಳಂ—ಪ್ರಜಾಪ್ರಭುತ್ವವಾದಿಗಳ ಯಾತ್ರಾಸ್ಥಳವಾಗುತ್ತದೆ, ಕಮ್ಯೂನಿಸ್ಟರ ಹೋರಾಟದ ಕರಾಳ ಜನರ ಮೃತ್ಯುಸ್ಥಳವಾಗುತ್ತದೆ. ಪ್ಲಾಂಟೇಷನ್ ಕಾರ್ಮಿಕರು ಕಮ್ಯೂನಿಸ್ಟ್ ಸರಕಾರಕ್ಕೆ ಚಿತೆಯನ್ನು ಸಿದ್ಧಪಡಿಸುತ್ತಾರೆ. ದೇವೀಕುಳಂ—ಕಮ್ಯೂನಿಸ್ಟ್ ಸರಕಾರದ ವಾಟರ್ಲೂವೇ ?"

ಕೇರಳ ಜನತಾ: (ಪಿ. ಎಸ್. ಪಿ) "ಪ್ರಜಾಪ್ರಭುತ್ವವಾದಿ ಶಕ್ತಿಗಳ ಮಹಾಕೇಂದ್ರ ದೇವೀಕುಳಂ. ಎಸ್ಟೇಟ್ ಕಾರ್ಮಿಕರು ಕಮ್ಯೂನಿಸಂ ವಿರೋಧ ಯಾತ್ರೆ ಹೊರಡುತ್ತಾರೆ."

ಪಿ. ಎಸ್. ಪಿ. ನಾಯಕ ಪಿ. ಕೆ. ಕುಂಜು: "ಕಾಂಗ್ರೆಸ್ ವಿಜಯಿಯಾಗುವದೆಂಬುದು ಖಂಡಿತ ದುಡಿಯುವ ವರ್ಗ ಕಮ್ಯೂನಿಸ್ಟರ ಪಾತಕ ಕಾರ್ಯಗಳನ್ನು ಮರೆಯಲಾರದು."

ಆರ್.ಎಸ್.ಪಿ. ನಾಯಕ ಶ್ರೀಕಂಠನ್ ನಾಯರ್: "ದೇವೀಕುಳವ್ಮಿನ ಸಂಘಟಿತ ದುಡಿಯುವ ವರ್ಗ ಬಂಡವಾಳಶಾಹೀ (ಕೆಪಿಟ್ಯಾಲಿಸ್ಟ್) ಸರಕಾರವಾಗಿರುವ ಸಮತಾವಾದೀ (ಕಮ್ಯೂನಿಸ್ಟ್) ಸರಕಾರವನ್ನು ಉರುಳಿಸಲು ಸಿದ್ಧರಾಗುತ್ತಿದ್ದಾರೆ"

ಕೇರಳ ಭೂಷಣಂ ಪತ್ರಿಕೆಯು: ಜ್ಯೋತಿಷ್ಯಗಳೊಬ್ಬರಿಂದ ಜ್ಯೋತಿಷ್ಯವನ್ನು ಬರೆಸಿ ಪ್ರಕಟಿಸಿತ್ತು. ಗುರುಬಲ, ನಕ್ಷತ್ರಬಲಗಳನ್ನು ಗುಣಿಸಿದ ಜ್ಯೋತಿಷಿಗಳು ಭವಿಷ್ಯವನ್ನು ಹೀಗೆ ಬರೆದಿದ್ದರು: "ಕಮ್ಯೂನಿಸ್ಟ್ ಉಮೇದುವಾರ ಸೋಲುತ್ತಾರೆ."

——

ಅಲ್ಜೀರಿಯಾದಲ್ಲಿ ನಡೆದಿರುವ ನರಮೇಧದ ರುದ್ರ ಕತೆ

ಜಗತ್ತಿನ ಜನತೆಯ ದೃಷ್ಟಿಯನ್ನು— ಈಜಿಪ್ಟಿನ ಮೇಲೆ ಸಾಮ್ರಾಜ್ಯಶಾಹಿಯ ಕ್ರೂರ ಧಾಳಿಯ ನಂತರ ಅಲ್ಜೀರಿಯಾದಲ್ಲಿ ಫ್ರಾನ್ಸ್ ನಡೆಸಿರುವ ದಬ್ಬಾಳಿಕೆ ಹಾಗೂ ಕಗ್ಗೊಲೆಗಳು ಸೆಳೆದಿವೆ. ಸ್ವಾತಂತ್ರ್ಯದಾಹದಿಂದ ಕುದಿಯುತ್ತಿರುವ ಅಲ್ಜೀರಿಯಾದ ಜನತೆಯ ಬಲಿಯನ್ನು ಫ್ರಾನ್ಸ್ ಹೇಗೆ ತೆಗೆದುಕೊಳ್ಳುತ್ತಿದೆ ಎಂಬುದಕ್ಕೆ ಕೆಳಗಿನ ಅಂಕಿಅಂಶಗಳೇ ಸಾಕ್ಷಿಯಾಗಿವೆ.

ಫ್ರಾನ್ಸಿನ ನಾಲ್ಕರಷ್ಟು ಭೂಭಾಗವನ್ನು ಅಲ್ಜೀರಿಯಾ ಹೊಂದಿದೆ. ಅದರ ಮೇಲೆ ಫ್ರಾನ್ಸ್ ತನ್ನ ಸಾಮ್ರಾಜ್ಯಶಾಹಿಯ ಬಲೆಯನ್ನು ಬೀಸಿ ಬಿಗಿಹಿಡಿದು ನಿಂತಿದೆ.

ಅಲ್ಜೀರಿಯಾದ ಜನಸಂಖ್ಯೆ ಒಂದು ಕೋಟಿ. 13 ಲಕ್ಷ ಮಂದಿ ಫ್ರೆಂಚರು ಅಲ್ಲಿ ನೆಲೆಸಿದ್ದಾರೆ. 13 ಲಕ್ಷ ಜನರಲ್ಲಿ 5 ಲಕ್ಷ ಜನರು ಸೈನಿಕರೇ! ಇವರಲ್ಲದೆ 5 ಲಕ್ಷ ಮಂದಿ ಅಲ್ಜೀರಿಯನ್ ಸೈನಿಕರ ಪಡೆಯೂ ಇದೆ. ಈ ಪ್ರಮಾಣ ಹತ್ತು ಮಂದಿ ಅಲ್ಜೀರಿಯನ್ನರಿಗೊಬ್ಬ ಸೈನಿಕನಂತಿದೆ.

ಅಲ್ಜೀರಿಯದ ಜನಸಂಖ್ಯೆಯಲ್ಲಿ ನೂರಕ್ಕೆ 40 ಮಂದಿ ಕ್ರಿಶ್ಚಿಯನರಿದ್ದಾರೆ. ಉಳಿದವರು ಅರಬ್ಬಿಗಳು.

ಫ್ರಾನ್ಸ್ ಸರಕಾರವು ಈ ಸೈನಿಕರಿಗಾಗಿ ಪ್ರತಿನಿತ್ಯ 50 ಲಕ್ಷ ಫ್ರೆಂಚ್ ಡಾಲರುಗಳನ್ನು ವ್ಯಯ ಮಾಡುತ್ತಿದೆ.

ಯಾವ ವಸಾಹತು ಶಾಹಿಗಳೂ ಕೊಲ್ಲದಷ್ಟು ಜನರನ್ನು ಫ್ರೆಂಚ್ ಸಾಮ್ರಾಜ್ಯಶಾಹಿಗಳು ಅಲ್ಜೀರಿಯಾದಲ್ಲಿ ಕೊಂದಿದ್ದಾರೆ........

1,000 ಫ್ರೆಂಚರೂ, 10,000 ಮಂದಿ ಅಲ್ಜೀರಿಯನರೂ ಪ್ರತಿನಿತ್ಯ ಗುಂಡಿಗೆ ಬಲಿಯಾಗಿ ಸಾಯುತ್ತಾರೆ ಅಥವಾ ಗಾಯಗೊಳ್ಳುತ್ತಿದ್ದಾರೆ.

ಇದುವರೆಗೆ ಮೂರು ವರುಷಗಳಲ್ಲಿ 10 ಲಕ್ಷ ಅಲ್ಜೀರಿಯನ್ನರು ಫ್ರೆಂಚರ ರಾಕ್ಷಸಿ ಅತ್ಯಾಚಾರಕ್ಕೆ ಬಲಿಯಾಗಿ ಸಾವನ್ನಪ್ಪಿದ್ದಾರೆ. 10 ಲಕ್ಷ ಮಂದಿ ಗಡಿಪಾರಾಗಿದ್ದಾರೆ ಅಥವಾ ವಲಸೆ ಹೋಗಿರುತ್ತಾರೆ. ಇನ್ನು ಲಕ್ಷಾಂತರ ಮಂದಿ ಜೈಲಿನಲ್ಲಿ ಕೊಳೆಯುತ್ತಿದ್ದಾರೆ.

ವಸಾಹತುಶಾಹಿ ಇತಿಹಾಸದಲ್ಲಿ ಇಷ್ಟೊಂದು ಭಯಾನಕವಾದ ಉದಾಹರಣೆ ಇನ್ನೊಂದು ಇಲ್ಲ!

ಇತ್ತೀಚೆಗೆ ಅಲ್ಜೀರಿಯಾದಲ್ಲಿ ಅತಿ ದೊಡ್ಡದಾದ ಎಣ್ಣೆ ಗಣಿಯೊಂದಿರುವುದು ಕಂಡುಬಂದ ನಂತರವಂತೂ ಫ್ರೆಂಚ್ ಬಂಡವಾಳಶಾಹಿಯು ಅಲ್ಜೀರಿಯವನ್ನು ಎಷ್ಟು ಮಾತ್ರಕ್ಕೂ ಬಿಟ್ಟುಕೊಡಬಾರದೆಂಬ ನಿಲುವನ್ನು ತಳೆದಿದೆ.

ಅಮೆರಿಕದ ಮತ್ತು ಫ್ರಾನ್ಸಿನ ಸರಕಾರಗಳ ಪತ್ರಿಕಾ ಪ್ರತಿನಿಧಿಗಳನ್ನು ಬಿಟ್ಟು ಜಗತ್ತಿನ ಇನ್ನಾವದೇ ದೇಶಗಳ ಪತ್ರಿಕಾ ವರದಿಗಾರರಿಗೆ ಅಲ್ಜೀರಿಯಾದೊಳಗೆ ಪ್ರವೇಶವಿಲ್ಲ.

ನೂರ ಇಪ್ಪತ್ತೈದು ವರುಷಗಳಿಂದ ಅಲ್ಜೀರಿಯನ್ನರು ಫ್ರಾನ್ಸಿನೊಡನೆ ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಮಾತುಕತೆ ನಡೆಸುತ್ತಾ ಬಂದಿದ್ದಾರೆ. ಆದರೆ ಪ್ರತಿ ಸಲವೂ ಅದಕ್ಕೆ ಸಾವಿರಾರು ಮಂದಿ ಅಲ್ಜೀರಿಯನ್ನರ ಕೊಲೆಯಿಂದ ಉತ್ತರ ದೊರೆಯುತ್ತಿದೆ.

ಮೊದಲು ಅಲ್ಜೀರಿಯನ್ನರು ಪೂರ್ಣ ಸ್ವಾತಂತ್ರ್ಯವನ್ನು ಬೇಡಿರಲಿಲ್ಲ. ಕೇವಲ ದೇಶದ ರಾಜಕೀಯ ಆಡಳಿತದಲ್ಲಿ ತಮಗೆ ಅಧಿಕಾರವಿರಬೇಕೆಂದು ಮಾತ್ರ ಬಯಸಿದ್ದರು.

ಆದರೆ ಇಂದು ಅಲ್ಜೀರಿಯನ್ನರ ರಾಷ್ಟ್ರೀಯ ನಾಯಕ ಬೆನ್ ಬೆಲಾ "ಅಲ್ಜೀರಿಯದ ಸಂಪೂರ್ಣ ನಿಶ್ಶರ್ತ ಸ್ವಾತಂತ್ರ್ಯವೇ ಅಂತಿಮ ಗುರಿ" ಎಂದು ಘೋಷಿಸಿದ್ದಾರೆ.

ಇದನ್ನು ಸಮರ್ಥಿಸಿದವರಲ್ಲಿ ಫ್ರಾನ್ಸಿನ ಕಮ್ಯೂನಿಸ್ಟರು ಮೊದಲಿಗರು. ಫ್ರಾನ್ಸ್ ಕಮ್ಯೂನಿಸ್ಟ್ ಪಾರ್ಟಿಯ ಘೋಷಣೆ "ಅಲ್ಜೀರಿಯಾ ಸ್ವಾತಂತ್ರ್ಯವಾಗಬೇಕು" ಎಂದಿದೆ.

ರಾಷ್ಟ್ರೀಯ—

ಭಾರತೀಯ ಕಾರ್ಮಿಕರ ಸಮ್ಮೇಳನ

(೩ನೇ ಪುಟದಿಂದ)

ಮಾನ್ಯತೆಯನ್ನು ಬೇಡುವ ಸಂಘಕ್ಕೆ ಆ ಕೈಗಾರಿಕೆಯಲ್ಲಿ ಕೊನೆಯ ಪಕ್ಷ ಶೇ. 25ರಷ್ಟು ಸದಸ್ಯರಾದರೂ ಇರಬೇಕು. ಒಮ್ಮೆ ಸಂಘವನ್ನು ಮಾನ್ಯ ಮಾಡಿದ ಮೇಲೆ ಎರಡು ವರ್ಷ ಯಾವ ಬದಲಾವಣೆಯೂ ಇರಕೂಡದು.

ಒಂದು ಕೈಗಾರಿಕೆಯಲ್ಲಿ ಹಲವು ಸಂಘಗಳಿದ್ದಲ್ಲಿ, ಯಾವುದರಲ್ಲಿ ಬಹುಸಂಖ್ಯಾಕ ಕೆಲಸಗಾರರಿದ್ದಾರೋ ಅದಕ್ಕೆ ಮಾನ್ಯತೆಯಿಯಬೇಕು.

ಶಿಸ್ತನ್ನು ಸರಿಯಾಗಿ ಪರಿಪಾಲಿಸುವ ಸಂಘಕ್ಕೆ ಮಾತ್ರ ಮಾನ್ಯತೆ ಕೊಡಬೇಕು. ಇವಲ್ಲದೆ, ಸನಸ್ಯತ್ಕವನ್ನು ಪರಿಶೀಲಿಸಲು ಮತ್ತಿತರ ನಿಯಮಾವಳಿಗಳನ್ನು ನಿರೂಪಿಸಲು ಶಿಫಾರಸುಗಳನ್ನು ಸಮ್ಮೇಳನವು ಮಾಡಿದೆ.

ಎಂಪ್ಲಾಯೀಸ್ ಸ್ಟೇಟ್ ಇನ್ಷೂರೆನ್ಸ್ ಸ್ಕೀಮಿನ ಬಗ್ಗೆ, ಪ್ರಾವಿಡೆಂಟ್ ಫಂಡ್‌ನ ಬಗ್ಗೆ ಕೆಲವು ಶಿಫಾರಸುಗಳನ್ನು ಸಮ್ಮೇಳನವು ಮಾಡಿದೆ.

ಕೈಗಾರಿಕಾ ವಿವಾದದ ಕಾಯಿದೆಯಲ್ಲಿ ವಿವಾದವನ್ನು ಕೈಗಾರಿಕಾ ಪಂಚಾಯ್ತಿಗೆ ಒಪ್ಪಿಸುವುದನ್ನು ನಿಲ್ಲಿಸಲು ಇನ್ನೂ ಕಾಲ ಸನ್ನಿಹಿತವಾಗಿಲ್ಲವೆಂದು ಅಭಿಪ್ರಾಯ ವ್ಯಕ್ತಗೊಳಿಸಲಾಯಿತು.

ಇದು ಸಮ್ಮೇಳನದಲ್ಲಿ ಆದ ಮುಖ್ಯ ತೀರ್ಮಾನಗಳ ಸಂಕ್ಷಿಪ್ತ ವಿವರವಾಗಿದೆ.

ಅಲ್ಲದೆ ಸಮ್ಮೇಳನವು ಟ್ರೇಡ್ ಯೂನಿಯನ್‌ಗಳ ನಡುವೆ ಸಂಬಂಧದ ಬಗ್ಗೆ ಈ ಕೆಳಗಿನ ಸಲಹೆಗಳನ್ನು ಒಮ್ಮತ ದಿಂದ ಅಂಗೀಕರಿಸಿದೆ.

ಕೈಗಾರಿಕೆಯಲ್ಲಿರುವ ಪ್ರತಿಕಾರ್ಮಿಕನಿಗದ ತಾನು ಬಯಸುವ ಸಂಘಕ್ಕೆ ಸದಸ್ಯನಾಗಲು ಹಕ್ಕಿದೆ. ಈ ವಿಷಯದಲ್ಲಿ ಬಲಾತ್ಕಾರ ಮಾಡಕೂಡದು. ಒಂದೇ ಸಮಯದಲ್ಲಿ ಎರಡು ಸಂಘಗಳ ಸದಸ್ಯರಾಗಕೂಡದು. ಟ್ರೇಡ್ ಯೂನಿಯನ್‌ಗಳನ್ನು ನಡೆಸುವುದರಲ್ಲಿ ಪ್ರಜಾಪ್ರಭುತ್ವ ತತ್ವಗಳನ್ನು ಪರಿಪಾಲಿಸಬೇಕು; ಸಂಘದ ಅಧಿಕಾರ ವರ್ಗ ಮತ್ತು ಸಮಿತಿಯ ಸದಸ್ಯರ ಚುನಾವಣೆಯು ಪ್ರಜಾಪ್ರಭುತ್ವ ರೀತಿಯಲ್ಲಿ ಕ್ರಮವಾಗಿ ನಡೆಯಬೇಕು, ಇತ್ಯಾದಿ. ಇದಲ್ಲದೆ ಕೇಂದ್ರ ಟ್ರೇಡ್‌ಯೂನಿಯನ್ ಸಂಸ್ಥೆಗಳು ಈ ಬಗ್ಗೆ ಇನ್ನು ಹೆಚ್ಚಿನ ಸಲಹೆಗಳನ್ನೀಯಬೇಕೆಂದು ತೀರ್ಮಾನಿಸಲಾಯಿತು.

ಪಂಜಾಬಿನಲ್ಲಿ ಕಾಂಗ್ರೆಸ್ಸಿಗೆ ಸೋಲು

ಮಹಾಚುನಾವಣೆಗಳಲ್ಲಿ ಕೇಂದ್ರ ವಿದ್ಯಾ ಸಚಿವರಾಗಿದ್ದ ಮೌಲಾನಾ ಅಬ್ದುಲ್ ಕಲಾಂ ಆಜಾದ್‌ರವರು 95,000 ಅಧಿಕ ಮತಗಳಿಸಿ ಗುರುಗಾಯ್ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಅದೇ ಕ್ಷೇತ್ರದಲ್ಲಿ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರರಾದ ಪಂಡಿತ ಮೌಲ ಚಂದ್ರಶರ್ಮರವರು ಸುಮಾರು 40ಸಾವಿರ ಮತಗಳಿಂದ ಪರಾಜಿತರಾಗಿದ್ದಾರೆ. ಸ್ವತಂತ್ರ ಉಮೇದುವಾರರಾದ ಶ್ರೀ ಪ್ರಕಾಶ ವೀರಶಾಸ್ತ್ರಿಯವರು ಲೋಕಸಭೆಗೆ ಆರಿಸಿಬಂದಿದ್ದಾರೆ. ಇವರಿಗೆ ಜನಸಂಘ ಮತ್ತು ಆರ್ಯ ಸಮಾಜ ಹಾಗೂ ಹಿಂದೀವಾದಿಗಳ ಬೆಂಬಲವಿತ್ತು, ಜಾತೀಯವಾದಿ ಸಂಸ್ಥೆಗಳ ಬೆಂಬಲದಿಂದ ಆಯ್ಕೆಯಾಗಿದ್ದರೂ ಇವರ ಆಯ್ಕೆ ಕಾಂಗ್ರೆಸ್ಸಿನ ಸೋಲು ಗಮನಾರ್ಹವಾಗಿದೆ. ಇತ್ತೀಚಿಗೆ ನಡೆದಿರುವ ಉಪಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ಮೇಲಿಂದ ಮೇಲೆ ಸೋಲು ಸಂಭವಿಸುತ್ತಲೇ ಇದೆ. ಇದು ಕಾಂಗ್ರೆಸ್ಸಿನ ಪ್ರಭಾವವು ಕುಂದುತ್ತಿರುವುದಕ್ಕೆ ಹಾಗೂ ಕಾಂಗ್ರೆಸ್ಸಿನೊಳಗಿರುವ ಒಳಜಗಳ, ಲಂಚ ಖುಷುವತ್ತುಗಳು ತಾಂಡವವಾಡುತ್ತಿರುವುದಕ್ಕೆ ನಿದರ್ಶನವಾಗಿದೆ.

ಗುರ್‌ಗಾಂವ್ ಕ್ಷೇತ್ರದಲ್ಲಿ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರರಾಗಿದ್ದ ಶರ್ಮರವರು ಒಂದು ವರ್ಷದ ಹಿಂದೆ ಜನಸಂಘದ ಅಧ್ಯಕ್ಷರಾಗಿದ್ದವರು, ಈಗ ಕಾಂಗ್ರೆಸ್ ಸೇರಿ ಒಂದು ವರ್ಷವಾಗಿತ್ತು ಅಷ್ಟೆ. ಕಾಂಗ್ರೆಸ್ಸಿನ ಗುತ್ತೇದಾರಿಯಂತಿದ್ದ ಈ ಕ್ಷೇತ್ರದಲ್ಲಿ ಕಾಂಗ್ರೆಸ್ಸಿನ ಪರಾಜಯವಾಗಿರುವುದು ಇದೇ ಮೊದಲು

ಅಂತರರಾಷ್ಟ್ರೀಯ—

ಸಮಾಜವಾದೀ ರಾಷ್ಟ್ರಗಳ ಅಭೇದ್ಯ ಸ್ನೇಹ

(೨ನೇ ಪುಟದಿಂದ)

ರಲ್ಲಿ ೪,೧೯,೦೦೦ ಜನರನ್ನು ತಮ್ಮ ಸಾಯುಧ ಸೇನೆಗಳಿಂದ ಕಡಿಮೆ ಮಾಡುವುವು.

ಸೋವಿಯೆತ್ ಸರಕಾರದ ಪ್ರಸ್ತಾಪವನ್ನು ರಾಜಕೀಯ ಸಲಹಾ ಸಮಿತಿಯು ಅಂಗೀಕರಿಸಿತು. ವಾರ್ಸಾ ಒಡಂಬಡಿಕೆಯ ಪ್ರಕಾರ ರೂಮಾನಿಯದಲ್ಲಿ ನಿಲ್ಲಿಸಲಾದ ಸೋವಿಯೆತ್ ಪಡೆಗಳನ್ನು ಇಷ್ಟರಲ್ಲಿಯೇ ಅಲ್ಲಿಂದ ವಾಪಸು ಕರೆಸಿಕೊಳ್ಳುವುದರ ಕುರಿತು ರುಮಾನಿಯಾ ಗಣತಂತ್ರ ಸರಕಾರದ ಅಭಿಪ್ರಾಯವನ್ನು ಸಮಿತಿಯು ಒಪ್ಪಿಕೊಂಡಿತು.

ಸೋವಿಯೆತ್ ಸರಕಾರವು ಹಂಗರಿ ಸರಕಾರದೊಂದಿಗೆ ಸಮ್ಮತಿಸಿ, ಹಂಗರಿಯಲ್ಲಿರುವ ಸೋವಿಯತ್ ಪಡೆಗಳಲ್ಲಿ ಒಂದು 'ಡಿವಿಜನ್' (ತುಕಡಿ) ಸೇನೆಯನ್ನು ೧೯೫೮ರಲ್ಲಿ ಕಡಮೆ ಮಾಡಬೇಕೆಂದೂ, ಹಂಗರಿಯ ಪ್ರದೇಶದಿಂದ ಅದನ್ನು ವಾಪಸು ಕರೆಸಿಕೊಳ್ಳಬೇಕೆಂದೂ ನಿರ್ಣಯಿಸಲಾಯಿತು.

ಸೋವಿಯೆತ್ ಸರಕಾರದ ಈ ನಿರ್ಧಾರವನ್ನು ರಾಜಕೀಯ ಸಲಹಾಸಮಿತಿಯು ಒಪ್ಪಿಕೊಂಡಿತು.

ವಾರ್ಸಾ ಒಡಂಬಡಿಕೆಯ ರಾಜ್ಯಗಳ ಸಂಯುಕ್ತ ಸಾಯುಧ ಸೇನೆಗಳ ಚಟುವಟಿಕೆಗೆ ಸಂಬಂಧಿಸಿದ ಹಲವು ಸಂಘಟನಾತ್ಮಕ ಸಮಸ್ಯೆಗಳ ಮೇಲೆಯೂ ಕೂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ವಾರ್ಸಾ ಒಡಂಬಡಿಕೆಯ ಸದಸ್ಯ ರಾಜ್ಯಗಳ ಮತ್ತು 'ನಾಟೋ' ಕೂಟದ ಸದಸ್ಯರಾಜ್ಯಗಳ ಮಧ್ಯೆ ನಿರಾಕ್ರಮಣ ಒಪ್ಪಂದವನ್ನು ಮಾಡಿಕೊಳ್ಳುವ ಪಸ್ತಾಪವನ್ನು ಉತ್ತರ ಅಟ್ಲಾಂಟಿಕ್ ಒಡಂಬಡಿಕೆಯ (ನಾಟೋ) ಸದಸ್ಯರಾಜ್ಯಗಳಿಗೆ ಕಳಿಸಿಕೊಡಬೇಕೆಂದು ರಾಜಕೀಯ ಸಲಹಾ ಸಮಿತಿ ನಿರ್ಧರಿಸಿತು. ಸದರಿ ನಿರಾಕ್ರಮಣ ಒಡಂಬಡಿಕೆಗೆಂದು ಕರಡಿನ ಪೂರ್ತಿಪಾಠವನ್ನು ಪ್ರತ್ಯೇಕವಾಗಿ ಪ್ರಕಟಿಸಲಾಗಿದೆ.

ವಾರ್ಸಾ ಒಡಂಬಡಿಕೆಯ ಸದಸ್ಯ ರಾಷ್ಟ್ರಗಳ ರಾಜಕೀಯ ಸಲಹಾ ಸಮಿತಿಯ ಸಭೆಯ ಕಾರ್ಯಕ್ರಮಗಳು ಸಮಾಜವಾದೀ ದೇಶಗಳ ಅಭೇದ್ಯ ಸೋದರ ಸ್ನೇಹ-ಸಹಕಾರಗಳನ್ನೂ, ಸಂಪೂರ್ಣ ಒಮ್ಮತವನ್ನೂ ಪ್ರದರ್ಶಿಸಿವೆ. ಅಂತರರಾಷ್ಟ್ರೀಯ ಪ್ರಕ್ಷುಬ್ಧತೆಯ ಸಡಿಲತೆ, ರಾಜ್ಯಗಳೆಲ್ಲದರ ಮಧ್ಯೆ ಪರಸ್ಪರ ಭರವಸೆಯ ಮತ್ತು ವ್ಯವಹಾರೋಚಿತ ಸಹಕಾರದ ವಾತಾವರಣದ ನಿರ್ಮಾಣ—ಇವುಗಳ ಮೇಲೆ, ಶಾಂತಿಯ ಇತ್ಯೋಧಿಕ ಕ್ರೋಢೀಕರಣದ ಸಲುವಾಗಿ ಸಮಾಜವಾದೀ ರಾಜ್ಯಗಳು ತಮ್ಮ ಪ್ರಯತ್ನಗಳನ್ನು ಕೇಂದ್ರೀಕರಿಸುತ್ತಿವೆ.

"ತಾಸ್"

ಅತ್ಯಮೂಲ್ಯ ವಸ್ತು

— ಬಲ್ಗೇರಿಯನ್ ಲೇಖಕ ಗ್ರಾಜ್ದಾನೋವ್ ಅವರಿಂದ —

ಒಂದಾನೊಂದು ಕಾಲದಲ್ಲಿ ದೇವರು ಭೂಮಿಯನ್ನು ಹಂಚಿಕೊಡುತ್ತಿದ್ದಾಗ ನಮ್ಮ ಮನುಷ್ಯ ತಡಮಾಡಿ ಅಲ್ಲಿಗೆ ಹೋದ. ಮಧ್ಯ ದಾರಿಯಲ್ಲೇ ಆತನ ಚಪ್ಪಲಿಗಳು ಹರಿದು ಹೋದುದರಿಂದ ಅವುಗಳನ್ನು ದುರಸ್ತಿ ಮಾಡಿಕೊಳ್ಳಲು ಝರಿಯೊಂದರ ಬಳಿಯಲ್ಲಿ ಕುಳಿತುಕೊಂಡ. ಅಲ್ಲಿಯೇ ಇದ್ದ ಸುಂದರ ಮರದ ತಣ್ಣೆಳಲಿನಲ್ಲಿ ಅವನು ತನಗರಿವಿಲ್ಲದಂತೆಯೆ ನಿದ್ರೆಹೋಗಿಬಿಟ್ಟ. ಇದರಿಂದ ದೇವರಿಗೆ ಏನು ಮಾಡಬೇಕೆಂಬುದೇ ತಿಳಿಯಲಿಲ್ಲ. ಅವನಿಗೆ ಕೊಡಲು ಭೂಮಿ ಏನೂ ಉಳಿಯದ್ದರಿಂದ ಮನುಷ್ಯನನ್ನು ಬರಿಗೈಯಿಂದ ಕಳುಹಿಸಬೇಕಾಯಿತು. ಇದಕ್ಕೆ ಮನಸ್ಸಾಗದೆ ದೇವರು ತನಗಾಗಿ ಇಟ್ಟುಕೊಂಡಿದ್ದ ಭೂಮಿಯಲ್ಲೇ ಒಂದು ಭಾಗವನ್ನು ಕೊಡ್ಡುಬಿಟ್ಟ. ಆದರೆ ಅಷ್ಟಕ್ಕೇ ಸಮಾಧಾನವಾಗದೆ ದೆವ್ವನಿಗೆ ಕೊಟ್ಟಿದ್ದ ಭೂಮಿಯಲ್ಲಿಂದಲೂ ಒಂದಿಷ್ಟು ಕಿತ್ತುಕೊಂಡು ಅವನಿಗೆ ಕೊಟ್ಟ. ಅಂತೆಯೇ ನಮ್ಮ ಭೂಮಿ ಪೂರಾ ಒಳ್ಳೆಯದಾಗಿಲ್ಲ, ಅಥವಾ ಪೂರಾ ಕೆಟ್ಟದ್ದಾಗಿಲ್ಲ. ಆದರೆ ಜನ..............

ನಾನು ಗೋಣಿ ಚೀಲಗಳಲ್ಲೇ ಇನ್ನಿಷ್ಟು ಅನುಸರಿಸಿಕೊಂಡು ಅನುಕೂಲವಾಗಿ ಕುಳಿತುಕೊಂಡು ಗಾಡೀ ಹೊಡೆಯುತ್ತಿದ್ದ ಮುದುಕನ ಕಡೆಗೆ ಕಣ್ಣರಳಿಸಿ ನೋಡಿದೆ. ಧೂಳು ಒಂದೇಸಮನೆ ಒಳಗೆ ನುಗ್ಗುತ್ತಿತ್ತು. ಮೋಡದ ಪುಟ್ಟ ಪುಟ್ಟ ಪಟ್ಟಿಗಳು ಮೂಡಿದ್ದ ನೀಲಗಗನದ, ಶರದೃತುವಿನಲ್ಲಿ ಸಂಧ್ಯಾ ಪ್ರಕಾಶದಲ್ಲಿ ನಗ್ನಕ್ಷಿತಿಜ ಕರಗಿ ಹೋಗುತ್ತಿತ್ತು. ಎದುರು ದಿಕ್ಕಿನಿಂದ ಬೀಸುತ್ತಿದ್ದ ಉತ್ತರದ ತೀವ್ರವಾದ ಚಳಿಯಗಾಳಿ ಮೈ ಕೊರೆಯುತ್ತಿದ್ದುದರಿಂದ ಮುದುಕ ಕುರಿಯ ಚರ್ಮವನ್ನು ಹೊದ್ದುಕೊಂಡು ಆರಾಮಾಗಿರಲು ಯತ್ನಿಸಿದ. ಬಿಳಿಯ ಬಾನಿನಲ್ಲಿ ಕರೀ ಇಜ್ಜಲಿನಿಂದ ಬರೆದಿರುವಂತೆ ಆತನ ನೆರಳು ಚಿತ್ರ ಕಾಣುತ್ತಿತ್ತು. ಕಡಿದಾದ ದಾರಿಯಲ್ಲಿ ಓಡುತ್ತಿರುವ ಕುದುರೆಯ ಮೇಲೆ ಆತ ತನ್ನ ಚಬಕವನ್ನು ಆಡಿಸಿದಂತೆ ಅದು ತನ್ನ ನಡೆಯನ್ನು ವೇಗಗೊಳಿಸುತ್ತಿತ್ತು.

'ಗೀ-ಚಪ್! ಎಂದು ಮುದುಕ ಮತ್ತೆ ತನ್ನ ಚಬಕವನ್ನಾಡಿಸಿದ.

ಅಂತೆಯೆ ಜನರ ಬಗ್ಗೆ ಆತ....ತನ್ನ ಕತೆಯನ್ನು ಮುಂದೊರೆಸಿದ. ನಮ್ಮ ಜನ ಬಹಳ ಗಟ್ಟಿ ಮುಟ್ಟಾದವರು. ಸಾಮೂಹಿಕ ಸಹಕಾರಿ ವ್ಯವಸ್ಥೆ ಬಾಳುತ್ತದೆ, ಯಶಸ್ವಿಯಾಗುತ್ತದೆ ಎಂಬುದನ್ನು ನಮ್ಮ ಹಲವು ಜನಗಳು ನಂಬುವದಿಲ್ಲ. ಆದರೆ ನೋಡಿ—ಮಾಲಕ್ ದೋಲ್‌ನಲ್ಲಿ ಸಹಕಾರಿ ಕೃಷಿ ಅನೇಕ ವರುಷಗಳಿಂದ ಸ್ಥಿರವಾಗಿ ಬಾಳಿ ತುಂಬಾ ಬೆಳೆದಿದೆ. ಇದೀಗ ಗೋಲಿಯಾಮ್‌ದೋಲ್ ಮತ್ತು ಮಾರ್ಕೋವೋ ಗ್ರಾಮಗಳು ಕೂಡ ಈ ಸಹಕಾರಿ ವ್ಯವಸಾಯದಲ್ಲಿ ಸೇರಿಕೊಂಡಿವೆ. ಆದರೆ ನಮ್ಮ ಅಧ್ಯಕ್ಷ ಅಂಕಲ್ ಕೊಲಿಯು ಜಾರ್ಜೀವ್ ಅವರ ಅನುಭವೀ ಕಾರ್ಯಕ್ಷಮತೆಯಿಲ್ಲದಿದ್ದರೆ........

ನಮ್ಮ ಅಧ್ಯಕ್ಷ--ನಿಜವಾಗಲೂ ಅವರೊಬ್ಬ ನಿಜವಾದ ಮನುಷ್ಯ. ಜನ ಅವರ ಬಗ್ಗೆ ಗ್ರಂಥಗಳನ್ನು ಬರೆಯಬೇಕು. ಅವರು ಜನರಿಂದ ಭಿನ್ನವಾಗಿಲ್ಲವೆಂದು ನೀವು ಹೇಳಿದರೆ ಅದು ಸರಿಯೆ. ಇನ್ನುಳಿದ ಅನೇಕರಂತೆಯೇ ಅವರಿರುವುದು-ಕುಳ್ಳಗೆ ಗಾತ್ರವಾಗಿರುವರು. ನೇಗಿಲಿನ ಹಿಂದೆ ತಮ್ಮ ಹೆಜ್ಜೆಗಳನ್ನು ಎಣಿಸುವುದನ್ನು ಕಲಿತಿದ್ದಾರೆ. ಆತನಿಗೆ ವಯಸ್ಸಾಗಿದೆ. ಐವತ್ತು ಬೇಸಗೆಗಳನ್ನು ಕಂಡಿರುವ ಅವರ ಕೂದಲುಗಳು ಬೆಳ್ಳಗಾಗಿವೆ. ಅಂಕಲ್ ಕೊಲಿಯು ನಮ್ಮೊಂದಿಗೆ, ನಮ್ಮ ಕಷ್ಟ, ನೋವು ನರಳಾಟಗಳೊಂದಿಗೇ ಬೆಳೆದಿದ್ದಾರೆ, ಆದರ ಕಹಿಗಳನ್ನು ನಮಗಿಂತಲೂ ಉಂಡಿದ್ದಾರೆ. 1945ರಲ್ಲಿ ಸಹಕಾರಿ ಬೇಸಾಯದ ಆಡಳಿತವನ್ನು ಅವರ ಕೈಗಿತ್ತಾಗ ನಾವು ತಪ್ಪು ಮಾಡಿದೆವೆಂದೇನೆನಿಸಲಿಲ್ಲ.

ಆ ಕಾಲದಲ್ಲಿ ಕೆಲಸ ತುಂಬಾ ಇತ್ತು, ಕಠಿಣವಾಗಿತ್ತು. ಯಾರಿಗೂ ಯಾವುದೇ ಬಗೆಯ ಅನುಭವವಿರಲಿಲ್ಲ. ಆದರೂ ನಮ್ಮ ಅಧ್ಯಕ್ಷ ಯಾವುದಕ್ಕೂ ಹಿಂಜರಿಯಲಿಲ್ಲ, ಅಳುಕಲಿಲ್ಲ. ಅವರನ್ನು ನೋಡಿದರೆ ಸ್ನೇಹದೆಳೆ ಕಾಣುತ್ತಿತ್ತು. ಹೊಲಕ್ಕೆ ಹೊರಟಾಗ ದಾರಿಯಲ್ಲಿ ಕೊಂಚ ನಿಂತು ಜನರೊಡನೆ ಮಾತನಾಡುತ್ತಿದ್ದರು, ಹಾಸ್ಯದ ಚಟಾಕಿಗಳನ್ನು ಹಾರಿಸುತ್ತಿದ್ದರು. ಒಂದು ತಂಡದ ನಾಯಕನಾಗಿದ್ದ ಈವ್ತಿಮ್ ಕೊಲೇವ್ ಜನರ ಬಗ್ಗೆ ಅಲ್ಲದುದನ್ನು ಅರಚಿ ಅವರ ಜೀವನವನ್ನು ತುಂಬಾ ಸಂಕಟಕ್ಕೀಡು ಮಾಡಿರುವುದಾಗಿ ಒಮ್ಮೆ ದೂರು ಬಂತು. ಅಂಕಲ್ ಕೊಲಿಯು ಅದೇ ದಿನ ಅವನನ್ನು ಭೇಟಿ ಮಾಡಿ "ಒಳ್ಳೆಯದು, ಏನು ಈವ್ತಿಮ್ ಜನರ ಬಗ್ಗೆ ಕಿರಿಚಲು ನಿನಗೇನಾಗಿದೆ? ಅವರನ್ನು ನಿನ್ನ ಸ್ವಂತ ಜಮೀನಿನ ಬೇಸಾಯದ ಕಾರ್ಮಿಕರನ್ನಾಗಿ ನೀನು ಸ್ವೀಕರಿಸಿಲ್ಲವೇ? ಅಲ್ಲವೇ?"

ತಂಡದ ನಾಯಕ, ಆಗ ಇನ್ನೂ ಯುವಕನಾಗಿದ್ದ ಆತ, ಶೀಘ್ರಕೋಪಿ, ಸಿಡುಕು ಸ್ವಭಾವದವನು, ಧೃಢಪ್ರಕೃತಿಯವನು ಆಗಿದ್ದ ಆತ ತಲೆಬಾಗಿಸಿ ಹೇಳಿದ: "ಕೆಲಸವೆಲ್ಲ ನಿಂತುಹೋಗಿತ್ತು, ಹತ್ತಿ ಹೊಲವನ್ನು ಉಳಬೇಕಾಗಿತ್ತು. ವೈನ್ ಕೃಷಿ ಕಾಯುವಂತಿರಲಿಲ್ಲ, ನನಗೆ ಕಾಲವೂ ಇರಲಿಲ್ಲ".

ಈ ಪ್ರಪಂಚದಲ್ಲಿ ಅತ್ಯಮೂಲ್ಯ ವಸ್ತು ಯಾವುದು ?

'ಶಸ್ತ್ರಾಸ್ತ್ರಗಳು!' ಎಂದ ಯುವಕನೊಬ್ಬ.

'ಅಲ್ಲ, ಚಿನ್ನ!' ಎಂದರಿನ್ನೊಬ್ಬರು.

'ಊಹ್ಞೂ, ಈ ನೆಲ!' ಎಂದರಿನ್ನೊಬ್ಬರು.

'ಅಲ್ಲವೇ ಅಲ್ಲ........' ಎಂದ ಹಿರಿಯ ಜಾಣ ವೃದ್ಧನೊಬ್ಬ. ಈ ನೆಲವನ್ನು ಚೆಲುವಾಗಿರಿಸುವ, ಜೀವನದ ಪ್ರಮುಖ ಅಂಗಭೂತವಾಗಿರುವ ....

ಯಾರು? ಅವರೇ...........

"ಜನರ ಮೇಲೆ ಯಾಜಮಾನ್ಯ, ಮಾಲೀಕತ್ವವನ್ನು ಚಲಾಯಿಸುವದರಿಂದ ಕಾರ್ಯವಾಗುತ್ತವೆಯೆಂದು ತಿಳಿದಿದ್ದೀಯಾ? ಅದೇ ನಿನ್ನ ತಪ್ಪು ಮಗು! ನೀನು ಹೀಗೆ ಮುಂದೊರೆದರೆ ಜನರನ್ನು ನೀನು ಕಳೆದುಕೊಳ್ಳುತ್ತೀ".

"ಆದರೆ ಅತ್ಯಂತ ಅಮೂಲ್ಯವಾದ ವಸ್ತು ಭೂಮಿ" ಎಂದು ಈವ್ತಿಮ್ ಕೋಪದಿಂದ ಕಿರುಚಿದ.

"ಇಲ್ಲೊಂದಿಷ್ಟು ಕೇಳು" ಎಂದು ನುಡಿದು ಈವ್ತಿಮ್‌ನನ್ನು ತನ್ನೆಡೆಗೆ ಹೊರಳಿಸಿಕೊಂಡು ಕೆಳಗಿನ ಕತೆಯನ್ನು ಹೇಳಿದ:

"ಬಹಳ ಬಹಳ ಕಾಲದ ಹಿಂದೆ ಜಾಣರಾಗಿದ್ದ ಜನರು ಒಂದು ಸಂಜೆ ಅತ್ಯಮೂಲ್ಯ ವಸ್ತು ಯಾವುದೆಂಬುದನ್ನು ನಿರ್ಧರಿಸಲು ಅಗ್ಗಿಷ್ಟಿಗೆಯ ಬಳಿ ಸೇರಿದರು. ಅವರಲ್ಲಿಯ ಯುವಕನೊಬ್ಬ ಮೇಲೆದ್ದು ತಮ್ಮ ಕುಟುಂಬಗಳನ್ನು, ಮನೆಗಳನ್ನು, ಸಂಪತ್ತಿಯನ್ನು, ರಾಷ್ಟ್ರವನ್ನು ಸಂರಕ್ಷಿಸುವ ಶಸ್ತ್ರಾಸ್ತ್ರಗಳೇ ಅತ್ಯಮೂಲ್ಯ ವಸ್ತುಗಳೆಂದು ಹೇಳಿದ. ಶಸ್ತ್ರಾಸ್ತ್ರಗಳು ಅತ್ಯಮೂಲ್ಯ ವಸ್ತುವಲ್ಲವೆಂದಾದರೆ ವೈರಿಯು ಭೂಮಿಯನ್ನು, ಬಂಗಾರವನ್ನು, ನಮ್ಮ ಸ್ತ್ರೀಯರನ್ನು ದೋಚಿಕೊಳ್ಳುವದಲ್ಲದೆ ನಮ್ಮನ್ನು ಕೊಲ್ಲಬಹುದು ಇಷ್ಟೇ ಅಲ್ಲ, ನಮ್ಮನ್ನು ಗುಲಾಮರನ್ನಾಗಿಸಬಹುದು ಎಂದೂ ಮುಂದೊರೆದು ಹೇಳಿದ. "ಅಲ್ಲ ಅಲ್ಲ!" ಎಂಬ ಇನ್ನೊಂದು ಧ್ವನಿ ಬಲವಾಗಿ ಕೂಗಿತು. "ಅತ್ಯಂತ ಅಮೂಲ್ಯವಾದ ವಸ್ತುವೆಂದರೆ ಚಿನ್ನ. ಯಾಕೆಂದರೆ ಅದರಿಂದ ಅನ್ನ—ಅರಿವೆ—ಶಸ್ತ್ರಾಸ್ತ್ರಗಳನ್ನು ಕೊಳ್ಳಬಹುದು, ಇಷ್ಟೇ ಅಲ್ಲ, ವೈರಿಗಳನ್ನು ಕೂಡ ಕೊಳ್ಳಬಹುದು" ಎಂದನಾತ. ಅಷ್ಟರಲ್ಲೇ ಮೂರನೆಯ ಧ್ವನಿ "ಅತ್ಯಮೂಲ್ಯ ವಸ್ತುವೆಂದರೆ ಭೂಮಿ, ನಾವು ವಾಸ ಮಾಡುವ ಭೂಮಿ" ಎಂದಿತು. "ಇದು ನಮ್ಮ ಪೂರ್ವಿಕರ ನೆತ್ತರಿನಿಂದ, ನಮ್ಮ ಬೆವರಿನಿಂದ ಸಿಂಚಿತವಾಗಿದೆ. ಇದು ನಮ್ಮನ್ನು, ನಮ್ಮ ಮಕ್ಕಳನ್ನು ಪೋಷಿಸುತ್ತದೆ. ವೈರಿಗಳು ಅದನ್ನು ಹೆದರಿಸಿದಾಗ ಚಿನ್ನವನ್ನೆಲ್ಲ ಕೂಡ ತೆತ್ತು ಶಸ್ತ್ರಾಸ್ತ್ರಗಳನ್ನಿತ್ತು ಅವರ ಸಂರಕ್ಷಣೆಗೆ ನಾವೆಲ್ಲ ಎದ್ದು ನಿಲ್ಲುತ್ತೇವೆ" ಎಂದು ಆತ ತನ್ನ ಮಾತು ಮುಗಿಸಿದಾಗ ಅವರಲ್ಲಿ ಹಿರಿಯನೂ, ಜಾಣನೂ ಆಗಿದ್ದವನೊಬ್ಬ ಮೇಲೆದ್ದು ಹೇಳಿದ: "ಈ ಪ್ರಪಂಚದಲ್ಲಿ ಅತ್ಯಮೂಲ್ಯ ವಸ್ತುವೆಂದರೆ....." ಮುದುಕ ನಿಧಾನವಾಗಿ ಹೇಳತೊಡಗಿದ. "ಜನರು, ಅತ್ಯಮೂಲ್ಯ ವಸ್ತು ಜನರೇ. ಜನರಿಲ್ಲದಿದ್ದರೆ ಚಿನ್ನವೇನು? ಭೂಮಿಯೇನು? ಶಸ್ತ್ರಾಸ್ತ್ರಗಳೇನು? ಮಾನವ ಜೀವಿಗಳೇ ಜೀವನದ ಅಂಗಭೂತವಾಗಿರುವವರು. ಮನುಷ್ಯರ ಶ್ರಮ ಈ ಭೂಮಿಯನ್ನು ಚೆಲುವಾಗಿಸಿದೆ, ಶ್ರೀಮಂತವಾಗಿಸಿದೆ. ಜನರು ಸ್ನೇಹ-ಶಾಂತಿಗಳಲ್ಲಿರಲು ಸಹಾಯಕವಾಗಿದೆ. ಆಗ ಯಾರಿಗೂ ಶಸ್ತ್ರಾಸ್ತ್ರಗಳು ಬೇಕಾಗಿಲ್ಲ, ಚಿನ್ನವಿಲ್ಲದೆಯೇ ಜನರು ಜೀವಿಸಬಹುದು, ಆಗ ಎಲ್ಲರಿಗೂ ಭೂಮಿ ಇರುತ್ತದೆ."

"ನೋಡಿದ್ಯಾ ಈವ್ತಿಮ್?" ಕತೆಯನ್ನು ಮುಗಿಸುತ್ತಿರುವಂತೆಯೇ ಅಂಕಲ್ ಕೊಲಿಯಾ ಮತ್ತೆ ಕೇಳಿದ.

"ಸುಮ್ಮನೆ ಜನರನ್ನು ಛೀಗಳೆದರೇನಾಯಿತು? ಹೆದರಿಸಿದರೇನಾಯಿತು? ಒಮ್ಮೆ ನಾವು ಕೆಲಸ ಪೂರ್ಣ ಮಾಡಬಹುದು. ಒಮ್ಮೆಯಲ್ಲ, ಎರಡು ಸಲವಲ್ಲ, ಮೂರು ಸಲವಲ್ಲ ಮುಗಿಸಬಹುದು. ಆದರೆ ಆ ಮೇಲೆ? ಆಮೇಲೆ ಅವರು ನಮ್ಮಿಂದ ದೂರ ಓಡಿಹೋಗುತ್ತಾರೆ ಅಷ್ಟೆ."

ಈವ್ತಿಮ್ ಸುಮ್ಮನೆ ಕುಳಿತುಕೊಂಡ. ಜನರ ಬಗ್ಗೆ ತನ್ನಲ್ಲಿರುವ ನೀತಿಯನ್ನು ಬದಲಾಯಿಸುವದಾಗಿ ಆಶ್ವಾಸನೆಯಿತ್ತ.

ಅಂತೆಯೇ ನಮ್ಮ ರೈತರು ಅಧ್ಯಕ್ಷರನ್ನು ಅಷ್ಟಾಗಿ ಪ್ರೀತಿಸುವುದು. ಯಾಕೆಂದರೆ ನೆಲ ಅವರಿಗೆ ಚೆನ್ನಾಗಿ ಗೊತ್ತು, ಜನ, ಜನರ ಸ್ವಭಾವ ಅವರಿಗೆ ಚೆನ್ನಾಗಿ ಗೊತ್ತು. ಅವರೊಂದಿಗೆ ಅವರು ಕೆಲಸ ಮಾಡುತ್ತಾರೆ, ಅವರೊಂದಿಗೆ ಬಳಕೆ ಇಟ್ಟುಕೊಂಡಿದ್ದಾರೆ. ಅವರು ಸಹಕಾರಿ ಕೃಷಿಯ ರೈತರನ್ನು ಒಳ್ಳೆಯ ದಾರಿಯಲ್ಲಿ ನಡೆಸಿಕೊಂಡು ಹೋಗುತ್ತಿದ್ದಾರೆ, ಯಾವಾಗಲೂ ಅವರೊಂದಿಗೇ ಕೆಲಸ ಮಾಡುತ್ತಾರೆ, ಜಾಣತನದ ಸಲಹೆಗಳನ್ನು ನೀಡುತ್ತಾರೆ, ಮತ್ತು ಸಾಮೂಹಿಕ ಪ್ರಯತ್ನದಿಂದ ಭೂಮಿಯನ್ನು ಪುನರ್‍ರೂಪಗೊಳಿಸುತ್ತಿದ್ದಾರೆ. ಅವರೇನು ಮಾಡಿದರೆಂಬುದು ನನಗೆ ಗೊತ್ತಿಲ್ಲ. ಆದರೆ ಕಟ್ಟಡದ ಸಾಮಾನು ಸಲಕರಣೆಗಳು, ಅನೇಕ ಬಗೆಯ ಗೊಬ್ಬರಗಳು, ಮತ್ತು ಯಂತ್ರಜ್ಞರೂ ಹಳ್ಳಿಗೆ ಪ್ರಥಮ ಪಂಚ ವಾರ್ಷಿಕ ಯೋಜನೆಯ ಕಾಲಕ್ಕೆ ಆಗಮಿಸಿದರು. ಆಮೇಲೆ ಕಾರ್ಯಾರಂಭವಾಯಿತು. ಕಾಲುವೆಗಳನ್ನು ತೋಡಿದೆವು, ಪಂಪ್ ಹಾಕಿದೆವು. ಕೃಷೀ ಭವನಗಳನ್ನು ಕಟ್ಟಿದೆವು. ಹೀಗೆ ಯೋಜನೆಯ ತಳಹದಿಯ ಮೇಲೆ ಹಳ್ಳಿಯೊಂದನ್ನು ಪುನರ್ರಚಿಸಿದೆವು. ನಾವು ವಿದ್ಯುಚ್ಛಕ್ತಿಯನ್ನು ಕೇಳಿದೆವು ಅದು ಬಂತು. ಸಂಗೀತ ಬೇಕೆಂದೆವು, ರೇಡಿಯೊ ಬಂತು. ನಮಗೆ ಮನೆಗಳು ಬೇಕಾದುವು, ಹೊಸ ಮನೆಗಳನ್ನೇ ಕಟ್ಟಿದೆವು. ಕೆಲಸ ತುಂಬಾ ಇದೆ, ಕಠಿಣವೂ ಆಗಿದೆ ಎಂದು ದೂರು ಕೊಟ್ಟೆವು, ಟ್ರಾಕ್ಟರ್ ಡ್ರೈವರ್‌ಗಳು ಬಂದರು. ಸ್ವತಃ ಅಂಕಲ್ ಕೊಲಿಯು ಕ್ಷಣವೂ ನಿಲ್ಲದೆ ಕಾರ್ಯ ಮಾಡಿದರು. ಅವರು ಪ್ರತಿ

(ಕೊನೇ ಪುಟ ನೋಡಿ)

ಬೇಕು

"ಜನಶಕ್ತಿ"ಯ ನೀತಿ-ಧ್ಯೇಯಗಳಿಗೊಪ್ಪುವ ಕಲಾತ್ಮಕವಾದ ಸಣ್ಣ ಕತೆಗಳಿಗೆ 'ಜನಶಕ್ತಿ' ಸ್ವಾಗತ ನೀಡುತ್ತದೆ. ಈ ಪತ್ರಿಕೆಯಲ್ಲಿ ಪ್ರಕಟವಾಗುವ ಕತೆಗಳು ಒಂದು ಪುಟಕ್ಕೆ ಜಾಸ್ತಿಯಾಗಿರಬಾರದು. ಅಚ್ಚುಕಟ್ಟಾಗಿ ಒಂದೇ ಮಗ್ಗುಲಿಗೆ ಬರೆದಿರಬೇಕು. ಅನುವಾದಿತ ಕತೆಗಳಾಗಿದ್ದರೆ ಮೂಲವನ್ನು ಸ್ಪಷ್ಟವಾಗಿ ತಿಳುಹಿಸಿರಬೇಕು.

ಕೇರಳ ಶಿಕ್ಷಣ ಮಸೂದೆಯನ್ನು ವಿರೋಧಿಸಿದ ಪ್ರತಿಗಾಮಿಗಳ ಯಶಸ್ವೀ ಹಿನ್ನಡೆ!

(ಮೊದಲನೇ ಪುಟದಿಂದ)

ಟ್ಟುವಾಗಲೇ ಹುಗಿಯಲ್ಪಿಸಿದರು. ಕೊನೆಗೆ ಸುಪ್ರೀಂ ಕೋರ್ಟಿಗೂ ದೂರು ಹೋಯಿತು. ಫಲಿತಾಂಶ-ವಿರೋಧಿಗಳಿಗೆ ವಿರುದ್ಧವಾಗಿತ್ತು.

ಕೇರಳದ ವಿದ್ಯಾ ಮಂತ್ರಿ ಪ್ರೊ|| ಮುಂಡಸ್ಸೇರಿ "ನಾವು ವಿಜಯಿಗಳಾದೆವು" ಎಂದು ಘೋಷಿಸಿದರು. ವಾಸ್ತವಿಕವಾದ ಈ ವಿಜಯ ವಿರೋಧಿಗಳನ್ನು ಕೆರಳಿಸಿತು. ಅವರು ಸೋತ ರೋಷ ಮೊರೆಯಿತು. ಸೋತರೂ ಮೀಸೆಗೆ ಮಣ್ಣು ಹತ್ತಲಿಲ್ಲ ಎಂಬಂತೆ ಅದರೂ ಪ್ರತಿ ಘೋಷಣೆ ಮಾಡಿದರು.

ಸ್ವತಃ ಪ್ಲಾಂಟರೂ 'ಕೇರಳ ಭೂಷಣಂ' ಪತ್ರಿಕೆಯ ಸಂಚಾಲಕರೂ ಆದ ಎ. ವಿ. ಜಾರ್ಜ್ "ಬಿಲ್ಲು ವಾಪಸ್ಸಾಗುತ್ತಿರುವುದು ನಿಮ್ಮ ವಿಜಯವೋ ನಮ್ಮದೋ? ಯೋಚಿಸಿ" ಎಂದು ಮುಂಡಸ್ಸೇರರಿಗೆ ಹೇಳಿದರು.

ಕಾಥೋಲಿಕ್ ಪತ್ರಿಕೆ "ದೀಪಿಕಾ" ಹೇಳಿತು "ರಾಷ್ಟ್ರಾಧ್ಯಕ್ಷರು ಈಗ ಮಸೂದೆಗೆ ಸಮ್ಮತಿ ನೀಡಬಹುದು ಇಲ್ಲವೆ ಮತ್ತೆ ಸುಪ್ರೀಮ್ ಕೋರ್ಟಿಗೆ ಕಳಿಸಬಹುದು. ನ್ಯಾಯಾಲಯ ಎಷ್ಟೋ ಕಲಮುಗಳನ್ನು ಪರಿಶೀಲಿಸಿಯೇ ಇಲ್ಲ."

ಮುಸ್ಲಿಂ ಲೀಗ್ ಪತ್ರಿಕೆ "ಚಂದ್ರಿಕಾ" ಹೇಳಿತು "ರಾಷ್ಟ್ರಾಧ್ಯಕ್ಷರಿಂದ ಈ ಮಸೂದೆ ತಿರಸ್ಕರಿಸಲ್ಪಡುತ್ತದೆ. ಅದು "ಸುತ್ತುವ ದೆವ್ವ"ನಂತೆ ತ್ರಿವೇಂದ್ರಮ್ಮಿಗೆ ವಾಪಸಾಗುತ್ತದೆ. ಈ ಮಸೂದೆಯನ್ನು ಪರಿಷ್ಕರಿಸುವುದಕ್ಕಿಂತ ಸಂಪೂರ್ಣ ತಳ್ಳಿಬಿಡುವುದೇ ವಾಸಿ".

ಪಟ್ಟಂಥಾನು ಪಿಳ್ಳೆಯವರ (ಪಿ. ಎಸ್. ಪಿ.) 'ಕೇರಳ ಜನತಾ' ಪತ್ರಿಕೆ ಹೇಳಿತು: "ಸುಪ್ರೀಮ್ ಕೋರ್ಟಿನ ತೀರ್ಪು ಅಲ್ಪಸಂಖ್ಯಾತರ 'ಮಾಗ್ನಾಕಾರ್ಟಾ' ಆಗಿದೆ, 'ಸುಪ್ರೀಮ್ ಕೋರ್ಟಿನ ರೂಲಿಂಗ್ ಒಟ್ಟು ಮಸೂದೆಯ ಸ್ವಭಾವವನ್ನು ಬದಲಾಯಿಸುವುದಿಲ್ಲ' ಎಂಬ ಶಿಕ್ಷಣ ಸಚಿವರ ಅಭಿಪ್ರಾಯವನ್ನು ಕಟುವಾಗಿ ಟೀಕಿಸಿದೆ."

ಆದರೆ ತ್ರಿವೇಂದ್ರಮ್ಮಿನ ಸ್ವತಂತ್ರ ಪತ್ರಿಕೆ "ಕೇರಳ ಕೌಮುದಿ" ಹೀಗೆ ಹೇಳಿತು. "ಮುಂಡಸ್ಸೇರಿಯವರ ಮಸೂದೆ ರಾಜ್ಯದ ಉಪಾಧ್ಯಾಯರುಗಳ 'ಮಾಗ್ನಾ ಕಾರ್ಟಾ' ಆಗಿದೆ. ಮಸೂದೆಯಲ್ಲಿ ಏನೇ ಬದಲಾವಣೆಗಳಾಗಲಿ, ಅದರಲ್ಲಿಯ ೮ ಮತ್ತು ೧೧ನೇಯ ಕಲಮುಗಳಿರುವವರೆಗೂ ಮಸೂದೆಯ ನಿರ್ಮಾತೃಗಳ ಉದ್ದೇಶ ಸಾಧಿಸಿಯೇ ಸಾಧಿಸಿದಂತೆ." ಅವರೇ ವಿಜಯಿಗಳು.

ಇದಕ್ಕೆ ಕೋಮುವಾರ ಬಣ್ಣವನ್ನು ಬಳಿದುದಕ್ಕಾಗಿ ವ್ಯಥೆಪಟ್ಟ ಈ ಪತ್ರಿಕೆ ಖಾಸಗೀ ಶಾಲೆಯಲ್ಲಿರುವ ಉಪಾಧ್ಯಾಯರುಗಳ ಸಂಬಳ ಮತ್ತು ನೌಕರಿಯ ಭದ್ರತೆ, ಸ್ಥಿತಿ-ಗತಿಗಳನ್ನು ಸುಧಾರಿಸುವಂಥದ್ದೂ, ರಕ್ಷಿಸುವಂಥದೂ ಇದಾಗಿದೆ ಎಂದೂ ಮಸೂದೆಯ ಬಗ್ಗೆ ಹೇಳಿತು.

ಇದರಂತೆಯ ವಿರೋಧಿ ಬಣ್ಣದ ಮುಂದಳದಲ್ಲಿರುವ ಕ್ಯಾಥೋಲಿಕ್‌ರೂ, ಅವರ ಖಾಸಗೀ ಶಾಲೆಗಳ ವ್ಯವಸ್ಥಾಪಕ ವರ್ಗವೂ ಈ ಮಸೂದೆಯಲ್ಲಿ ರಾಷ್ಟ್ರಾಧ್ಯಕ್ಷರು ತೀವ್ರವಾದ ಬದಲಾವಣೆಗಳನ್ನು ಮಾಡುವರೆಂದು ವ್ಯರ್ಥವಾಗಿ ಆಶಿಸಿವೆ.

"ಕೇರಳ ಕೌಮುದಿ" ಪತ್ರಿಕೆಯ ಪ್ರತಿನಿಧಿ ತ್ರಿಚೂರಿನಿಂದ ವರದಿನಾಡುತ್ತ ಕ್ಯಾಥೊಲಿಕ್ ವಿಶ್ವವಿದ್ಯಾನಿಲಯವೊಂದನ್ನು ಸ್ಥಾಪಿಸಿ ರಾಜ್ಯಾಂಗದತ್ತವಾದ ಅಲ್ಪ ಸಂಖ್ಯಾತರ ಹಕ್ಕು ಬಾಧ್ಯತೆಗಳನ್ನು ರಕ್ಷಿಸುವುದು ಹಾಗೂ ಕ್ಯಾಥೊಲಿಕ್ ವ್ಯವಸ್ಥೆಯಲ್ಲಿ ಶಿಕ್ಷಣವನ್ನು ನೀಡಲು ಯೋಚಿಸುತ್ತಿದ್ದಾರೆಂದು ತಿಳುಹಿಸಿದ. ಕ್ಯಾಥೊಲಿಕ್ ಧರ್ಮಗುರುಗಳು ತ್ರಿಚೂರಿನ ಬಿಷಪ್ಪರ 'ಅರಮನೆ' ಯಲ್ಲಿ ರಹಸ್ಯ ಸಭೆಯೊಂದನ್ನು ನಡೆಸಿ ಐರ್ಲೆಂಡ್‌ನಲ್ಲಿರುವ ಕ್ಯಾಥೊಲಿಕ್ ವಿಶ್ವವಿದ್ಯಾಲಯದ ಯಶಸ್ವಿನ ಸ್ಫೂರ್ತಿಯಿಂದ ಈ ತೀರ್ಮಾನಕ್ಕೆ ಬಂದರೆಂದು ಹೇಳಲಾಗಿದೆ.

ಅಧಿಕಾರೀ ವಲಯಗಳಲ್ಲಿ ಈ ವಿಷಯದಲ್ಲಿ ಶಾಂತಿ ಗಂಭೀರತೆಗಳಿದ್ದು ಮಸೂದೆ ಕಾನೂನು ಆಗುವ ದಾರಿಯಲ್ಲಿ ಕೇಂದ್ರ ಸರಕಾರ (ಈ ವಾದಗ್ರಸ್ತ ವಿಷಯದಲ್ಲಿ) ಬಹುಕಾಲ ನಿಲ್ಲುವುದಿಲ್ಲವೆಂದು ಭಾವಿಸಲಾಗಿದೆ.

ಸಾರ್ವಜನಿಕ ಅಭಿಪ್ರಾಯ ಮಸೂದೆ ಬೇಗನೆ ಕಾನೂನಾಗಬೇಕೆಂದಿದ್ದು ಅಸಕ್ತರು ತಮ್ಮ ವ್ಯಕ್ತಿಗತವಾದ ಹೋರಾಟಗಳನ್ನು ನಡೆಸಿಕೊಂಡು ಹೋಗಲಿ ಎಂಬುವಂತಿದೆ. ಈ ಕಾನೂನು ಬೇಗನೆ ಜಾರಿಯಲ್ಲಿ ಬರಲೆಂಬುದೇ ಅವರ ಹಾರೈಕೆ.

ಕಮ್ಯೂನಿಸ್ಟ್ ಪತ್ರಿಕೆಗಳು ಉತ್ಸಾಹಪೂರಿತವಾದ ಧೀರವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದವು:

"ಕಾಂಗ್ರೆಸ್ಸಿಗರು ಕ್ಯಾಥೊಲಿಕ್ ಚರ್ಚಿನ ಜವಾನರಂತಹ ನಾಚಿಗ್ಗೇಡಿಯಾದ ಪಾತ್ರವನ್ನಾಡುವುದನ್ನು ಇನ್ನಾದರೂ ಬಿಡಲಿ." (ಜನಯುಗ)

"ಪ್ರಜಾಪ್ರಭುತ್ವ ಶಕ್ತಿಗಳ ಪರಮ ವಿಜಯವಿದು. ಭಾರತದಲ್ಲಿಯ ಹಾಗೂ ಕೇಂದ್ರ ಸರ್ಕಾರದಲ್ಲಿಯ ಪ್ರತಿಗಾಮಿ ಶಕ್ತಿಗಳ ವಿರುದ್ಧದ ಪ್ರಜಾಪ್ರಭುತ್ವವಾದೀ ಶಕ್ತಿಗಳು ಸಂಪಾದಿಸಿದ ವಿಜಯ (ದೇಶಾಭಿಮಾನಿ) ಎಂದು ಬರೆದುವು.

ಮಸೂದೆಯಲ್ಲಿರುವ ಪ್ರಮುಖ ಕಲಮುಗಳಿಗೆ, ಯಾವ ಅಪಾಯವೂ ಆಗಿರದಿದ್ದರೂ ವಿರೋಧಿಗಳು, ಪ್ರತಿಗಾಮಿಗಳು ವಿಜಯ ತಮ್ಮದೇ ಎಂದು ಹೇಳುತ್ತಿರುವುದು ಸೋಜಿಗವಾಗಿದೆ. ಪ್ರತಿಗಾಮಿಗಳ ನಡೆ ಯಾವಾಗಲೂ ಯಶಸ್ವಿ ಹಿನ್ನಡೆ!

ತಪ್ಪು — ಸರಿ

ಪುಟ ೩ ಮತ್ತು ೬ ಗಳನ್ನು ೭ ಮತ್ತು ೮ ಎಂದು ಓದಿಕೊಳ್ಳಬೇಕಾಗಿ ವಿನಂತಿ.

ಮೂವತ್ತು ಸಾವಿರ ಮುನಿಸಿಪಲ್ ಕೆಲಸಗಾರರ ಮುಷ್ಕರ

ಬೊಂಬಾಯಿ ಮುನ್ಸಿಪಲ್ ಕಾರ್ಪೋರೇಷನ್ನಿನ ಮೂವತ್ತು ಸಹಸ್ರ ಕೆಲಸಗಾರರು ಜೂನ್ 14 ನೆಯ ತಾರೀಖಿನಿಂದ ಅನಿಯಮಿತ ಅವಧಿಯವರೆಗೆ ಮುಷ್ಕರದ ಮೇಲೆ ಹೋಗಲು ನಿರ್ಧರಿಸಿದ್ದಾರೆ.

ಅವರ ಬೇಡಿಕೆ: ತುಟ್ಟಿಭತ್ಯೆಯಲ್ಲಿ 5 ರೂಪಾಯಿಯ ಹೆಚ್ಚಳವನ್ನು ಕೂಡಲೆ ಮಂಜೂರಿ ಮಾಡಬೇಕು ಎಂಬುದಾಗಿದೆ.

ಸೋಷಿಯಲಿಸ್ಟ್ (ಡಾ|| ಲೋಹಿಯಾರ ಪಕ್ಷ) ಹತೋಟಿಯಲ್ಲಿರುವ ಮುನಿಸಿಪಲ್ ಮಜ್ದೂರ್ ಯೂನಿಯನ್ ಕಳೆದ ವಾರ ಮುನ್ಸಿಪಲ್ ಕಮಿಷನರ್‌ರವರಿಗೆ ತನ್ನ ಸದಸ್ಯ ಸಮೂಹದ ಪರವಾಗಿ ಮುಷ್ಕರ ನೋಟೀಸನ್ನು ಕೊಟ್ಟಿದೆ. ಈ ಸದಸ್ಯ ಸಮೂಹದಲ್ಲಿ ಭಂಗಿಗಳೂ, ಬೀದಿ ಗುಡಿಸುವವರೂ, ನೀರು ಸರಬರಾಜು ಶಾಖೆಯ ಕೆಲಸಗಾರರೂ, ಆಸ್ಪತ್ರೆ, ಪೇಟೆ, ಉದ್ಯಾನಗಳಲ್ಲಿಯ ಕೆಲಸಗಾರರೂ ಇರುವರು.

ಆದರೆ ಇವರಲ್ಲಿಯ ಗುಮಾಸ್ತ ವರ್ಗದವರು ಮಾತ್ರ ಮುಷ್ಕರದಲ್ಲಿ ಸೇರಿಕೊಳ್ಳುವುದಿಲ್ಲವಾಗಿ ಹೇಳಿದ್ದಾರೆ. ಹೆಚ್ಚಳದ ಭತ್ತೆಯ ಈ ಬೇಡಿಕೆಯನ್ನು ಔದ್ಯೋಗಿಕ ಟ್ರಿಬ್ಯೂನಲ್‌ಗೆ ಒಪ್ಪಿಸಬೇಕೆಂಬ ಕಾರ್ಪೊರೇಷನ್ನಿನವರ ಸಲಹೆಗೆ ಇವರು ಒಪ್ಪಿಕೊಂಡಿದ್ದಾರೆ. ಈ ಸಲಹೆಯನ್ನು ತಿರಸ್ಕರಿಸಿದ ಕಾರ್ಮಿಕ ವರ್ಗ ಮುಷ್ಕರದ ನಿರ್ಧಾರಕ್ಕೆ ಬಂದಿದೆ.

• ಪ್ರಮುಖ ಕಾರ್ಪೋರೇಟರುಗಳ ಮನೆಯ ಮುಂದೆ ಪ್ರದರ್ಶನಗಳನ್ನು ನಡೆಸಲು ಕಾರ್ಮಿಕರ ತಂಡಗಳನ್ನು ತರಬೇತು ಗೊಳಿಸಲಾಗಿದೆ.

ಅತ್ಯಮೂಲ್ಯ ವಸ್ತು

(೯ನೇ ಪುಟದಿಂದ)

ಯೊಬ್ಬರಿಗೂ ಸಹಾಯ ನೀಡಿ ಪ್ರತಿಯೊಂದು ಕಾರ್ಯವೂ ಸರಿಯಾಗಿ ಆಗುವಂತೆ ನೋಡಿಕೊಂಡರು. ವಿಜ್ಞಾನದಿಂದ ಕೂಡ ಆತ ಬೇರೆಯಾಗಿರಲಿಲ್ಲ. ಚಿರ್ಪ್ವಾನಾದಲ್ಲಿ ಹತ್ತಿಯ ಸಂಸ್ಥೆಯೊಂದಿದೆ. ಕೃಷಿಕ್ಷೇತ್ರದಿಂದ ಅದು ಅಷ್ಟೇನು ದೂರವಾಗಿಲ್ಲ. ಪ್ರತಿವಾರವೂ ಯಾರಾದರೂ ಹತ್ತಿಯ ಸಂಸ್ಥೆಯಿಂದ ಇಲ್ಲಿಗೆ ಬರುತ್ತಾರೆ, ಪ್ರತಿಯೊಂದನ್ನೂ ಪರೀಕ್ಷಿಸುತ್ತಾರೆ, ನಿರೀಕ್ಷಿಸುತ್ತಾರೆ ಮತ್ತು ಸಲಹೆಗಳನ್ನು ನೀಡುತ್ತಾರೆ. ಅವರನ್ನು ಗೌರವದಿಂದ ಕಾಣಬೇಕೆಂದೂ, ಅವರ ಪ್ರಯೋಗಗಳಲ್ಲಿ ಸಹಕಾರ ನೀಡಬೇಕೆಂದೂ ಅಂಕಲ್ ಕೊಲಿಯು ನಮಗೆ ತಿಳುಹಿಸಿ ಕೊಟ್ಟಿದ್ದಾರೆ. ಅವರು ನಮಗೆ ತುಂಬಾ ಸಹಾಯನೀಡಿದ್ದಾರೆ. ನಮಗೇನು ಕಲಿಸಿಕೊಟ್ಟರೋ ಅವನ್ನೆಲ್ಲ ನೇರವೇರಿಸಿದ್ದೇವೆ. ನಾವು 16070 ಕಿಲೋಗ್ರಾಮ್ ರೇಷ್ಮೆಯಂತಹ ಹತ್ತಿಯನ್ನು ಪ್ರತಿಯೊಂದು ಡೆಕ್ರೆಗೂ ಬೆಳೆದಿದ್ದೇವೆ. ಅದೆಷ್ಟು ದ್ರಾಕ್ಷೆಯನ್ನೂ ದ್ರಾಕ್ಷಾರಸವನ್ನೂ ನಾವು ಉತ್ಪಾದಿಸಿದ್ದೇವೆ ಎಂಬುದು ನಿಮಗೆ ಗೊತ್ತೊ? ದಪ್ಪಗೆ, ಹೊಳೆಯುವ ದ್ರಾಕ್ಷಾರಸ. ದೈವಿಕ ಅಮೃತ......ಎಂದು ಹೇಳುತ್ತಾರೆ ನಮ್ಮ ಉಪಾಧ್ಯಾಯರು. ಆಲಿಂಪಸ್‌ನ ದೇವರುಗಳು ಮಾತ್ರ ಇಂಥ ಮಧುವನ್ನು ಕುಡಿದರಂತೆ! ನಮ್ಮ ಭೂಮಿ ಫಲಭರಿತವಾಗಿದೆ, ಶ್ರೀಮಂತವಾಗಿದೆ! ನಾವೇ ಇದನ್ನು ಮಾಡಿದವರು, ನಾವೇ, ಜನರು— ನಮ್ಮ ಅಧ್ಯಕ್ಷರು ಹೇಳುವಂತೆ ಜೀವನದಲ್ಲಿ ಅತ್ಯಮೂಲ್ಯ ವಸ್ತುವಾದ ನಾವು ಜನರು ಮಾಡಿದುದು.

o o o o

ಬಂಡಿಯನ್ನು ಹೊಡೆಯುತ್ತಿದ್ದ ಮುದುಕ ಮುಂದೆ ಬಾಗಿ ಚಬುಕವನ್ನಾಡಿಸಿ ಸಣ್ಣಗಿನ ತೀಕ್ಷ್ಣ ಧ್ವನಿಯಲ್ಲಿ ಕೂಗಿದ "ಗೀ......ಚಪ್" ಕುದುರೆಗಳು ಧೂಳನ್ನು ಹಾರಿಸಿದವು, ಬಲವಾಗಿ ಹೆಜ್ಜೆಗಳನ್ನು ಹಾಕಿದುವು. ಮುಲುಕ್ ದೋಲ್, ಗೋಲಿಯಾಮ್ ದೋಲ್ ಮತ್ತು ಮಾರ್ಕೋವ್ ಗ್ರಾಮಗಳ ಸಂಯುಕ್ತ ಸಹಕಾರಿ ಕೃಷೀವಲಯದತ್ತ ವೈದಾನದ ರಸ್ತೆಯೊಳಗಿಂದ ಕುದುರೆಗಳು ಓಡತೊಡಗಿದ್ದವು.

ಅನು:- ವೆಂಕಟರಾಜ್.

ರೂ. 2000ದ ಪಾರ್ಟಿ ನಿಧಿಗೆ ಸಹಾಯ ನೀಡಿರಿ

ಕರ್ನಾಟಕ ಪ್ರಾಂತ ಕಮ್ಯೂನಿಸ್ಟ್ ಪಾರ್ಟಿಯ (ಕಳೆದ) ಸಮ್ಮೇಳನದಲ್ಲಿ ಪ್ರಾಂತ ಸಮಿತಿಗೆ ರೂ. 2,000ದ ನಿಧಿಯನ್ನು ಕೂಡಿಸಬೇಕೆಂದು ಕರೆ ಕೊಡಲಾಗಿತ್ತು. ಈ ವರೆಗೆ ರೂ. 450 ಮಾತ್ರ ವಸೂಲಾಗಿದೆ. ಅದರ ವಿವರ ಈ ಕೆಳಗಿನಂತಿದೆ:

ಜಿಲ್ಲೆ	ಮೊಬಲಗು
ದ ಕನ್ನಡ .	200-0-0
ಶಿವಮೊಗ್ಗ .	85-0-0
ಕೋಲಾರ .	10-0-0
ಚಿತ್ರದುರ್ಗ .	50-0-0
ಚಿಕ್ಕಮಗಳೂರು .	50-0-0
ಕೊಡಗು .	10-0-0
ಶಂಕರ ಕಪ್ಪಣ್ಣವರ, ಸೌಂದತ್ತಿ, ಬೆಳಗಾಂ ಜಿಲ್ಲೆ .	5-0-0
ಪಂಚಾಕ್ಷರಿ ಮತ್ತಿತರ ಹಾವೇರಿಯ ಗೆಳೆಯರು	40-0-0
	450-0-0

ಪ್ರಾಂತ ಸಮಿತಿಯು ತನ್ನ ಜವಾಬ್ದಾರಿಯನ್ನು ನಿರ್ವಹಿಸಲು ಈ ನಿಧಿಯನ್ನು ಕೂಡಿಸುವುದು ಅಗತ್ಯವಾಗಿದೆ. ಈಗಿನ ಪರಿಸ್ಥಿತಿಯಲ್ಲಿ ಇದೇನೂ ಕಷ್ಟವಾದದ್ದಲ್ಲ. ನಮ್ಮ ರಾಜಕೀಯ ಜೀವನದಲ್ಲಿ ಪಾರ್ಟಿಗಿರುವ ಸ್ಥಾನ, ಅದರ ಚಟುವಟಿಕೆ, ಅದು ನಡೆಸುತ್ತಿರುವ ಜನತೆಯ ಸಂಘಟನೆ ಮತ್ತು ಹೋರಾಟಗಳ ಪರಿಣಾಮವಾಗಿ ಎಲ್ಲ ವಿಭಾಗದ ಜನತೆಯೂ ನಮಗೆ ಬೆಂಬಲ ನೀಡುವುದು ಖಂಡಿತ. ಅದ್ದರಿಂದ ಎಲ್ಲ ಪಾರ್ಟಿ ಸದಸ್ಯರೂ, ಪಾರ್ಟಿ ಹಿತೈಷಿಗಳೂ ಪಾರ್ಟಿಯ ತೀರ್ಮಾನವನ್ನು ಯಶಸ್ವಿಗೊಳಿಸಲು ಸಹಕರಿಸಬೇಕೆಂದು ವಿನಂತಿಸುತ್ತೇವೆ.

REG. No. M 6867

Edited Printed and Published by C. R. Krishna Rao, at Janashakthi Printers
L—59, K. V. Temple St., Sultanpet Bangalore—2 phone: 3810